ಜನವರಿ 11, 2026

41ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೋಲೀಸ್ ನ್ಯೂಸ್

2019

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## ಮೂರು ಕೋಟಿ ರೂ. ಜೀವವಿಮೆ ಹಣಕ್ಕಾಗಿ

# ಹೆತ್ತ ತಂದೆಗೆ ಹಾವು ಕಚ್ಚಿಸಿ ಹತ್ಯೆಗೈದರು!





ಹೀಗೂ ಉಂಟೇ?!



## ಕೊಡಗಿನಲ್ಲಿ ಲಾರಿ ಡ್ರೈವರ್ ಕಗ್ಗೊಲೆ!

## ಕೆಲಸ ಕೊಡಿಸ್ತೀವಿ ಅಂತ ನಂಬಿಸಿ ಲಕ್ಷ ಲಕ್ಷ ನುಂಗಿದ ಕಿಲಾಡಿ ಜೋಡಿ!





## ಪ್ರೇಯಸಿಗೆ ಕಣ್ಣು ಹಾಕಿದವನನ್ನು ಅವಳೆದುರೇ ಕೊಂದ!

## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಕ್ರೀಡೆ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಆಂಗ್ಲ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)

**ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......**



## ಲಯನ್ ಎಂ. ಮಲ್ಲಿಕಾರ್ಜುನಯ್ಯ

**ಸಂಸ್ಥಾಪಕ ಸಂಪಾದಕರು**

**ಜನನ : 29-03-1954 ಮರಣ : 22-11-2005**

**ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು**

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು - 1999
- ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ ಬಸವೇಶ್ವರನಗರ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಗೌರವಾಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'-1999**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯೂರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'-2004**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

**'ಪತ್ರಿಕೋದ್ಯಮಿ ಶಿವರತ್ನ'-2004**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'-2005**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'-2005**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'-1994**

# 'ಪೊಲೀಸ್ ನ್ಯೂಸ್' - ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ 1998ರ ಮಧ್ಯರಾತ್ರಿ ಸ್ವಾತಂತ್ರ್ಯೋತ್ಸವ ಆಚರಿಸಿದ್ದು...

ಅವತ್ತು ಆಗಸ್ಟ್ 14,1998. 'ಪೊಲೀಸ್ ನ್ಯೂಸ್' ವಾರಪತ್ರಿಕಾ ಬಳಗಕ್ಕೆ ಮರೆಯಲಾಗದ ದಿನ.

ಅವತ್ತು ನಾವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಮಧ್ಯರಾತ್ರಿ ತ್ರಿವರ್ಣ ಧ್ವಜ ಹಾರಿಸಿ ಸ್ವಾತಂತ್ರ್ಯೋತ್ಸವವನ್ನು ಆಚರಿಸಿದ್ದೆವು. ಅಂಥ ಮಧ್ಯರಾತ್ರಿ ನಮ್ಮೊಡನೆ ಅಂದಿನ ಸಚಿವೆ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಹಾಜರಿದ್ದರು ಎಂಬುದು ನಿಜಕ್ಕೂ ಸೋಜಿಗದ ಸಂಗತಿಯೇ. ನಮಗೆ ಅವತ್ತು ನಮ್ಮ ಸಂಪಾದಕರಾದ



ಶ್ರೀ ಎಂ. ಮಲ್ಲಿಕಾರ್ಜುನಯ್ಯನವರು ಅಂಥ ಅವಕಾಶ ಕಲ್ಪಿಸಿ ಕೊಡುತ್ತಾರೆ ಅಂತಲೇ ತಿಳಿದಿರಲಿಲ್ಲ. ಅಂದು ನಾವು ಎಂದಿನಂತೆ ಕರ್ತವ್ಯನಿರತರಾಗಿದ್ದಾಗ, ಸಂಪಾದಕರು ಕಚೇರಿಗೆ ಆಗಮಿಸಿ... ಎಲ್ಲರೂ ಸಿದ್ದವಾಗಿರಿ, ಇಂದು ರಾತ್ರಿ ಸ್ವಾತಂತ್ರ್ಯೋತ್ಸವ ಆಚರಿಸುವುದಿದೆ.... ಎಂದಾಗ ಎಲ್ಲರೂ ಕಕ್ಕಾಬಿಕ್ಕಿ. ಸ್ವಾತಂತ್ರ್ಯ ದಿನಾಚರಣೆ ನಾಳೆ ಅಲ್ವಾ ಆಗಸ್ಟ್ 15. ಇಂದೇ ಹೇಗೆ.... ಅಂತೆಲ್ಲ ಪಿಸುಗುಟ್ಟಿಕೊಂಡೆವು. ಆಗ 'ಪೊಲೀಸ್ ನ್ಯೂಸ್' ಕಚೇರಿ ಸಿಟಿಮಾರುಕಟ್ಟೆಯ ಅಪ್ಸರಾ ಪರಿಮಳ ಟಾಕೀಸ್ ಪಕ್ಕದ ದೊಡ್ಡಣ್ಣ ಶೆಟ್ಟರ ಬಿಲ್ಡಿಂಗ್‌ನಲ್ಲಿತ್ತು. ಈವಾಗ ಅಣ್ಣಯ್ಯ ಸ್ಟುಡಿಯೋ ಇದೆಯಲ್ಲ ಅದರ ಮೇಲ್ಭಾಗದ ಮಹಡಿ. ಒಳ್ಳೆ ಸೆಂಟರ್ ಪಾಯಿಂಟ್. ನಮ್ಮ ಸಂಪಾದಕರು ಸ್ವಲ್ಪ ಹೊತ್ತಿಗೆ ಮೀಟಿಂಗ್ ಏರ್ಪಡಿಸಿ, ಕನ್ನಡ ಮತ್ತು ಸಂಸ್ಕೃತಿ ಸಚಿವೆ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರೊಂದಿಗೆ ಮಾತಾಡಿಕೊಂಡು ಬಂದಿದ್ದೇನೆ... ಇಲಾಖೆಯ ಸಹಯೋಗದಲ್ಲಿ ನಾವು ಇಂದು ಮಧ್ಯರಾತ್ರಿಯೆ ಬಾವುಟ ಹಾರಿಸಿ ಸ್ವಾತಂತ್ರ್ಯೋತ್ಸವ ಆಚರಿಸೋಣ.... ನಮ್ಮ ಜೊತೆಗೆ ಶಾಲಾ ಮಕ್ಕಳು ಇರುತ್ತಾರೆ, ಅದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆ ಮಾಡಿದ್ದೇನೆ... ಎಂದರು. ಅವರು ಹೇಳಿದ ಮೇಲೆ ಮುಗೀತು. ದೂಸ್ರಾ ಮಾತೇ ಇಲ್ಲಾ. ರಾತ್ರಿ 8 ಗಂಟೆಗೆಲ್ಲ ಕಾರ್ಯಕ್ರಮ ಆರಂಭವಾಯಿತು. ಕನ್ನಡ ಮತ್ತು ಸಂಸ್ಕೃತಿ ಸಚಿವೆ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, ಸೂಪರ್ ಕಾಪ್ ಸಾಂಗ್ಲಿಯಾನ, ಮತ್ತಿತರೇ ಗಣ್ಯಾತಿ ಗಣ್ಯರೆಲ್ಲ ಆಗಮಿಸಿದ್ದರು. ವಿವಿಧ ಶಾಲೆಗಳಿಂದ ಪ್ರತಿಭಾವಂತ ಮಕ್ಕಳನ್ನು ಕರೆಸಲಾಗಿತ್ತು.

☞ 3

# ಪೊಲೀಸ್ ಅಧಿಕಾರಿಯ ತಂದೆಯ ನೋವಿನ ನುಡಿಗಳಲ್ಲಿ ಬಯಲಾದ ಸತ್ಯಗಳು...



ಸಂಪಾದಕ
**ಎಂ. ರಾಹುಲ್**

**ಒಂ**ದು ಕಡೆ ಅಧಿಕಾರ ಸ್ವೀಕಾರದ ಸಂಭ್ರಮ, ಇನ್ನೊಂದೆಡೆ ಕೆಲವೇ ಗಂಟೆಗಳಲ್ಲಿ ಭುಗಿಲೆದ್ದ ಗಲಭೆ, ಮರುದಿನವೇ ಅಮಾನತು ಶಿಕ್ಷೆ! ಬಳ್ಳಾರಿಯ ನೂತನ ಎಸ್‌ಪಿ ಪವನ್ ನೆಜ್ಜೂರ್ ಅವರ ವೃತ್ತಿಜೀವನದ 24 ಗಂಟೆಗಳು ಒಂದು ರೋಚಕ ಚಿತ್ರಕಥೆಯಂತಿದ್ದವು!

ಶಾಸಕ ಜನಾರ್ಧನ ರೆಡ್ಡಿ ಮತ್ತು ಕಾಂಗ್ರೆಸ್ ನಾಯಕ ಭರತ್ ರೆಡ್ಡಿ ಬೆಂಬಲಿಗರ ನಡುವಿನ ಬ್ಯಾನರ್ ಸಂಘರ್ಷವು ಹಿಂಸಾಚಾರಕ್ಕೆ ತಿರುಗಿ, ರಾಜ್ಯಾದ್ಯಂತ ಆತಂಕ ಸೃಷ್ಟಿಸಿತು. ಈ ರಾಜಕೀಯ ಗದ್ದಲದ ಬೆನ್ನಲ್ಲೇ, ಕರ್ತವ್ಯ ನಿಭಾಯಿಸಿದ ಅಧಿಕಾರಿಯ ಅಮಾನತು ಇನ್ನಷ್ಟು ಗೊಂದಲಕ್ಕೆ ಕಾರಣವಾಯಿತು. ಇದರ ಬೆನ್ನಲ್ಲೇ ಧಕ್ಷ ಪೊಲೀಸ್ ಅಧಿಕಾರಿ ಪವನ್ ನೆಜ್ಜೂರ್ ಆತ್ಮಹತ್ಯೆಗೆ ಯತ್ನಿಸಿದರು ಎಂಬ ಆಘಾತಕಾರಿ ವದಂತಿ ಎಲ್ಲೆಡೆ ಹಬ್ಬಿತ್ತು!

ಈ ಎಲ್ಲಾ ವದಂತಿಗಳ ಬಿರುಗಾಳಿಯ ನಡುವೆ, ಇದೀಗ ಪವನ್ ಅವರ ತಂದೆ, ಹಿರಿಯ ಐಪಿಎಸ್ ಅಧಿಕಾರಿ ಉದಯಶಂಕರ್ ನೆಜ್ಜೂರ್ ಅವರು ಮೌನ ಮುರಿದಿದ್ದಾರೆ. ಓರ್ವ ಹಿರಿಯ ಅಧಿಕಾರಿಯಾಗಿ, ನೋವಿನಿಂದ ನುಡಿದ ತಂದೆಯಾಗಿ, ತಮ್ಮ ಮಗನ ಗೌರವವನ್ನು ರಕ್ಷಿಸಲು ಮತ್ತು ಸತ್ಯವನ್ನು ಸಮಾಜದ ಮುಂದಿಡಲು ಮುಂದಾಗಿರುವ ಅವರ ಮಾತುಗಳು ಪ್ರಕರಣದ ಹಿಂದಿನ ಪ್ರಮುಖ ಸತ್ಯಗಳನ್ನು ನಮ್ಮ ಮುಂದೆ ತೆರೆದಿಟ್ಟಿವೆ.

ಎಸ್‌ಪಿ ಪವನ್ ನೆಜ್ಜೂರ್ ಅವರು ಜನವರಿ 1 ರಂದು ಬಳ್ಳಾರಿಯಲ್ಲಿ ಅಧಿ ಕಾರ ವಹಿಸಿಕೊಂಡಿದ್ದರು. ಸಂಪ್ರದಾಯದಂತೆ ಹಿರಿಯ ಅಧಿಕಾರಿಗಳನ್ನು ಭೇಟಿಯಾಗಿ, ತಾವು ಒಂದು ದಶಕ ಸೇವೆ ಸಲ್ಲಿಸಿದ್ದ ಲೋಕಾಯುಕ್ತ ಪೊಲೀಸರ ಬೀಳ್ಕೊಡುಗೆ ಸ್ವೀಕರಿಸಿ ಕರ್ತವ್ಯಕ್ಕೆ ಅಣಿಯಾಗುತ್ತಿದ್ದಂತೆಯೇ, ಗಲಭೆಯ ಸುದ್ದಿ ಬಂದೆರಗಿತು. ಅಧಿಕಾರ ವಹಿಸಿಕೊಂಡ ಕೆಲವೇ ಗಂಟೆಗಳಲ್ಲಿ ಈ ಅನಿರೀಕ್ಷಿತ ಘಟನೆ ಸಂಭವಿಸಿತ್ತು. ಸುದ್ದಿ ತಿಳಿಯುತ್ತಿದ್ದಂತೆ ಅವರು ತಕ್ಷಣವೇ ಸ್ಥಳಕ್ಕೆ ಧಾವಿಸಿ ಪರಿಸ್ಥಿತಿಯನ್ನು ನಿಭಾಯಿಸಲು ಮುಂದಾದರು. ಯಾವುದೇ ಅಧಿಕಾರಿಗೆ ಇದೊಂದು ಅಗ್ನಿಪರೀಕ್ಷೆಯ ಸಂದರ್ಭ. ಆದರೆ, ಈ ಪರೀಕ್ಷೆಯಲ್ಲಿ ಧಕ್ಷತೆಯಿಂದ ಕಾರ್ಯನಿರ್ವಹಿಸಿದ್ದೇ ಅವರಿಗೆ ಮುಳುವಾಗಿದ್ದು ವಿಪರ್ಯಾಸ!

ಓರ್ವ ತಂದೆಯಾಗಿ ತಮ್ಮ ಮಗನ ವೃತ್ತಿಪರತೆಯ ಬಗ್ಗೆ ಹೆಮ್ಮೆಯಿಂದ ಮಾತನಾಡಿರುವ ಉದಯಶಂಕರ್, 'ಐಪಿಎಸ್ ಅಧಿಕಾರಿಯಾಗಿರುವ ನನ್ನ ಪುತ್ರ ಪವನ ನೇಜ್ಜೂರು ಕರ್ನಾಟಕ ಪೊಲೀಸ್ ಇಲಾಖೆಯಲ್ಲಿ ಶಿಸ್ತು, ಕಾರ್ಯಕ್ಷಮತೆ ಹಾಗೂ ಕಾನೂನು ಪಾಲನೆಗೆ ಬದ್ಧನಾಗಿ ಕೆಲಸ ಮಾಡುತ್ತಿದ್ದಾನೆ ಎಂಬ ಹೆಮ್ಮೆ ನಮಗಿದೆ' ಎಂದು ಹೇಳಿದ್ದಾರೆ. ಗಲಭೆಯ ಸಂದರ್ಭದಲ್ಲೂ ಪವನ್ ಅವರು ತಮ್ಮ ಜವಾಬ್ದಾರಿಯನ್ನು ಮರೆತಿಲ್ಲ. ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದ ನಂತರವೂ, ಮೃತಪಟ್ಟ ವ್ಯಕ್ತಿಯ ಅಂತ್ಯಕ್ರಿಯೆಯ ಬಂದೋಬಸ್ತ್ ವ್ಯವಸ್ಥೆಗಳನ್ನು ನೋಡಿಕೊಳ್ಳುತ್ತಾ ಬೆಳಗಿನ ಜಾವದವರೆಗೂ ಕರ್ತವ್ಯದಲ್ಲಿದ್ದರು. ಇದು ಕೇವಲ ಒಬ್ಬ ಅಧಿ ಕಾರಿಯ ಕಥೆಯಲ್ಲ; ಕರ್ತವ್ಯ ನಿಷ್ಠೆಗೆ ಪ್ರಶಂಸೆಯ ಬದಲು ಶಿಕ್ಷೆ ಸಿಕ್ಕಾಗ ವ್ಯವಸ್ಥೆಯ ಮೇಲಿನ ನಂಬಿಕೆಯೇ ಅಲುಗಾಡುವ ಕಥೆಯಿದು.

ಈ ಪ್ರಕರಣದ ಅತ್ಯಂತ ಸೂಕ್ಷ್ಮ ಮತ್ತು ನೋವಿನ ಅಂಶವೆಂದರೆ ಪವನ್ ಅವರ ಆತ್ಮಹತ್ಯೆಯ ಯತ್ನದ ವದಂತಿ. ಈ ಸುದ್ದಿಯನ್ನು ಅವರ ತಂದೆ ಸ್ಪಷ್ಟವಾಗಿ ಮತ್ತು ದೃಢವಾಗಿ ಅಲ್ಲಗಳೆದಿದ್ದಾರೆ. ಅನಿರೀಕ್ಷಿತ ಅಮಾನತಿನಿಂದ 'ಆತನಿಗೆ ಸಹಜವಾಗಿ ಬೇಸರ ಮೂಡಿಸಿ ಆಘಾತಕ್ಕೆ ಒಳಗಾಗಿದ್ದು ಹೌದೇ ಹೊರತು, ಅವರು ತಮ್ಮ ಪ್ರಾಣವನ್ನು ಅಂತ್ಯಗೊಳಿಸುವ ಪ್ರಯತ್ನವನ್ನು ಮಾಡಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ. ಇಂತಹ 'ಕಪೋಲಕಲ್ಪಿತ ವಿಷಯಗಳು' ಮತ್ತು ಸುಳ್ಳು ವದಂತಿಗಳು ತಮ್ಮ ಕುಟುಂಬಕ್ಕೆ 'ಬೇಸರ ಹಾಗೂ ಮಗನ ಮರ್ಯಾದೆ, ಭವಿಷ್ಯದ ಬಗ್ಗೆ ಅತ್ಯಂತ ಆತಂಕ ಮೂಡಿಸಿದೆ' ಎಂದು ಅವರು ತಮ್ಮ ನೋವನ್ನು ತೋಡಿಕೊಂಡಿದ್ದಾರೆ. ಯಾವುದೇ ಕಾರಣಕ್ಕೂ ನನ್ನ ಪುತ್ರ ಬದುಕು ಅಂತ್ಯಗೊಳಿಸುವ ಪ್ರಯತ್ನ ಮಾಡಿಲ್ಲ.



ದಕ್ಷ ಎಸ್‌ಪಿ ನೆಜ್ಜೂರ್ ಮತ್ತವರ ತಂದೆ ಉದಯ ಶಂಕರ್

ಒಬ್ಬ ತಂದೆಯು ತನ್ನ ಮಗ ಆತ್ಮಹತ್ಯೆ ಮಾಡಿಕೊಂಡಿಲ್ಲ ಎಂದು ಸಾರ್ವಜನಿಕವಾಗಿ ಸ್ಪಷ್ಟನೆ ನೀಡಬೇಕಾದ ಸ್ಥಿತಿ ಎಷ್ಟು ನೋವಿನದ್ದು ಎಂಬುದನ್ನು ಊಹಿಸಲೂ ಅಸಾಧ್ಯ. ಸೂಕ್ಷ್ಮ ಸಂದರ್ಭಗಳಲ್ಲಿ ಹರಡುವ ಇಂತಹ ಸುಳ್ಳು ಸುದ್ದಿಗಳು ಎಷ್ಟು ಕ್ರೂರವಾಗಿರಬಹುದು ಎಂಬುದಕ್ಕೆ ಈ ಘಟನೆಯೇ ಸಾಕ್ಷಿಯಾಗಿದೆ.

ತಮ್ಮ ಮಗನ ಮಾನಸಿಕ ಸ್ಥಿತಿಯ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಉದಯಶಂಕರ್ ನೆಜ್ಜೂರ್, ಸಾರ್ವಜನಿಕರಲ್ಲಿ ಸುಳ್ಳು ವದಂತಿಗಳನ್ನು ಹರಡದಂತೆ ಮನವಿ ಮಾಡಿದ್ದಾರೆ. ಜೊತೆಗೆ, ಆಘಾತದಲ್ಲಿರುವ ತನ್ನ ಮಗನಿಗೆ 'ಕೊಂಚ ವಿಶ್ರಾಂತಿಯ ಅಗತ್ಯ ಇದೆ' ಎಂದು ಕೋರಿದ್ದಾರೆ. ಅವಮಾನತಿನಿಂದ ನೋವಾಗಿದ್ದರೂ, ತಮ್ಮ ಮಗ ಸರ್ಕಾರದ ಆದೇಶಕ್ಕೆ ಬದ್ಧನಾಗಿದ್ದಾನೆ ಎಂಬುದನ್ನು ಅವರು ಸ್ಪಷ್ಟಪಡಿಸಿದ್ದಾರೆ. 'ಅದೇನಿದ್ದರೂ ನನ್ನ ಪುತ್ರ ಐಪಿಎಸ್ ಅಧಿಕಾರಿ ಪವನ ನೆಜ್ಜೂರ್ ಒಬ್ಬ ಸರ್ಕಾರಿ ಅಧಿ ಕಾರಿಯಾಗಿ ಸರ್ಕಾರದ ಆದೇಶವನ್ನು ಶಿರಸಾ ಪಾಲಿಸಿದ್ದರಲ್ಲಿ ಅನುಮಾನವೇ ಇಲ್ಲ' ಎಂದು ಅವರು ಹೇಳಿದ್ದಾರೆ. ಅಂತಿಮವಾಗಿ, ಸರ್ಕಾರಕ್ಕೂ ಒಂದು ವಿನಮ್ರ ಕೋರಿಕೆಯನ್ನು ಸಲ್ಲಿಸಿದ್ದಾರೆ. ಓರ್ವ ದಕ್ಷ ಅಧಿ ಕಾರಿಯ ತಂದೆಯಾಗಿ ನಿಮ್ಮೆಲ್ಲರಲ್ಲಿ ಮನವಿಸುವದರ ಜೊತೆಗೆ ನನ್ನ ಪುತ್ರನ ಅಮಾನತು ಕುರಿತು ಸರ್ಕಾರ ಮರುಪರಿಶೀಲನೆ ನಡೆಸಲು ವಿನಮ್ರವಾಗಿ ಕೋರುತ್ತೇನೆ ಎಂದು ಉದಯಶಂಕರ್ ನೆಜ್ಜೂರು ಮನವಿ ಮಾಡಿದ್ದಾರೆ.

ಒಟ್ಟಿನಲ್ಲಿ, ಒಬ್ಬ ತಂದೆ ಮುಂದೆ ಬಂದು ವದಂತಿಗಳ ದಟ್ಟನೆಯನ್ನು ಸರಿಸಿ, ಸತ್ಯದ ಬೆಳಕನ್ನು ಚೆಲ್ಲಿದ್ದಾರೆ. ತಮ್ಮ ಮಗನ ಕರ್ತವ್ಯನಿಷ್ಠೆ, ಆತನ ನೋವು ಮತ್ತು ಕುಟುಂಬದ ಆತಂಕವನ್ನು ಜಗತ್ತಿನ ಮುಂದಿಡುವ ಮೂಲಕ, ಅವರು ಹಾನಿಕಾರಕ ಸುಳ್ಳುಗಳಿಗೆ ಅಂತ್ಯ ಹಾಡಿದ್ದಾರೆ. ಆದರೆ ಈ ಪ್ರಕರಣವು ನಮ್ಮೆಲ್ಲರನ್ನೂ ಒಂದು ಗಂಭೀರ ಪ್ರಶ್ನೆಯನ್ನು ಕೇಳುವಂತೆ ಮಾಡುತ್ತದೆ: ತನ್ನ ಮಗನ ವೃತ್ತಿಪರತೆಯನ್ನು ಮತ್ತು ಗೌರವವನ್ನು ಕಾಪಾಡಲು ಒಬ್ಬ ಹಿರಿಯ ಐಪಿಎಸ್ ಅಧಿಕಾರಿಯೇ ಸಾರ್ವಜನಿಕವಾಗಿ ಮನವಿ ಮಾಡಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾದರೆ, ಅದು ನಮ್ಮ ವ್ಯವಸ್ಥೆಯ ಯಾವ ವೈಫಲ್ಯವನ್ನು ಎತ್ತಿ ತೋರಿಸುತ್ತದೆ?

ನಿಮಗೆಲ್ಲ ಗೊತ್ತಿರುವಂತೆ, ಸಿಎಂ ಸಿದ್ದರಾಮಯ್ಯ ಈ ಹಿಂದೆ ಕೂಡ ದುಡುಕಿ ಭರಮನಿ ಅವರನ್ನು ಅವಮಾನಿಸಿದ್ದರು. ಬಳಿಕ ಕ್ಷಮೆಯಾಚಿಸಿ ಬೆಳಗಾವಿ ಮಹಾನಗರದ ಕಮಿಷನರ್ ಆಗಿ ನೇಮಿಸಿ ಸಾರ್ವಜನಿಕ ಪ್ರೀತಿಗೆ ಪಾತ್ರರಾಗಿದ್ದರು. ಇಷ್ಟಾದರೂ ಸಿಎಂ ಕೈ ಕೆಳಗೆ ಕಾರ್ಯ ನಿರ್ವಹಿಸುವ ಗೃಹ ಇಲಾಖೆ ಪಾಠ ಕಲಿತಿಲ್ಲ... ಎಂಬುದು ಪವನ್ ನೆಜ್ಜೂರ್ ಅಮಾನತ್ತು ಆದೇಶದಿಂದ ರುಜುವಾತು ಆಗಿದೆ!!

-ಸಂ.

2 ☜

ಆ ಮಕ್ಕಳ ಜೊತೆ ಸೇರಿ ನಾಡಗೀತೆ ಮೊಳಗಿಸುವ ಮೂಲಕ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮಕ್ಕೆ ಚಾಲನೆ ಕೊಟ್ಟೆವು. ಶಾಲಾ ಮಕ್ಕಳು ಸ್ವಾತಂತ್ರ್ಯ ಹೋರಾಟಗಾರರ ವೇಷಭೂಷಣ ತೊಟ್ಟು ತಮ್ಮ ತಮ್ಮ ಪ್ರತಿಭೆ ಮೆರೆದರು. ಮಹಾತ್ಮಾ ಗಾಂಧಿ, ಬೋಸ್, ರಾಜಾ ರಾಮ್ ಮೋಹನ್ ರಾಯ್, ಖಾನ್ ಅಬ್ದುಲ್ ಗಫರ್ ಖಾನ್, ಅನಿಬೆಸೆಂಟ್... ಮುಂತಾದ ಹೋರಾಟಗಾರರ ಕುರಿತು ನಾಟಕೋತ್ಸವ ನಡೆಯಿತು. ನೆರೆದಿದ್ದ ಗಣ್ಯರು ಮತ್ತು ಸಭೀಕರು 'ಪೊಲೀಸ್ ನ್ಯೂಸ್'ನಂಥ ಕ್ರೈಂ ಪತ್ರಿಕೆ ಇಂತಹ ಅಭೂತಪೂರ್ವ ಕಾರ್ಯಕ್ರಮ ನಡೆಸಿದ್ದಕ್ಕೆ ಭೇಷ್ ಎಂದರು. ಭಾಷಣಕಾರರು ನಮ್ಮ ಸಂಪಾದಕರ ಕಾರ್ಯವೈಖರಿಯನ್ನು ಹಾಡಿ ಹೊಗಳಿದರು. ಎಂದಿನಂತೆ 'ಕನ್ನಡಪ್ರಭ'ದ ಹಿರಿಯ ಜಗಳೂರು ಲಕ್ಷ್ಮಣರಾವ್ ನಿರೂಪಣೆ ಸಾರಥ್ಯ ವಹಿಸಿದ್ದರು. ಆ ದಿನಗಳಲ್ಲಿ ನಮ್ಮ ಸಂಪಾದಕರಿಗೂ ಜಗಳೂರು ಲಕ್ಷ್ಮಣ ರಾಯರಿಗೂ ಅವಿನಾಭಾವ ನಂಟಿತ್ತು. ಏನೇ ಮಾಡಿದರೂ ಇಬ್ಬರೂ ಜೊತೆ ಜೊತೆಯಲ್ಲೇ ಇರುತ್ತಿದ್ದರು. ಅವತ್ತು ಆಗಸ್ಟ್ 14ರ ಮಧ್ಯರಾತ್ರಿಯೇ, ಸರ್ಕಾರ ಆಚರಿಸುವ ಮುನ್ನವೇ ನಾವೇ ತ್ರಿವರ್ಣ ಧ್ವಜ ಹಾರಿಸಿ ಸ್ವಾತಂತ್ರ್ಯೋತ್ಸವ ಆಚರಿಸಿದ್ದು ಇಂದಿಗೂ ಮರೆಯಲಾಗದ ಸವಿನೆನಪು...






# ಕೊಡಗಿನಲ್ಲಿ ಪರಸ್ತ್ರೀ ವ್ಯಾಮೋಹಕ್ಕೆ ಬಿದ್ದು ಹೆಣವಾದ ಲಾರಿ ಡ್ರೈವರ್!



ಆರೋಪಿಗಳಾದ ಕಾವ್ಯ ಹಾಗೂ ಪೂರ್ಣಚಂದ್ರ

**ಹೊಸ ವರ್ಷದ ಮೋಜು ಮಸ್ತಿಗೆ ತನ್ನಿಂದ ದೂರವಿದ್ದ ಹಳೆಯ ಪ್ರೇಯಸಿ ಮನೆಗೆ ಹೋಗಿ ಆಕೆಯನ್ನು ತನ್ನೊಂದಿಗೆ ಬಾ ಎಂದು ಕರೆದು ಗಲಾಟೆ ಮಾಡಿದ ಲಾರಿ ಡ್ರೈವರ್ ಹೆಣವಾಗಿ ಹೋಗಿದ್ದಾನೆ. ಅಲ್ಲಿಗೆ ಅನೈತಿಕ ಸಂಬಂಧವೊಂದು ಕೊಲೆಯಲ್ಲಿ ಅಂತ್ಯವಾಗಿದೆ. ಇಂತಹದೊಂದು ಘಟನೆ ದಕ್ಷಿಣ ಕೊಡಗಿನ ಪೊನ್ನಂಪೇಟೆ ತಾಲೂಕಿನ ಹಾತೂರು ಕುಂದ ರಸ್ತೆಯಲ್ಲಿ ನಡೆದಿದೆ. ಲಾರಿಡ್ರೈವರ್‌ನ ಕಾಮುಕತನಕ್ಕೆ ಹೆಂಡತಿ, ಮಕ್ಕಳು ಕಂಗಾಲಾಗಿದ್ದಾರೆ... ಇಷ್ಟಕ್ಕೂ ಆಗಿದ್ದೇನು?**

**ಕೊಡಗು**

ಬಿ.ಎಂ. ಲವಕುಮಾರ್




ಕೊಲೆಯಾದ ನವಾಜ್

ಅನೈತಿಕ ಸಂಬಂಧಗಳು ಯಾರನ್ನೂ ಸುಖವಾಗಿಟ್ಟ ಉದಾಹರಣೆಗಳಿಲ್ಲ. ಎಚ್ಚೆತ್ತುಕೊಳ್ಳದೆ ಹೋದರೆ ಅಥವಾ ಎಲ್ಲೆ ಮೀರಿದರೆ ಅವು ಕೊಲೆಯಲ್ಲಿಯೇ ಅಂತ್ಯವಾಗಿ ಬಿಡುತ್ತವೆ. ಅನೈತಿಕ ಸಂಬಂಧದಿಂದ ಕೊಲೆಗಳಾಗಿವೆ. ಸಂಸಾರಗಳು ಒಡೆದು ಛಿದ್ರವಾಗಿವೆ. ಆದರೂ ಜನ ಬುದ್ಧಿ ಕಲಿಯುತ್ತಿಲ್ಲ. ತನಗೊಂದು ಸಂಸಾರವಿದೆ ಎಂದು ಗೊತ್ತಿದ್ದರೂ ಕಾಮದ ಮತ್ತಿನಲ್ಲಿ ತೇಲಾಡಿ ಅಲ್ಲಿ ಸಿಗುವ ಕ್ಷಣಿಕ ಸುಖವೇ ಶಾಶ್ವತ ಎಂಬಂತೆ ವರ್ತಿಸಿ ಸುಖಮಯ ಸಂಸಾರವನ್ನು ಹಾಳು ಮಾಡಿಕೊಳ್ಳುವವರೇ ಜಾಸ್ತಿ. ಇಷ್ಟಕ್ಕೂ ಹೆಣ್ಣು, ಮಣ್ಣು, ಹೊನ್ನು ಹಿಂದೆ ಬಿದ್ದವರು ಸುಖವಾಗಿ ಬದುಕಿದ್ದು ವಿರಳವೇ.

ಮನೆಯಲ್ಲಿ ಹೆಂಡತಿ ಮಕ್ಕಳು ಇದ್ದರೂ ಯಾವುದೋ ಹೆಂಗಸಿನ ಹಿಂದೆ ಬಿದ್ದು ಅವಳಿಗಾಗಿ ಹೋರಾಟ ಮಾಡಿ ಅವಳೊಂದಿಗೆ ಸುಖವಾಗಿರುತ್ತೇನೆ ಎಂದು ಹೊರಡುವವರು ಅವಳ ಸಂಸಾರವನ್ನು ಹಾಳು ಮಾಡುವುದಲ್ಲದೆ, ತಮ್ಮ ಸಂಸಾರಕ್ಕೂ ಕುತ್ತು ತರುತ್ತಾರೆ. ಕೆಲವೊಮ್ಮೆ ಅನೈತಿಕ ಸಂಬಂಧದಲ್ಲಿದ್ದ ಹೆಂಗಸರು ಇದೆಲ್ಲ ಸಾಕು ತನ್ನ ಪಾಡಿಗೆ ತಾನು ಇರೋಣವೆಂದು ಆಕೆ ದೂರವಾದರೆ ಅವಳನ್ನು ಮತ್ತೆ ತನ್ನೊಂದಿಗೆ ಸಂಬಂಧ ಹೊಂದು ಎಂದು ಪೀಡಿಸುತ್ತಾನೆ. ಹೀಗೆ ಹಿಂಸೆ ತಾಳಲಾರದೆ ಕೊಲೆಗಳಾದ ಘಟನೆಯೂ ಬಹಳಷ್ಟು ನಡೆದಿದೆ. ಇದೆಲ್ಲವನ್ನು ಗಮನಿಸಿದರೆ ಅನೈತಿಕ ಸಂಬಂಧ ಎಷ್ಟೊಂದು ಡೇಂಜರ್ ಎಂಬುದು ಗೊತ್ತಿದ್ದರೂ ಆ ಸಂಬಂಧಕ್ಕಾಗಿ ಆಸೆ ಪಡುವವರು ಇಲ್ಲದಿಲ್ಲ. ಅಂತಹವರಿಗೆ ಲಾರಿ ಡ್ರೈವರ್ ಮರ್ಡರ್ ಕೇಸ್ ಎಚ್ಚರಿಕೆಯ ಘಂಟೆಯೂ ಹೌದು.

ಇಷ್ಟಕ್ಕೂ ಕೊಡಗಿನಲ್ಲಿ ಆಗಿದ್ದೇನು? ಎಂಬುದನ್ನು ನೋಡಿದ್ದೇ ಆದರೆ ಲಾರಿಡ್ರೈವರ್‌ನ ಕಾಮಪುರಾಣ ಬಿಚ್ಚಿಕೊಳ್ಳುತ್ತದೆ. ಲಾರಿ ಓಡಿಸಿ ಸದಾ ಹೀಟ್‌ನಲ್ಲಿರುತ್ತಿದ್ದ ಈತ ಅದನ್ನು ತಣಿಸಲು ಗಂಡನಿಂದ ದೂರವಿದ್ದ ಮಹಿಳೆಯೊಬ್ಬಳ ಸಹವಾಸ ಮಾಡಿದ್ದಲ್ಲದೆ, ಆಕೆ ಮತ್ತೆ ಗಂಡನೊಂದಿಗೆ ಸಂಸಾರ ನಡೆಸಿಕೊಂಡು ಹೋದರೂ ಆಕೆಯ ಬೆನ್ನತ್ತಿ ಕಾಡಿದ್ದಲ್ಲದೆ, ತನ್ನೊಂದಿಗೆ ಬಾ ಎಂದು ಕರೆದಿದ್ದೇ ಬೀದಿ ಹೆಣವಾಗಲು ಕಾರಣವಾಗಿದೆ ಎಂದರೆ ತಪ್ಪಾಗಲಾರದು..

ಅನೈತಿಕ ಸಂಬಂಧದಿಂದ ಹೆಣವಾಗಿ ಹೋದವನ ಹೆಸರು ನವಾಜ್(39) ಹೆಂಡತಿ, ಮಕ್ಕಳೊಂದಿಗೆ ಬದುಕಿ ಬಾಳುವ ವಯಸ್ಸು ಆದರೆ ಪರಸ್ತ್ರೀ ವ್ಯಾಮೋಹಕ್ಕೆ ಬಿದ್ದವನು ಅದರಿಂದ ಹೊರ ಬರಲಾರದೆ, ಬರಲಾರದ ಲೋಕಕ್ಕೆ ಪಯಣ ಬೆಳೆಸುವಂತಾಗಿದೆ. ಗೋಣಿಕೊಪ್ಪದ



ಹರಿಶ್ಚಂದ್ರಪುರದ ನಿವಾಸಿಯಾಗಿರುವ ನವಾಜ್ ಬದುಕಿಗೆ ಲಾರಿ ಡ್ರೈವರ್ ವೃತ್ತಿ ಮಾಡಿಕೊಂಡಿದ್ದನು. ಮದುವೆಯಾಗಿ ಹೆಂಡತಿ ಮಗಳಿದ್ದರು. ಅವರನ್ನು ನೋಡಿಕೊಂಡು ತನ್ನ ಪಾಡಿಗೆ ಇದ್ದಿದ್ದರೆ ಇವತ್ತು ಹೆಣವಾಗುತ್ತಿರಲಿಲ್ಲ. ಆದರೆ ನವಾಜ್ ಮಾಡಿದ್ದೇ ಬೇರೆ.

ನವಾಜ್ ಲಾರಿ ಚಾಲಕನಾಗಿ ಕೆಲಸ ಮಾಡುತ್ತಿದ್ದಾಗ ಹಾತೂರು ಕುಂದ ರಸ್ತೆಯ ಖಾಸಗಿ ಸಂಸ್ಥೆಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಪೂರ್ಣಚಂದ್ರನ ಪತ್ನಿ ಕಾವ್ಯಳ ಪರಿಚಯವಾಗಿತ್ತು. ಅದು ಪರಿಚಯಕ್ಕಷ್ಟೇ ಸೀಮಿತ ಆಗಿದ್ದರೆ ಏನೂ ಆಗುತ್ತಿರಲಿಲ್ಲ. ಆಕೆಯೂ ಮಾನ ಮರ್ಯಾದೆಯಿಂದ ಇದ್ದಿದ್ದರೆ ಒಳ್ಳೆಯದಾಗಿರುತ್ತಿತ್ತು. ಆದರೆ ಪರಿಚಯ ದಿನಕಳೆದಂತೆ ಬೇರೆ ಹಾದಿಯತ್ತ ತಿರುಗಿತ್ತು. ಪರಿಚಯ ಕ್ರಮೇಣ ಪ್ರೇಮಕ್ಕೆ ತಿರುಗಿ ಸದ್ದಿಲ್ಲದೆ ಅನೈತಿಕ ಸಂಬಂಧ ಬೆಳೆದಿತ್ತು. ಆಕೆ ನವಾಜ್ ಗೋಸ್ಕರ ಗಂಡನನ್ನೇ ಬಿಟ್ಟು ಬರುವ ಮಟ್ಟಕ್ಕೆ ಹೋಗಿ ಬಿಟ್ಟಳು. ಹೀಗಾಗಿ ನವಾಜ್ ಕಾವ್ಯಳನ್ನು ವಿರಾಜಪೇಟೆ ಬಾಡಿಗೆ ಮನೆಯಲ್ಲಿರಿಸಿ ಅಲ್ಲಿಗೆ ಹೋಗಿ ಬರುತ್ತಿದ್ದನು. ಒಂದಷ್ಟು ದಿನಗಳ ಕಾಲ ಇದು ಮುಂದುವರೆದಿತ್ತು.





ನವಾಜ್ ಅನೈತಿಕ ಸಂಬಂಧ ಹೊಂದಿರುವ ವಿಚಾರ ಗೌಪ್ಯವಾಗಿ ಉಳಿದಿರಲಿಲ್ಲ. ಅದಾಗಲೇ ಬಯಲಾಗಿತ್ತು. ಆದರೆ ಗಂಡನ ಬಿಟ್ಟು ಬಂದಿದ್ದ ಕಾವ್ಯಗೆ ಈ ಬದುಕು ಸಾಕು ಅಂಥ ಅನಿಸಿತ್ತೇನೋ? ಆಕೆ ಮತ್ತೆ ಹಳೆಗಂಡನ ಪಾದವೇ ಗತಿ ಅಂಥ ಹಾತೂರು ಕುಂದ ರಸ್ತೆಯಲ್ಲಿದ್ದ ಗಂಡ ಪೂರ್ಣಚಂದ್ರನನ್ನು ಸೇರಿಕೊಂಡಿದ್ದಳು. ಇನ್ನು ನವಾಜ್‌ನ ಅನೈತಿಕ ಸಂಬಂಧದ ವಿಚಾರ ಬಯಲಾಗುತ್ತಿದ್ದಂತೆಯೇ ನವಾಜ್ ಕುಟುಂಬದವರಿಗೂ ಆ ಕಾವ್ಯಳಿಗೂ ದೊಡ್ಡ ಮಟ್ಟದಲ್ಲಿ ಗಲಾಟೆಗಳಾಗಿದ್ದವು. ಅದು ಪೊಲೀಸ್ ಠಾಣೆವರೆಗೂ ಹೋಗಿತ್ತು. ಈ ವೇಳೆ ಪೊಲೀಸರು ಎರಡು ಕಡೆಯವರನ್ನು ಠಾಣೆಗೆ ಕರೆಯಿಸಿ ನವಾಜ್ ಮತ್ತು ಕಾವ್ಯಗೆ ಉಗಿದು ಬುದ್ಧಿ ಹೇಳಿದ್ದರಲ್ಲದೆ, ನವಾಜ್‌ನಿಂದ ಇನ್ನು ಮುಂದೆ ಆಕೆಯ ತಂಟೆಗೆ ಹೋಗದೆ, ಅನೈತಿಕ ಸಂಬಂಧ ಮುಂದುವರೆಸದಂತೆ ಮುಚ್ಚಳಿಕೆ ಬರೆಯಿಸಿಕೊಳ್ಳಲಾಗಿತ್ತು.

ಅವತ್ತು ಸಂಸಾರದ ಗಲಾಟೆಗಳಲ್ಲಿ ಮುಚ್ಚಳಿಕೆ ಬರೆದುಕೊಟ್ಟು ಬಂದಿದ್ದ ನವಾಜ್ ನಂತರ ಹೆಂಡತಿ ಮಕ್ಕಳ ಜತೆಯಲ್ಲಿ ಬದುಕನ್ನು ಸಾಗಿಸಿಕೊಂಡು ಹೋಗಿದ್ದರೆ ಏನೂ ಆಗುತ್ತಿರಲಿಲ್ಲ. ಆದರೆ ಕಾವ್ಯಳನ್ನು ಬಿಟ್ಟು ಇರುವುದು ಕಷ್ಟವಾಗಿತ್ತು. ಹೀಗಾಗಿ ಅವಳೊಂದಿಗೆ ಮತ್ತೆ ಸೇರಬೇಕು, ಸುಖಿಸಬೇಕು ಎಂಬ ಬಯಕೆಯಾಗಿತ್ತು. ಹೀಗಾಗಿ ಹುಚ್ಚನಂತೆ ಆಡುತ್ತಿದ್ದ ಆತ ಮತ್ತೆ ಅವಳ ಬಳಿಗೆ ಹೋಗಿ ಬಾ ನನ್ನ ಜೊತೆ ಎಂದು ಕರೆದು ಗಲಾಟೆ ಮಾಡಲಾರಂಭಿಸಿದ್ದನು. ಇದು ಹೀಗೆಯೇ ಮುಂದುವರೆದಿತ್ತು. ನವಾಜ್ ಬುದ್ಧಿ ಕಲಿಯುವ ಗೋಜಿಗೆ ಹೋಗಿರಲಿಲ್ಲ. ಆದರೆ ಈ ವಿಚಾರ ಎರಡು ಕುಟುಂಬಗಳಲ್ಲಿ ದ್ವೇಷ ವೈಷಮ್ಯಕ್ಕೆ ಕಾರಣವಾಗಿತ್ತು.

ಈ ಮಧ್ಯೆ ಡಿಸೆಂಬರ್ 31ರಂದು ರಾತ್ರಿ ಇಡೀ ಜಗತ್ತು ಹೊಸ ವರ್ಷದ ಆಚರಣೆಯ ಸಂಭ್ರಮದಲ್ಲಿತ್ತು. ನವಾಜ್ ಮನೆಗೆ ಹೋಗಿ ತನ್ನ ಕುಟುಂಬದೊಂದಿಗೆ ದಿನ ಕಳೆದಿದ್ದರೆ ಆಗುತ್ತಿತ್ತು. ಆದರೆ ಆತ ಹಾಗೆ ಮಾಡಲಿಲ್ಲ ಆತ ಮನೆಗೆ ಹೋಗುವ ಬದಲಿಗೆ ತನ್ನ ಕಾರಿನಲ್ಲಿ ಗೋಣಿಕೊಪ್ಪ ನಗರದಿಂದ ರಾತ್ರಿ 11.45ರ ಸುಮಾರಿಗೆ ಹಾತೂರು ಕುಂದ ರಸ್ತೆಯಲ್ಲಿರುವ ಕಾವ್ಯಳ ಮನೆಗೆ ತೆರಳಿದ್ದಾನೆ. ಮನೆಯಲ್ಲಿದ್ದ ಕಾವ್ಯಳನ್ನು ಹೊರ ಬರುವಂತೆ ಒತ್ತಾಯಿಸಿದ್ದಾನೆ. ಈ ವೇಳೆ ಮನೆಯಲ್ಲಿದ್ದ ಗಂಡ ಪೂರ್ಣಚಂದ್ರ ಹೊರ ಬಂದು ಪ್ರಶ್ನಿಸಿದಾಗ ಇಬ್ಬರ ನಡುವೆ ಮಾತಿನ ಚಕಮಕಿ ನಡೆದು ಪರಸ್ಪರ ಹೊಡೆದಾಟ ನಡೆದು ಹೋಗಿದೆ. ಈ ವೇಳೆ ಕಾವ್ಯಳ ಗಂಡ ಪೂರ್ಣಚಂದ್ರ, ಅಶೋಕ, ಮಹೇಂದ್ರ, ಕುಮಾರ ಮೊದಲಾದವರು ನವಾಜ್‌ಗೆ ಸರಿಯಾಗಿಯೇ ತದಕಿದ್ದಾರೆ.

☞14



ಆರೋಪಿಗಳಾದ ಅಶೋಕ, ಮಹೇಂದ್ರ, ಹಾಗೂ ಕುಮಾರ

# 569 ಹೊಸ ಬಾರ್‌ಗಳಿಗೆ ಪರವಾನಗಿ! ಮತ್ತಿದರ ಹಿಂದಿನ ಆಘಾತಕಾರಿ ಸತ್ಯಗಳು!!




ಕರ್ನಾಟಕ ಸರ್ಕಾರವು 569 ಹೊಸ ಮದ್ಯದಂಗಡಿಗಳಿಗೆ ಪರವಾನಗಿ ನೀಡುವ ಮೂಲಕ, ಸಮಾಜದ ಸ್ವಾಸ್ಥ್ಯಕ್ಕಿಂತ ತನ್ನ ಬೊಕ್ಕಸ ತುಂಬಿಸಿಕೊಳ್ಳುವ ನಾಚಿಕೆಗೇಡಿನ ಕೆಲಸ ಮಾಡಿದೆ! ಒಂದು ಕಡೆ, ಸರ್ಕಾರವು ಕಲ್ಯಾಣ ಯೋಜನೆಗಳನ್ನು ನೀಡಿ ಜನರ ಹಿತ ಕಾಯುತ್ತೇವೆ ಎನ್ನುತ್ತದೆ, ಆದರೆ ಇನ್ನೊಂದು ಕಡೆ, ಅದೇ ಕುಟುಂಬಗಳನ್ನು ಹಾಳು ಮಾಡುವಂತಹ ನೀತಿಗಳನ್ನು ನೇರವಾಗಿ ಜಾರಿಗೆ ತರುತ್ತಿದೆ! ಇದರ ಹಿಂದಿನ ನಿಜವಾದ ಉದ್ದೇಶವೇನು? ಈ ನಿರ್ಧಾರದ ಮೇಲ್ನೋಟಕ್ಕೆ ಕಾಣಿಸದ, ಆದರೆ ಒಂದಕ್ಕೊಂದು ತಳಕು ಹಾಕಿಕೊಂಡಿರುವ ಕೆಲವು ಆಘಾತಕಾರಿ ಸತ್ಯಗಳನ್ನು ಈ ಲೇಖನದಲ್ಲಿ ವಿಶ್ಲೇಷಿಸೋಣ.


**ಗೃಹಲಕ್ಷ್ಮಿ ಯೋಜನೆ ಒಂದು ಕಡೆ, ಸಂಸಾರ ಹಾಳುಮಾಡುವ ಮದ್ಯ ಇನ್ನೊಂದು ಕಡೆ!...**

ಕರ್ನಾಟಕ ಸರ್ಕಾರದ ಈ ನಡೆಯ ಹಿಂದಿರುವ ಅತಿ ದೊಡ್ಡ ವಿರೋಧಾಭಾಸವಿದು. ಒಂದು ಕೈಯಲ್ಲಿ ಸರ್ಕಾರವು 'ಗೃಹಲಕ್ಷ್ಮಿ' ಯೋಜನೆಯಡಿ ಮಹಿಳೆಯರಿಗೆ ತಿಂಗಳಿಗೆ 2000 ರೂಪಾಯಿ ನೀಡುತ್ತದೆ. (ಇದರಲ್ಲಿ ಗೃಹಲಕ್ಷ್ಮಿಯರಿಗೆ ಸಿಕ್ಕಿದ್ದೆಷ್ಟೋ!)ಆದರೆ, ಮತ್ತೊಂದು ಕೈಯಲ್ಲಿ ಮದ್ಯಪಾನವನ್ನು ಉತ್ತೇಜಿಸುವ ಮೂಲಕ ಅದೇ ಮಹಿಳೆಯರ ಕುಟುಂಬಗಳಲ್ಲಿ ಕೌಟುಂಬಿಕ ಕಲಹ, ಆರ್ಥಿಕ ನಾಶ ಮತ್ತು ಹಿಂಸೆಗೆ ಕಾರಣವಾಗುತ್ತಿದೆ! ಇದು, ಒಂದು ಕೈಯಲ್ಲಿ ಕೊಟ್ಟು, ಇನ್ನೊಂದು ಕೈಯಿಂದ ಅದಕ್ಕಿಂತ ಹೆಚ್ಚಿನದನ್ನು ಕಸಿದುಕೊಂಡಂತಲ್ಲವೇ?

ಗಂಡ ಕುಡಿದು ಕುಡಿದು ಲಿವರ್ ಹಾಳಾದರೆ, ದೇಹದ ಅಂಗಾಂಗಗಳು ನಾಶವಾದರೆ, ಮತ್ತು ಕುಟುಂಬದ ನೆಮ್ಮದಿಯೇ ಮದ್ಯಪಾನದಿಂದ ಸರ್ವನಾಶವಾದರೆ, ಸರ್ಕಾರ ಕೊಡುವ ಆರ್ಥಿಕ ನೆರವಿಗೆ ಯಾವ ಅರ್ಥ ಉಳಿಯುತ್ತದೆ? ಈ ನೀತಿಯು ಮಹಿಳೆಯರ ಸಬಲೀಕರಣದ ಬದಲು, ಅವರ ಸಂಸಾರವನ್ನು ಮತ್ತಷ್ಟು ಅಧೋಗತಿಗೆ ತಳ್ಳುವ ಅಪಾಯವಿದೆ!



✍ ಹೆಚ್.ಕೆ. ಮಹದೇವ್



'ನೀವು ಏನು 24 ಸಾವಿರ ಹೆಣ್ಣುಮಕ್ಕಳು ದೇವತೆ ಸಮಾನ ಅಂತ ಹೇಳಿ ಏನು ಕೊಡ್ತಾ ಇದ್ದೀರಾ, ಅದೇ ಹೆಣ್ಣುಮಕ್ಕಳ ಕುಂಕುಮವನ್ನ ಅಳಿಸ್ತಾ ಇರುವಂತಹ ಪಾಪವನ್ನ ಮೂಟೆ ಹೊತ್ತಕೊಳ್ತಾ ಇರುವಂತಹ ಜನರು ನೀವು ಸರ್ಕಾರದವರು. ಈ ರೀತಿಯ ದ್ವಂದ್ವ ನೀತಿ ಕೇವಲ ಆರ್ಥಿಕತೆಗೆ ಸೀಮಿತವಾಗಿಲ್ಲ; ಇದು ಸರ್ಕಾರದ ನೈತಿಕ ನಿಲುವನ್ನೇ ಪ್ರಶ್ನಿಸುತ್ತದೆ.



**ಗಾಂಜಿಯವರ ಹೆಸರಿನಲ್ಲಿ ಅಧಿಕಾರ, ಆದರೆ ಅವರ ತತ್ವಗಳಿಗೆ ತಿಲಾಂಜಲಿ?**

ಕಾಂಗ್ರೆಸ್ ಪಕ್ಷವು ಮಹಾತ್ಮ ಗಾಂಜಿಯವರ ಹೆಸರನ್ನು ಮತ್ತು ಅವರ ಪರಂಪರೆಯನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತದೆ. ಆದರೆ, ಗಾಂಜಿಯವರು ಪ್ರತಿಪಾದಿಸಿದ ಪ್ರಮುಖ ತತ್ವಗಳಲ್ಲಿ ಒಂದಾದ 'ಮದ್ಯ ನಿಷೇಧ'ವನ್ನು ಸಂಪೂರ್ಣವಾಗಿ ಗಾಳಿಗೆ ತೂರಿದೆ.

ಗಾಂಧಿ ತತ್ವಗಳ ಮೇಲೆ ನಮ್ಮ ಪಕ್ಷ ನಿಂತಿದೆ ಎಂದು ಹೇಳಿಕೊಳ್ಳುವ ನಾಯಕರು, ಮದ್ಯದ ಪರವಾನಗಿಗಳನ್ನು ನೀಡುವ ಮೂಲಕ ಅವರ ಮೂಲಭೂತ ಮೌಲ್ಯಗಳನ್ನೇ ಉಲ್ಲಂಘಿಸುತ್ತಿದ್ದಾರೆ. ಈ ಮೂಲಕ, ಗಾಂಧೀಜಿಯವರ ಹೆಸರನ್ನು ಬಳಸುವ ನೈತಿಕ ಅಧಿಕಾರವನ್ನೇ ಅವರು ಕಳೆದುಕೊಳ್ಳುತ್ತಿದ್ದಾರೆ ಎಂಬುದು ಸ್ಪಷ್ಟ. ಗಾಂಜಿಯವರ ತತ್ವಗಳನ್ನು ಬದಿಗೊತ್ತಿರುವುದು ನೈತಿಕ ಅಧಃಪತನವಾದರೆ, ಈ ನೀತಿಯ ಆರ್ಥಿಕ ಪರಿಣಾಮಗಳು ಮತ್ತಷ್ಟು ವಿನಾಶಕಾರಿ.

**ಒಂದೂವರೆ ಕೋಟಿ ಲೈಸೆನ್ಸ್ ಶುಲ್ಕ: ಬಾರ್ ಮಾಲೀಕರು ಮತ್ತು ಕುಡಿಯುವವರ ಕುಟುಂಬ, ಇಬ್ಬರಿಗೂ ಸಂಕಷ್ಟ!...**

ಈ ಹೊಸ ನೀತಿಯ ಆರ್ಥಿಕ ಆಯಾಮವನ್ನು ಗಮನಿಸಿದರೆ ಮತ್ತಷ್ಟು ಆತಂಕಕಾರಿ ಅಂಶಗಳು ಬೆಳಕಿಗೆ ಬರುತ್ತವೆ. ಒಂದು ಬಾರ್ ಲೈಸೆನ್ಸ್ ಪಡೆಯಲು ಹರಾಜಿನಲ್ಲಿ ಒಂದೂವರೆ ಕೋಟಿ ರೂಪಾಯಿಗಿಂತ ಹೆಚ್ಚು ಹಣ ತೆರಬೇಕು, ಅದೂ ಕೇವಲ ಐದು ವರ್ಷಗಳ ಅವಧಿ ಗೆ ಮಾತ್ರ. ಇದರಿಂದ ಎರಡು ರೀತಿಯ ನಕಾರಾತ್ಮಕ ಪರಿಣಾಮಗಳಿವೆ:

ಒಂದು ಕಡೆ, ಇಷ್ಟು ದೊಡ್ಡ ಮೊತ್ತವನ್ನು ಕೇವಲ ಐದು ವರ್ಷಗಳಲ್ಲಿ ಪಾವತಿಸಿದ ನಂತರ ಲಾಭ ಗಳಿಸುವುದು ಹೇಗೆ ಎಂದು ಬಾರ್ ಮಾಲೀಕರ ಸಂಘದವರೇ ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಇನ್ನೊಂದು ಕಡೆ, ಈ ಭಾರೀ ವೆಚ್ಚವನ್ನು ಸರಿದೂಗಿಸಲು ಮದ್ಯದ ಮಾರಾಟ ಹೆಚ್ಚಾಗಲೇಬೇಕು. ಇದರ ಅಂತಿಮ ಬೆಲೆಯನ್ನು ತೆರುವುದು ಸಾಮಾನ್ಯ ಜನರು ಮತ್ತು ಅವರ ಕುಟುಂಬಗಳು. ಸುಲಭವಾಗಿ ಸಿಗುವ ಮದ್ಯದಿಂದ ಸಾವಿರಾರು ಸಂಸಾರಗಳು ಬೀದಿಗೆ ಬೀಳುತ್ತವೆ.

ಈ ನೀತಿಯು ಕೇವಲ ಸರ್ಕಾರದ ಬೊಕ್ಕಸವನ್ನು ತುಂಬುವ ಗುರಿ ಹೊಂದಿದೆಯೇ ಹೊರತು, ಬಾರ್ ಮಾಲೀಕರ ಅಥವಾ ಸಾರ್ವಜನಿಕರ ಕಲ್ಯಾಣವನ್ನು ಪರಿಗಣಿಸಿದಂತೆ ಕಾಣುತ್ತಿಲ್ಲ. ಸರ್ಕಾರದ ಬೊಕ್ಕಸ ತುಂಬಿಸುವ ಈ ಆತುರದಲ್ಲಿ, ಬಡವರನ್ನು ರಾಜಕೀಯ ದಾಳವಾಗಿ ಬಳಸಿಕೊಳ್ಳುವ ಅಪಾಯಕಾರಿ ತಂತ್ರವೂ ಅಡಗಿದೆ.

**ಬಡವರ ಕೈಗೆ ಬಾಟಲಿ ಕೊಟ್ಟು ಭವಿಷ್ಯವನ್ನೇ ಹಾಳುಮಾಡಲಾಗುತ್ತಿದೆ!...**

ಜೆಡಿಎಸ್, ಬಿಜೆಪಿ, ಕಾಂಗ್ರೆಸ್ ಸೇರಿದಂತೆ ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳು ಚುನಾವಣೆ ಸಮಯದಲ್ಲಿ ಬಿರಿಯಾನಿ ಮತ್ತು ಮದ್ಯವನ್ನು ಹಂಚಿ ಮತಗಳನ್ನು ಖರೀದಿಸುತ್ತವೆ ಎಂಬುದು ಒಂದು ಗಂಭೀರ ಆರೋಪ. ಈ ಅನಿಷ್ಟ ಪದ್ಧತಿಯು ವಿಶೇಷವಾಗಿ 'ಪಾಪ, ಮುಗ್ಧ ಜನರಿಗೆ ಅರಿವು ಇರುವುದಿಲ್ಲ' ಎನ್ನುವ ದುರ್ಬಲ ವರ್ಗದವರನ್ನು ವ್ಯಸನಿಗಳನ್ನಾಗಿಸುತ್ತದೆ. ಅವರನ್ನು ರಾಜಕೀಯವಾಗಿ ನಿಯಂತ್ರಿಸಲು ಮತ್ತು ಶೋಷಿಸಲು ಇದೊಂದು ಸುಲಭ ಮಾರ್ಗವಾಗಿದೆ. ಈಗ ಮತ್ತಷ್ಟು ಬಾರ್‌ಗಳಿಗೆ ಅನುಮತಿ ನೀಡುವುದು ಇದೇ ಚುನಾವಣಾ ತಂತ್ರದ ಮುಂದುವರಿದ ಭಾಗದಂತಿದೆ. ಮದ್ಯವನ್ನು ಇನ್ನಷ್ಟು ಸುಲಭವಾಗಿ ಲಭ್ಯವಾಗುವಂತೆ ಮಾಡುವುದು ಈ ಪಕ್ಷಗಳ ದೀರ್ಘಕಾಲೀನ ರಾಜಕೀಯ ಹಿತಾಸಕ್ತಿಗಳಿಗೆ ಪೂರಕವಾಗಿದೆ. ರಾಜಕೀಯ ಲಾಭಕ್ಕಾಗಿ ಸಮಾಜದ ಸ್ವಾಸ್ಥ್ಯವನ್ನು ಬಲಿ ಕೊಡುವ ಈ ಪ್ರವೃತ್ತಿ, ಕಾನೂನಿನ ಆಡಳಿತವನ್ನೇ ತಿರಸ್ಕರಿಸುವ ಹಂತಕ್ಕೆ ತಲುಪಿದೆ.



**ನ್ಯಾಯಾಲಯದ ಆದೇಶಕ್ಕೂ ಕಿಮ್ಮತ್ತಿಲ್ವಾ? ಕಾನೂನು ಮೀರಿ ನಿಂತ ಸರ್ಕಾರ...!**

ಈ ನಿರ್ಧಾರದ ಹಿಂದಿರುವ ಅತ್ಯಂತ ಆಘಾತಕಾರಿ ಅಂಶವನ್ನು ಭಾಷಣಕಾರರು ಮುಂದಿಡುತ್ತಾರೆ. ಅವರು ಮಾಡುವ ಅತ್ಯಂತ ಗಂಭೀರವಾದ ಆರೋಪವೆಂದರೆ, ಹೊಸ ಬಾರ್ ಲೈಸೆನ್ಸ್‌ಗಳನ್ನು ನೀಡಬಾರದು ಎಂದು ಹೈಕೋರ್ಟ್ ತಡೆಯಾಜ್ಞೆ ನೀಡಿದ್ದರೂ ಸಹ, ಸರ್ಕಾರ ಕಾನೂನು ಮೀರಿ ಈ ಕ್ರಮಕ್ಕೆ ಮುಂದಾಗಿದೆ. ಇದು ನಿಜವೇ ಆಗಿದ್ದಲ್ಲಿ, ಸರ್ಕಾರದ ಈ ನಡೆ ನ್ಯಾಯಾಂಗ ವ್ಯವಸ್ಥೆ ಮತ್ತು ಕಾನೂನಿನ ಬಗ್ಗೆ ಅದಕ್ಕಿರುವ ಗೌರವವನ್ನು ಪ್ರಶ್ನಿಸುವಂತೆ ಮಾಡುತ್ತದೆ. ನ್ಯಾಯಾಲಯದ ನಿರ್ದೇಶನಗಳನ್ನು ಮೀರಿ ಸರ್ಕಾರಿ ಇಲಾಖೆಗಳು ಮುಂದುವರೆಯುತ್ತಿರುವುದು ಕಾರ್ಯಾಂಗದ ಅತಿರೇಕದ ಆತಂಕಕಾರಿ ಸಂಕೇತವಾಗಿದೆ.

**ಸರ್ಕಾರದ ಈ ನಿರ್ಧಾರ ಕೇವಲ ಒಂದು ಆಡಳಿತಾತ್ಮಕ ವಿಷಯವಲ್ಲ. ಇದು ಗಾಂಧೀಜಿ ತತ್ವ, ಗೃಹಲಕ್ಷ್ಮಿಯರ ಕಲ್ಯಾಣ ಮತ್ತು ಕಾನೂನಿನ ಗೌರವವನ್ನು ಬಲಿ ಕೊಟ್ಟು, ಕೇವಲ ಆದಾಯಕ್ಕಾಗಿ ರೂಪಿಸಲಾದ ಒಂದು ಅಪಾಯಕಾರಿ ನೀತಿ. ಈ ನೀತಿಯಿಂದ ಬಾರ್ ಮಾಲೀಕರು ಸಂಕಷ್ಟಕ್ಕೆ ಸಿಲುಕುತ್ತಾರೆ, ಕುಟುಂಬಗಳು ನಾಶವಾಗುತ್ತವೆ, ಆದರೆ ರಾಜಕೀಯ ಪಕ್ಷಗಳ ಚುನಾವಣಾ ತಂತ್ರಗಳಿಗೆ ಮಾತ್ರ ಲಾಭವಾಗುತ್ತದೆ.**

ಸರ್ಕಾರದ ಈ ನಿರ್ಧಾರ ಕೇವಲ ಒಂದು ಆಡಳಿತಾತ್ಮಕ ವಿಷಯವಲ್ಲ. ಇದು ಗಾಂಧೀಜಿ ತತ್ವ, ಗೃಹಲಕ್ಷ್ಮಿಯರ ಕಲ್ಯಾಣ ಮತ್ತು ಕಾನೂನಿನ ಗೌರವವನ್ನು ಬಲಿ ಕೊಟ್ಟು, ಕೇವಲ ಆದಾಯಕ್ಕಾಗಿ ರೂಪಿಸಲಾದ ಒಂದು ಅಪಾಯಕಾರಿ ನೀತಿ. ಈ ನೀತಿಯಿಂದ ಬಾರ್ ಮಾಲೀಕರು ಸಂಕಷ್ಟಕ್ಕೆ ಸಿಲುಕುತ್ತಾರೆ, ಕುಟುಂಬಗಳು ನಾಶವಾಗುತ್ತವೆ, ಆದರೆ ರಾಜಕೀಯ ಪಕ್ಷಗಳ ಚುನಾವಣಾ ತಂತ್ರಗಳಿಗೆ ಮಾತ್ರ ಲಾಭವಾಗುತ್ತದೆ. ಈ 'ಅಭಿವೃದ್ಧಿ'ಯ ನಿಜವಾದ ಬೆಲೆಯನ್ನು ಯಾರು ತೆರುತ್ತಿದ್ದಾರೆ? ನೆರೆಯ ಆಂಧ್ರದಲ್ಲಿ ಬಾರ್‌ಗಳನ್ನು ಮುಚ್ಚಿಸಲು ಅಲ್ಲಿನ ಮಹಿಳೆಯರು ಧರಣಿ ಹೂಡಿ ಸರ್ಕಾರಕ್ಕೆ ಎಚ್ಚರಿಕೆ ರವಾನಿಸುತ್ತಿದ್ದಾರೆ.

ಇಲ್ಲಿನ ಮಹಿಳಾ ಮಣಿಗಳು ಧ್ವನಿ ಎತ್ತುವುದು ಯಾವಾಗ? ಅಥವಾ ಕೇವಲ ಎರಡು ಸಾವಿರ ರೂಗಳಿಗೆ ನಿಮ್ಮ ನಿಮ್ಮ ಗಂಡ ಹಾಗೂ ಮಕ್ಕಳ ಭವಿಷ್ಯವನ್ನು ಮಾರಿಕೊಂಡಿರೋ ಹೇಗೆ?! ☯

# ಮನೆ ಮಾರಾಟದ ಹಣ ಕೇಳಿದ್ದಕ್ಕೆ ತಮ್ಮನ ಮಗನಿಂದ ದೊಡ್ಡಪ್ಪನ ಕೊಲೆ!



ಆರೋಪಿ ಮಧುಸೂದನ್

**ಪಿತ್ರಾರ್ಜಿತ ಆಸ್ತಿಗೆ ಸೇರಿದ ಮನೆಯೊಂದನ್ನು ತಮ್ಮನೊಬ್ಬ ಅಣ್ಣನಿಗೆ ತಿಳಿಸದೆ ಮಾರಾಟ ಮಾಡಿ ಬಂದಿದ್ದ ಹಣವನ್ನೆಲ್ಲ ಒಬ್ಬನೇ ಗುಳುಂ ಸ್ವಾಹ ಮಾಡಿಬಿಟ್ಟಿದ್ದನು. ಇದನ್ನು ಕೇಳಲು ಅಣ್ಣತಮ್ಮನ ಮನೆಗೆ ಹೋಗಿ ಮಾತನಾಡುತ್ತಿರುವಾಗ ತಮ್ಮನ ಮಗ ದೊಡ್ಡಪ್ಪನ ಜೊತೆ ಮಾತಿಗೆ ಮಾತು ಬೆಳೆಸಿ ಕೈಕೈ ಮಿಲಾಯಿಸುವ ಹಂತಕ್ಕೆ ತಲುಪಿದ್ದು ನಿನ್ನನ್ನು ಸಾಯಿಸಿದರೆ ಸರಿ ಹೋಗುತ್ತದೆಂದು ದೊಡ್ಡಪ್ಪನನ್ನು ಬಲವಾಗಿ ತಳ್ಳಿದಾಗ ತಬ್ಬಿಣದ ಗೇಟ್‌ಗೆ ಬಿದ್ದು ತಲೆಗೆ ಕಬ್ಬಿಣದ ಸಲಾಕೆಗಳು ತಿವಿದುಕೊಂಡು ಮೃತಪಟ್ಟರು. ಅಲ್ಲಿಂದ ಪರಾರಿಯಾಗಿ ತಲೆಮರೆಸಿಕೊಂಡಿದ್ದ ಆರೋಪಿ ತಮ್ಮನ ಮಗನನ್ನು ಕೆಂಚಾರ್ಲಹಳ್ಳಿ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸುವಲ್ಲಿ ಯಶಸ್ವಿಯಾಗಿದ್ದಾರೆ.**




ನಾರಾಯಣಸ್ವಾಮಿ ಬದುಕಿದ್ದಾಗ

**ಚಿಕ್ಕಬಳ್ಳಾಪುರ**

✍ ಕೋಲಾರ ಮಂಜು

**ಚಿ**ಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನ ಕೆಂಚಾರ್ಲಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುವ ಗರ್ರಂಪಲ್ಲಿ ಗ್ರಾಮದ ಜಿರಾಯ್ತಿದಾರ ಲಕ್ಷ್ಮಣ್ ಮತ್ತು ಲಕ್ಷ್ಮಮ್ಮ ದಂಪತಿಗಳಿಗೆ ನಾರಾಯಣಸ್ವಾಮಿ ಮತ್ತು ಮದ್ದಿರೆಡ್ಡಿ ಎಂಬ ಇಬ್ಬರು ಮಕ್ಕಳಿರುತ್ತಾರೆ. ಲಕ್ಷ್ಮಣ್ ರವರಿಗೆ ತಾತನ ಪಿತ್ರಾರ್ಜಿತ ಆಸ್ತಿ ಇದ್ದು ಅದರಲ್ಲಿ ಇಬ್ಬರು ಮಕ್ಕಳಿಗೆ ವ್ಯವಸಾಯ ಮಾಡಲು ಸ್ವಲ್ಪ ಜಮೀನು ಮತ್ತು ವಾಸಕ್ಕೆ ಮನೆಗಳನ್ನು ಕೊಟ್ಟು ಉಳಿದ ಜಮೀನು ಮತ್ತು ಮನೆಗಳನ್ನು ಅವರೇ ಇಟ್ಟುಕೊಂಡಿದ್ದರು. ಅಣ್ಣತಮ್ಮಂದಿರಾದ ನಾರಾಯಣಸ್ವಾಮಿ ಮತ್ತು ಮದ್ದಿರೆಡ್ಡಿರವರು ತಮ್ಮ ಪಾಲಿಗೆ ಬಂದಿರುವ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡು ಗ್ರಾಮದಲ್ಲಿ ಅಕ್ಕಪಕ್ಕದಲ್ಲಿದ್ದ ಮನೆಗಳಲ್ಲಿ ವಾಸವಾಗಿದ್ದರು. ದೊಡ್ಡ ಮಗ ನಾರಾಯಣಸ್ವಾಮಿರವರಿಗೆ ರವಿಕುಮಾರ್, ಮಂಜುಳಾ, ಸುಜಾ ಎಂಬ ಮೂವರು ಮಕ್ಕಳಿರುತ್ತಾರೆ. ಮಕ್ಕಳಿಗೆಲ್ಲಾ ಮದುವೆಗಳಾಗಿದ್ದು, ಮಗಳು ಸುಜಾತಳನ್ನು ತಾಲ್ಲೂಕಿನ ನಡಂಪಲ್ಲಿ ಗ್ರಾಮದ ಮಂಜುನಾಥ್ ಎಂಬುವರೊಂದಿಗೆ ಮದುವೆ ಮಾಡಿದ್ದು, ಇವರಿಗೆ ಇಬ್ಬರು ಮಕ್ಕಳಿರುತ್ತಾರೆ. ಚಿಕ್ಕ ಮಗ ಮದ್ದಿರೆಡ್ಡಿಗೆ ಮಧುಸೂದನ್ ಎಂಬ ಮಗನಿದ್ದು ಇವರಿಗೆ ಮದುವೆಯಾಗಿ ಇಬ್ಬರು ಮಕ್ಕಳಿರುತ್ತಾರೆ.

ಗ್ರಾಮದಲ್ಲಿ ರಾಮಲಕ್ಷ್ಮಣರಂತೆ ಬದುಕಿ ಬಾಳುತ್ತಿದ್ದ ಎರಡು ಕುಟುಂಬಗಳ ನಡುವೆ ಪಿತ್ರಾರ್ಜಿತ ಆಸ್ತಿಗೆ ಸೇರಿದ ಮನೆ ಮಾರಾಟ ಮಾಡಿದ ವಿಚಾರದಲ್ಲಿ ಮುನಿಸು ಪ್ರಾರಂಭವಾಯಿತು. ಕಳೆದ ಐದು ವರ್ಷದ ಹಿಂದೆ ಚಿಕ್ಕ ಮಗ ಮದ್ದಿರೆಡ್ಡಿಯು ತಂದೆ ಲಕ್ಷ್ಮಣ್ ಮತ್ತು ಅಣ್ಣ ನಾರಾಯಣಸ್ವಾಮಿರವರಿಗೆ ತಿಳಿಸದೆ ತಾಲ್ಲೂಕಿನ ಕಟ್ಟಿಹಗೇನಹಳ್ಳಿಯಲ್ಲಿದ್ದ ಪಿತ್ರಾರ್ಜಿತ ಆಸ್ತಿಗೆ ಸೇರಿದ ಮನೆಯೊಂದನ್ನು ಗ್ರಾಮದ ಲೇಟ್ ನಲ್ಲಪ್ಪನ ಪತ್ನಿ ರತ್ನಮ್ಮ ಎಂಬುವವರಿಗೆ ಮಾರಾಟ ಮಾಡಿ ಅಗ್ರಿಮೆಂಟ್ ಮಾಡಿಕೊಟ್ಟು ಬಂದಿದ್ದ ಹಣವನ್ನು ತಂದೆ ಮತ್ತು ಅಣ್ಣನಿಗೆ ಕೊಡದೆ, ತಾನೊಬ್ಬನೇ ಲಪಟಾಯಿಸಿಬಿಟ್ಟಿದ್ದನು. ಮನೆ ಮಾರಾಟ ಮಾಡಿರುವ ವಿಚಾರ ತಂದೆ ಮತ್ತು ಅಣ್ಣನಿಗೆ ತಿಳಿದಿರುವುದಿಲ್ಲ. ವರ್ಷಗಳು ಕಳೆಯುತ್ತಿದ್ದಂತೆ ಮನೆ ತೆಗೆದುಕೊಂಡಿದ್ದ ರತ್ನಮ್ಮ ರಿಜಿಸ್ಟರ್ ಮಾಡಿಕೊಡುವಂತೆ ಮದ್ದಿರೆಡ್ಡಿಗೆ ಡಿಮ್ಯಾಂಡ್ ಮಾಡುತ್ತಿರುತ್ತಾಳೆ. ಆದರೆ ಮನೆ ತಂದೆ ಹೆಸರಿನಲ್ಲಿದ್ದು ಅದನ್ನು ರಿಜಿಸ್ಟರ್ ಮಾಡಿಕೊಡಬೇಕಾದರೆ ತಂದೆ ಮತ್ತು ಅಣ್ಣ ಸೇರಿ ರಿಜಿಸ್ಟರ್ ಮಾಡಿಕೊಡಬೇಕಾಗಿರುವುದರಿಂದ ರತ್ನಮ್ಮನಿಗೆ ಇನ್ನು ಸ್ವಲ್ಪ ದಿನಗಳಲ್ಲಿ ಮನೆ ರಿಜಿಸ್ಟರ್ ಮಾಡಿಕೊಡುವುದಾಗಿ ಹೇಳಿ ದಿನಗಳನ್ನು ಮುಂದುಡುತ್ತಾ ಇದ್ದರು. ಇದರಿಂದ ಬೇಸತ್ತಿದ್ದ ರತ್ನಮ್ಮ ಕೊನೆಗೆ ಒಂದು ದಿನ ಮನೆ ತೆಗೆದುಕೊಂಡಿರುವ ವಿಚಾರವನ್ನು ಲಕ್ಷ್ಮಣ್ ರವರ ದೊಡ್ಡ ಮಗ ನಾರಾಯಣಸ್ವಾಮಿರವರಿಗೆ ತಿಳಿಸಿ ಎಲ್ಲರೂ ಸೇರಿ ಮನೆ ರಿಜಿಸ್ಟರ್ ಮಾಡಿಕೊಡುವಂತೆ ಕೇಳಿಕೊಂಡಳು.



ಎಸ್ಪಿ ಕುಶಾಲ್ ಚೌಕ್‌ಸೆ



ಡಿವೈಎಸ್ಪಿ ಮುರುಳೀಧರ್



ನಾರಾಯಣಸ್ವಾಮಿ ಶವ

ನಮಗೆ ಮನೆ ಮಾರಾಟ ಮಾಡಿರುವ ವಿಚಾರವನ್ನು ಹೇಳದೆ ಹಣವನ್ನೆಲ್ಲ ಗುಳುಂ ಸ್ವಾಹ ಮಾಡಿರುವ ಬಗ್ಗೆ ತಂದೆ ಬಳಿ ದೊಡ್ಡ ಮಗ ಹೇಳಿದನು. ಅದಕ್ಕೆ ತಂದೆ ನಮಗೆ ತಿಳಿಸದೆ ರತ್ನಮ್ಮನಿಗೆ ಮನೆ ಮಾರಾಟ ಮಾಡಿಬಿಟ್ಟಿದ್ದಾನೆ. ಅದರಿಂದ ನಿನ್ನ ಪಾಲಿನ ಹಣವನ್ನು ತೆಗೆದುಕೊಂಡು ಮನೆ ರಿಜಿಸ್ಟರ್ ಮಾಡಿಕೊಡುವಂತೆ ಹೇಳಿದರು. ತಂದೆ ಹೇಳಿದಂತೆ ದೊಡ್ಡ ಮಗ ನಾರಾಯಣಸ್ವಾಮಿ ತಮ್ಮ ಮದ್ದಿರೆಡ್ಡಿ ಬಳಿಗೆ ಹೋಗಿ ಮನೆ ಮಾರಾಟ ಮಾಡಿರುವ ವಿಚಾರವನ್ನು ನಮಗೆ ಹೇಳದೆ ಮಾರಾಟ ಮಾಡಿ ಹಣವನ್ನು ತೆಗೆದುಕೊಂಡಿರುವೆ ಅದಕ್ಕೆ ಬಂದಿರುವ ಹಣದಲ್ಲಿ ಭಾಗ ಕೊಡುವಂತೆ ಕೇಳಿದನು. ಅದಕ್ಕೆ ತಮ್ಮ ಮದ್ದಿರೆಡ್ಡಿಯು ರತ್ನಮ್ಮನಿಗೆ ಮನೆ ಮಾರಾಟ ಮಾಡಿ ಹಣ ತೆಗೆದುಕೊಂಡು ಐದು ವರ್ಷವಾಗಿದೆ. ಈಗ ಹಣವನ್ನೆಲ್ಲಾ ಖರ್ಚು ಮಾಡಿಬಿಟ್ಟಿದ್ದೇನೆ, ನನ್ನ ಬಳಿ ಹಣವಿಲ್ಲವೆಂದು ಹೇಳಿಬಿಡುತ್ತಾನೆ. ಈ ವಿಷಯವನ್ನು ತಂದೆ ಬಳಿ ಹೇಳಿದಕ್ಕೆ ಅವರು ಮದ್ದಿರೆಡ್ಡಿಗೆ ಹೇಳುತ್ತೇನೆ ಅವನು ಕೊಟ್ಟಷ್ಟು ಹಣವನ್ನು ತೆಗೆದುಕೊಳ್ಳುವಂತೆ ಹೇಳುತ್ತಾರೆ. ಸ್ವಲ್ಪ ದಿನಗಳ ನಂತರ ಅಣ್ಣ ನಾರಾಯಣಸ್ವಾಮಿ ತಮ್ಮನ ಬಳಿಗೆ ಹೋಗಿ ಹಣ ಕೊಡುವಂತೆ ಕೇಳಿದಕ್ಕೆ ಹಣದ ವಿಚಾರದಲ್ಲಿ ತಂದೆ ಮಗನ ನಡುವೆ ಫಿಟ್ಟಿಂಗ್ ಇಡುತ್ತೀಯಾ, ನಾನು ನಿನಗೆ ಯಾವುದೇ ಹಣವನ್ನು ಕೊಡಬೇಕಾಗಿಲ್ಲ. ಅದು ಅಲ್ಲದೆ ನಾನು ನಿನ್ನ ಬಳಿ ಯಾವುದೇ ಸಾಲ ತೆಗೆದುಕೊಂಡಿಲ್ಲವೆಂದು ಹೇಳಿಬಿಡುತ್ತಾನೆ. ಅದಕ್ಕೆ ಅಣ್ಣ ನಾರಾಯಣಸ್ವಾಮಿ ನೀನು ನನಗೆ ನನ್ನ ಪಾಲಿನ ಹಣವನ್ನು ಕೊಟ್ಟರೇನೇ ರತ್ನಮ್ಮನ ಹೆಸರಿಗೆ ಮನೆ ರಿಜಿಸ್ಟರ್ ಮಾಡಿಸುವಾಗ ಪತ್ರಕ್ಕೆ ಸಹಿ ಮಾಡುತ್ತೇನೆ ಇಲ್ಲವಾದರೆ ರಿಜಿಸ್ಟರ್ ದಿನ ತಾಲ್ಲೂಕು ಆಫೀಸಿಗೆ ಬರುವುದಿಲ್ಲವೆಂದು ಹೇಳುತ್ತಾನೆ. ಆಗ ತಮ್ಮ ಮದ್ದಿರೆಡ್ಡಿಯು ನಿನಗೆ ಹಣ ಕೊಡದೇನೇ ರಿಜಿಸ್ಟರ್ ಮಾಡಿಸುವುದು ನನಗೆ ಗೊತ್ತು ಎಂದು ಅಣ್ಣನೊಂದಿಗೆ ಜಗಳ ಮಾಡಿಕೊಂಡು ಮಾತು ಬಿಟ್ಟಿದ್ದರು.



ಎಎಸ್‌ಐ ಚಂದ್ರಕುಮಾರ್

### ತಮ್ಮನ ಮಗನಿಂದ ದೊಡ್ಡಪ್ಪನ ಕೊಲೆ

ಚಿಂತಾಮಣಿ ತಾಲ್ಲೂಕಿನ ಗರ್ರಂಪಲ್ಲಿ ಗ್ರಾಮದ ವಾಸಿ ನಾರಾಯಣಸ್ವಾಮಿ (66)ರವರ ಮಗ ಕೆ.ಎನ್. ರವಿಕುಮಾರ್ (40)ರವರು ಡಿಸಂಬರ್ 6ರಂದು ಬೆಳಿಗ್ಗೆ 4.30 ಗಂಟೆಗೆ ಕೆಂಚಾರ್ಲಹಳ್ಳಿ ಪೊಲೀಸ್ ಠಾಣೆಗೆ ಹಾಜರಾಗಿ ನೆನ್ನೆ ರಾತ್ರಿ ಗಂಟೆಯ ಸಮಯದಲ್ಲಿ ತಂದೆ ನಾರಾಯಣಸ್ವಾಮಿರವರು ಮನೆಯಲ್ಲಿದ್ದಾಗ ಪಕ್ಕದ ಮನೆಯ ಚಿಕ್ಕಪ್ಪ ಮದ್ದಿರೆಡ್ಡಿಯ ಮಗ ಮಧುಸೂದನ್ ಕಟ್ಟಿಗೇನಹಳ್ಳಿಯ ಮನೆ ಮಾರಾಟ ಮಾಡಿದ ವಿಷಯವಾಗಿ ಮಾತನಾಡುತ್ತಾ ಮನೆ ಮಾರಿದ್ದು ಆಯಿತು, ಹಣ ಖರ್ಚಾಗಿದ್ದು ಆಯಿತು, ನಿಮಗೆ ಯಾವುದೇ ಮನೆ ಮಾರಾಟದ ಹಣದಲ್ಲಿ ಭಾಗ ಕೊಡಬೇಕಾಗಿಲ್ಲವೆಂದು ಹೇಳಿ ಮನೆ ಮುಂದೆ ಕಿರುಚಾಡುತ್ತಿದ್ದನು. ಆಗ ತಂದೆ ನಾರಾಯಣಸ್ವಾಮಿಯು ತಮ್ಮ ಮದ್ದಿರೆಡ್ಡಿಯ ಮನೆ ಬಳಿಗೆ ಹೋಗಿ ಕಟ್ಟಿಗೇನಹಳ್ಳಿಯಲ್ಲಿದ್ದ ಮನೆ ನಮ್ಮ ತಂದೆಗೆ ಸೇರಿದ್ದು, ಅದರಲ್ಲಿ ನಾವಿಬ್ಬರು ಸಮನಾಗಿ ಭಾಗ ಮಾಡಿಕೊಳ್ಳಬೇಕಾಗಿತ್ತು. ಆದರೆ ನಿಮ್ಮ ತಂದೆ ನನ್ನನ್ನು ಕೇಳದೆ ರತ್ನಮ್ಮನಿಗೆ ಮಾರಾಟ ಮಾಡಿ ಹಣ ತೆಗೆದುಕೊಂಡಿದ್ದಾರೆ. ಅದರಲ್ಲಿ ಭಾಗ ಕೊಡು ಎಂದು ಕೇಳಿದ್ದು ತಪ್ಪಾ. ಯಾಕೋ ನೀನು ನಮ್ಮನ್ನು ಕುರಿತು ಬೈಯುತ್ತಿದ್ದೀಯಾ ಅಂತ ಕೇಳಿದಕ್ಕೆ ಮಧುಸೂದನ್ ನಮ್ಮ ತಂದೆಯನ್ನು ಕುರಿತು ಇದಕ್ಕೆಲ್ಲ ನೀನೇ ಕಾರಣ. ನಿನ್ನನ್ನು ಸಾಯಿಸಿದರೆ ಸರಿ ಹೋಗುತ್ತೆ ಎಂದು ಕೆಟ್ಟ ಮಾತುಗಳಿಂದ ಬೈದು ಬಲವಾಗಿ ತಳ್ಳಿದಾಗ ತಂದೆ ನಾರಾಯಣಸ್ವಾಮಿಗೆ ಅಲ್ಲಿದ್ದ ಕಬ್ಬಿಣದ ಗೇಟ್ ತಗುಲಿ ರಕ್ತಗಾಯವಾಗಿದ್ದು, ಆಗ ಅಲ್ಲಿಂದ ಮಧುಸೂದನ್ ಪರಾರಿಯಾಗಿರುತ್ತಾನೆ.

ಕೂಡಲೇ ತಂದೆ ನಾರಾಯಣಸ್ವಾಮಿಯನ್ನು ನಾನು ಮತ್ತು ಇದೇ ಗ್ರಾಮದ ನರಸಿಂಹರೆಡ್ಡಿ ಹಾಗೂ ರಾಜಮ್ಮ ಮುಂತಾದವರು ಬಂದು ಉಪಚರಿಸಿ ಯಾವುದೋ ಖಾಸಗಿ ವಾಹನದಲ್ಲಿ ಚಿಂತಾಮಣಿಯ ಡೆಕ್ಕನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲುಪಡಿಸಿದ್ದು, ವೈದ್ಯರು ತಂದೆಯನ್ನು ಪರೀಕ್ಷಿಸಿ ದಾರಿಯ ಮಾರ್ಗ ಮಧ್ಯದಲ್ಲಿ ಮೃತಪಟ್ಟಿರುತ್ತಾರೆಂದು ತಿಳಿಸಿದ್ದು, ನಮ್ಮ

☞ 7

# ಕೆಲಸ ಕೊಡಿಸೋ ನೆಪದಲ್ಲಿ ಲಕ್ಷ ಲಕ್ಷ ಉಂಡೆನಾಮ ಹಾಕಿದ ಕಿಲಾಡಿ ಜೋಡಿ!

**ಚಿಕ್ಕಬಳ್ಳಾಪುರದಲ್ಲಿ ಪ್ರೇಮಿಗಳ ಜೋಡಿಯೊಂದು ಉದ್ಯೋಗ ಕೊಡಿಸುವ ಆಮಿಷವೊಡ್ಡಿ ಸ್ನೇಹಿತೆಯರಿಂದ ಲಕ್ಷಾಂತರ ರೂ. ವಂಚಿಸಿದ ಘಟನೆಯೊಂದು ಬಯಲಾಗಿದೆ. ಬೆಂಗಳೂರಿನ ಕಂಪನಿಯಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಪಂಗನಾಮ ಹಾಕಿದ್ದಾರೆ. ಸದ್ಯ ಚಿಕ್ಕಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಪ್ರೇಮಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದಾರೆ.**

## ಸ್ನೇಹಿತೆಯರಿಗೆ ಪಂಗನಾಮ ಹಾಕಿದ ಮಿತ್ರದ್ರೋಹಿ!

**ಚಿಕ್ಕಬಳ್ಳಾಪುರ**

✍ಎನ್. ಬ್ರಹ್ಮಚಾರಿ

ತನ್ನ ಆಪ್ತ ಸ್ನೇಹಿತರಿಗೆ ಯುವತಿಯೊಬ್ಬಳು ತನ್ನ ಬಾಯ್ ಫ್ರೆಂಡ್ ಒಂದು ಕಂಪೆನಿಯ ಸಿಇಓ..., ನಿಮಗೆ ಒಳ್ಳೆಯ ಕೆಲಸ ಕೊಡಿಸ್ತಾನೆ ಅಂತಾ ನಂಬಿಸಿ ಲಕ್ಷ ಲಕ್ಷ ಹಣವನ್ನಾ ಅವರಿಂದ ಪಡೆದು ವಂಚನೆ ಮಾಡಿದ್ದಾಳೆ ಅನ್ನೋ ಆರೋಪ ಕೇಳಿಬಂದಿದೆ. ಇದೀಗ ನಂಬಿಕೆ ಇಟ್ಟಿದ್ದ ಸ್ನೇಹಿತರೇ ಮೋಸ ಮಾಡಿದ ವಂಚಕಿ ವಿರುದ್ಧ ಪೊಲೀಸ್ ಠಾಣೆ ಮೆಟ್ಟಿಲೇರಿರುವ ಘಟನೆ ಚಿಕ್ಕಬಳ್ಳಾಪುರ ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.


ಅನುಷಾ

ಈ ಯುವತಿಯ ಹೆಸರು, ಅನುಷಾ ಅಂತಾ, ಚಿಕ್ಕಬಳ್ಳಾಪುರ ತಾಲೂಕಿನ ಅಂಕಣಗೊಂದಿ ನಿವಾಸಿ. ಈಕೆ ಹಾಗೂ ಶಿಡ್ಲಘಟ್ಟ ತಾಲೂಕಿನ ಅರುಣ್ ಜೊತೆ ಸೇರಿ ತನಗೆ ಪರಿಚಯಸ್ಥ ಸ್ನೇಹಿತೆಯರಿಗೆ ವಂಚಿಸಿರುವ ಆರೋಪ ಕೇಳಿ ಬಂದಿದೆ. ತನ್ನ ಸ್ನೇಹಿತ ಅರುಣ್ ಬೆಂಗಳೂರಿನ ಸಾಯಿ ಸೆಲ್ಫ್ ಡ್ರೈವ್ ಖಾಸಗಿ ಸಂಸ್ಥೆಯಲ್ಲಿ ಸಿಇಓ ಆಗಿದ್ದು, ಕೈ ತುಂಬ ಹಣ ಸಂಪಾದಿಸುವ ಕೆಲಸ ಕೊಡಿಸ್ತಾರೆ. ಅದಕ್ಕೆ ಹಣ ಕಟ್ಟಬೇಕು ಅಂತ ನಂಬಿಸಿ ಪರಿಚಯಸ್ಥರಿಂದಲೆ ಹಣ ಪಡೆದು ವಂಚಿಸಿರುವುದು ಬೆಳಕಿ ಬಂದಿದೆ.


ಇನ್ನೂ ಚಿಕ್ಕಬಳ್ಳಾಪುರ ಮೂಲದ ಎಲ್‌ಎಲ್‌ಬಿ ವಿದ್ಯಾರ್ಥಿನಿ ಪ್ರತಿಭಾ ಎಂಬ ಯುವತಿ ಸಾಲಾಸೋಲ ಮಾಡಿ 1 ಲಕ್ಷ 85 ಸಾವಿರ ರೂಪಾಯಿ ಕೊಟ್ಟಿದ್ದಾರಂತೆ. ಮತ್ತೊಬ್ಬ ಯುವತಿ ಪದವಿಧರೆ ಹರ್ಷಿತಾ ತನ್ನ ಬಳಿ ಇದ್ದ ಚಿನ್ನಾಭರಣಗಳನ್ನಿಟ್ಟು 2 ಲಕ್ಷ ರೂಪಾಯಿ ಹಣ ಕೊಟ್ಟಿದ್ದಾರೆ ಎಂದು ತಿಳಿದುಬಂದಿದೆ. ಹಣ ಪಡೆದ ಅನುಷಾ ಹಾಗೂ ಅರುಣ್ ಸ್ನೇಹಿತರಿಗೆ ವಂಚನೆ ಮಾಡಿರುವ ಆರೋಪ ಕೇಳಿ ಬಂದಿದ್ದು, ಸ್ವತಃ ಅನುಷಾ ಹಣವನ್ನು ತನ್ನ ಅಕೌಂಟ್‌ಗೆ ಹಾಕಿಕೊಂಡು, ನಂತರ ಅರುಣ್‌ಗೆ ಕೊಟ್ಟಿರುವುದು ತಿಳಿದು ಬಂದಿದೆ. ಸದ್ಯಕ್ಕೆ ಪ್ರತಿಭಾ ಹಾಗೂ ಹರ್ಷಿತಾ ಚಿಕ್ಕಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿದ್ದಾರೆ.



ಅಂಜನ್ ರೆಡ್ಡಿ


ಇನ್ನೂ ಅರುಣ್ ವಿರುದ್ಧ ಮತ್ತೊಂದು ವಂಚನೆಯ ದೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ತಾಲೂಕಿನ ಚಿಕ್ಕತಮ್ಮನಹಳ್ಳಿ ಗ್ರಾಮದ ಅಂಜನ್ ರೆಡ್ಡಿ ಎಂಬುವವರಿಗೆ ಕಾರು ಕೊಡಿಸುವ ವಿಚಾರದಲ್ಲಿ 4 ಲಕ್ಷದ 40 ಸಾವಿರ ರೂಪಾಯಿ ಹಣ ವಂಚನೆ ಮಾಡಿರುವ ಆರೋಪ ಕೇಳಿ ಬಂದಿದ್ದು, ಅಂಜನ್ ರೆಡ್ಡಿ ಮತ್ತು ಅರುಣ್ ಇಬ್ಬರು ಬಾಲ್ಯ ಸ್ನೇಹಿತರು. ಶಿಡ್ಲಘಟ್ಟದಲ್ಲಿ ಅರುಣ್, ಸ್ವಾತಿ ಎಂಬುವವರನ್ನು ಲವ್ ಮ್ಯಾರೇಜ್ ಆಗಿದ್ದನಂತೆ. ಆಗ ಅಂಜನ್ ರೆಡ್ಡಿಗೆ ಅರುಣ್ ಫೈನಾನ್ಸ್‌ನಲ್ಲಿ ಕಾರು ಅಡವಿಗೆ ಬಂದಿದೆ. ಅದನ್ನು ನಿನಗೆ ಚೀಪ್ ಆಗಿ ಕೊಡಿಸುವುದಾಗಿ ನಂಬಿಸಿ ದಾಖಲೆಗಳಿಲ್ಲದ ಕಾರು ನೀಡಿ 6.40 ಲಕ್ಷ ಪಡೆದುಕೊಂಡಿದ್ದನಂತೆ. ಇದಾದ ಬಳಿಕ ಅರುಣ್ ಕಳ್ಳಾಟ ಬಯಲಾಗಿ ಹಣ ವಾಪಸ್ ನೀಡುವಂತೆ ಕೇಳಿದ್ದಾನೆ. ಎರಡು ಲಕ್ಷ ಹಣ ಕೊಟ್ಟು ಉಳಿದ ಹಣ ನೀಡದೆ ವಂಚಿಸಿದ್ದಾನೆಂದು ಆರೋಪಿಸಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ನ್ಯಾಯಕ್ಕಾಗಿ ದೂರು ನೀಡಿದ್ದಾರೆ.



ಅರುಣ್

ಒಟ್ನಲ್ಲಿ ಕೆಲಸ ಕೊಡಿಸುವ ನೆಪದಲ್ಲಿ ಹಣ ವಂಚನೆ ಪ್ರಕರಣ ದಿನಕ್ಕೊಂದು ಟ್ವಿಸ್ಟ್ ಪಡೆಯುತ್ತಿದ್ದು, ಇನ್ನೂ ಎಷ್ಟು ಮಂದಿಗೆ ವಂಚಿಸಿದಾರೆ ಎಂಬುದು ಪೊಲೀಸರ ತನಿಖೆಯಿಂದ ಹೊರಬರಬೇಕಿದೆ. ☯




ಸ್ವಾತಿ


ಪ್ರತಿಭಾ

6 ☞

ತಂದೆ ನಾರಾಯಣಸ್ವಾಮಿರವರ ಕೊಲೆಗೆ ಕಾರಣವಾಗಿರುವ ಚಿಕ್ಕಪ್ಪನ ಮಗ ಮಧುಸೂದನ್‌ರವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕಾಗಿ ಕೋರಿದ್ದರ ಮೇರೆಗೆ ಎಎಸ್‌ಐ ಚಂದ್ರಕುಮಾರ್‌ರವರು ಮೊ.ಸಂ. 202/2025 ಕಲಂ 115(2), 353, 103(1) ಬಿಎನ್‌ಎಸ್ 2023ರ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ತನಿಖೆಗಾಗಿ ಪ್ರಕರಣದ ವರದಿಯನ್ನು ಹಿರಿಯ ಅಧಿಕಾರಿಗಳಿಗೆ ಸಲ್ಲಿಸಿದರು.



ಸ್ಥಳಕ್ಕೆ ಎಸ್ಪಿ ಕುಶಾಲ್ ಚೌಕ್‌ಸೆ, ಎಎಸ್ಪಿ ಜಗನ್ನಾಥ್ ರಾಯ್, ಡಿವೈಎಸ್ಪಿ ಮುರುಳೀಧರ್, ಪಿಐ ಜಿ.ಸಿ. ನಾರಾಯಣಸ್ವಾಮಿ, ಬೆರಳಚ್ಚು ತಜ್ಞರು ಮತ್ತು ಶ್ವಾನದಳದೊಂದಿಗೆ ಹಾಜರಾಗಿ ಕೃತ್ಯ ನಡೆದ ಸ್ಥಳವನ್ನು ಪರಿಶೀಲಿಸಿದ ನಂತರ ಚಿಂತಾಮಣಿಯ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಭೇಟಿ ನೀಡಿ ಶವದ ಪಂಚನಾಮೆ ನಡೆಸಲು ಸೂಚಿಸಲಾಯಿತು. ಅಂದು ಮಧ್ಯಾಹ್ನ 12.30 ಗಂಟೆಗೆ ಪಂಚರಾದ ಮಂಜುನಾಥ್, ನಾಗಭೂಷಣರವರ ಸಮಕ್ಷಮದಲ್ಲಿ ಶವದ ಪಂಚನಾಮೆಯನ್ನು ಕೈಗೊಂಡಿರುತ್ತಾರೆ. ಇದೇ ಸಂದರ್ಭದಲ್ಲಿ ಸಂಬಂಧಿಗಳಾದ ಇದ್ದಿಲಿವಾರಿಪಲ್ಲಿ ಗ್ರಾಮದ ರಾಮಚಂದ್ರಪ್ಪನವರ ಪತ್ನಿ ಮಂಜುಳ, ನಡಂಪಲ್ಲಿ ಗ್ರಾಮದ ಮಂಜುನಾಥ್‌ರವರ ಪತ್ನಿ ಸುಜಾತ, ಗರ್ರಂಪಲ್ಲಿ ಗ್ರಾಮದ ವೆಂಕಟರಾಮಣ್ಣರವರ ಮಗ ಶ್ರೀರಾಮಪ್ಪ, ಕಟ್ಟಿಗೇನಹಳ್ಳಿ ಗ್ರಾಮದ ನಹರಸಿಂಹಯ್ಯನವರ ಮಗ ರವಿ ಮುಂತಾದವರು ಹಾಜರಿದ್ದರು. ಚಿಕ್ಕಬಳ್ಳಾಪುರ ಸರ್ಕಾರಿ ಆಸ್ಪತ್ರೆಯ ವೈದ್ಯರಿಂದ ಮೃತದೇಹದ ಪರೀಕ್ಷೆ ನಡೆಸಿದ ನಂತರ ಶವವನ್ನು ವಾರಸುದಾರರಿಗೆ ನೀಡಲಾಯಿತು.

ದೊಡ್ಡಪ್ಪನನ್ನು ಕೊಲೆ ಮಾಡಿ ಪರಾರಿಯಾಗಿ ತಲೆಮರೆಸಿಕೊಂಡಿದ್ದ ಆರೋಪಿ ಮಧುಸೂದನ್‌ನನ್ನು ಪತ್ತೆಹಚ್ಚಲು ಚಿಕ್ಕಬಳ್ಳಾಪುರ ಎಸ್ಪಿ ಕುಶಾಲ್ ಚೌಕ್‌ಸೆ, ಡಿವೈಎಸ್ಪಿ ಮುರುಳೀಧರ್‌ರವರ ಮಾರ್ಗದರ್ಶನದಲ್ಲಿ ಕೆಂಚಾರ್ಲಹಳ್ಳಿ ಪೊಲೀಸ್ ಠಾಣೆಯ ಪಿಐ ಜಿ.ಸಿ. ನಾರಾಯಣಸ್ವಾಮಿರವರ ನೇತೃತ್ವದಲ್ಲಿ ಪಿಎಸ್‌ಐ ಜಗದೀಶ್ ರೆಡ್ಡಿ, ಎಎಸ್‌ಐ ಚಂದ್ರಕುಮಾರ್, ಸಿಬ್ಬಂದಿಗಳಾದ ಶ್ರೀನಾಥ್, ಪ್ರವೀಣ್‌ಕುಮಾರ್, ಸಂತೋಷ್‌ಕುಮಾರ್, ವೆಂಕಟೇಶ್, ನಾರಾಯಣ್ ಮುಂತಾದವರ ತಂಡವನ್ನು ರಚಿಸಲಾಗಿದ್ದು, ಪೊಲೀಸ್ ಬಾತ್ಮೀದಾರರು ನೀಡಿದ ಸುಳಿವಿನ ಮೇರೆಗೆ ಡಿಸೆಂಬರ್ 7ರಂದು ಬೆಳಿಗ್ಗೆ 4.30 ಗಂಟೆ ಸಮಯದಲ್ಲಿ ಆಂಧ್ರದ ಮದನಪಲ್ಲಿ ನಗರದ ಸಂಬಂಧಿ ಮಾದೇವ ಎಂಬುವವರ ಮನೆಯಲ್ಲಿ ಆರೋಪಿ ಕೆ.ಎಂ. ಮಧುಸೂದನ್ (40)ನನ್ನು ಬಂಧಿಸಿ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆ ನಂತರ ಕೃತ್ಯ ನಡೆಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಪರಿಶೀಲನೆ ನಡೆಸಿದ ಮೇಲೆ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ☯


ರೈಟರ್ ಎಸ್.ಕೆ. ಶ್ರೀನಾಥ್ ಹಾಗೂ ಪಿಸಿ ಪ್ರವೀಣ್‌ಕುಮಾರ್



ಬರ್ಬರವಾಗಿ ಕೊಲೆಗೀಡಾದ ತುಕಾರಾಮ ಶಿಂಗೆ

**ಅಂದು 25-10-2025ರಂದು ಬೆಳಗಾವಿ ಜಿಲ್ಲೆ ಗೋಕಾಕ ತಾಲ್ಲೂಕಿನ ಘಟಪ್ರಭಾ ಪರಿಸರದಲ್ಲಿ ಅಕ್ಷರಶಃ ಆತಂಕ ಮತ್ತು ಭಯದ ವಾತಾವರಣ ನಿರ್ಮಾಣವಾಗಿತ್ತು. ಸರಿ ಸುಮಾರು 25 ವರ್ಷದ ತರುಣನನ್ನು ಬೆತ್ತಲೆಗೊಳಿಸಿ ಅತೀ ಬರ್ಬರವಾಗಿ ಕೊಲೆ ಮಾಡಿದ್ದರು. ತಲೆಯ ಮೇಲೆ ಕಲ್ಲು-ಚಪ್ಪಡಿ ಎತ್ತಿ ಹಾಕಿ ಮುಖ ಗುರುತು ಸಿಗದಂತೆ ಮಾಡಿದ್ದರು. ಈ ಅನಾಮಧೇಯ ಬರ್ಬರ ಕೊಲೆಯನ್ನು ಅಂದಿನ ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ, ಡಿವೈಎಸ್ಪಿ ರವಿ ನಾಯಕ ನಿರ್ದೇಶನದಲ್ಲಿ ಸವಾಲಾಗಿ ಸ್ವೀಕರಿಸಿದ ಘಟಪ್ರಭಾದ ಚತುರ ಮತ್ತು ಧಾಡಸಿ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಮತ್ತು ಸಿಬ್ಬಂದಿಗಳು ಚಾಕಚಕ್ಯತೆಯಿಂದ ಭೇದಿಸಿದ್ದಾರೆ. ತನ್ನ ಪ್ರೇಯಸಿಯೊಡನೆ ಅನೈತಿಕ ಸಂಬಂಧವಿರಿಸಿಕೊಂಡಿದ್ದ ಆಕ್ರೋಶದಲ್ಲಿ ತನ್ನ ಸ್ನೇಹಿತನನ್ನೇ ತನ್ನ ಪ್ರೇಯಸಿಯ ಮುಂದೆ ಬೆತ್ತಲಾಗಿರಿಸಿ ಬರ್ಬರವಾಗಿ ಕೊಲೆಗೈದಿದ್ದನು. ಇದಲ್ಲದೇ ಈ ಕೊಲೆ ಯಾರ ಮುಂದಾದರೂ ಬಾಯಿ ಬಿಟ್ಟರೆ ನಿನ್ನನ್ನು ಕೂಡಾ ಇದೇ ರೀತಿ ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿ ಪ್ರೇಯಸಿಯೊಂದಿಗೆ ಪರಾರಿಯಾಗಿದ್ದನು. ಯಾವುದೇ ಸಣ್ಣ ಸುಳಿವು ಕೂಡಾ ಇರದ ಈ ನಿಗೂಢ ಕೊಲೆ ಪ್ರಕರಣವನ್ನು ಸತತ ಎರಡು ತಿಂಗಳುಗಳ ಕಾಲ ಪರಿಶ್ರಮ ವಹಿಸಿ ಹಂತಕನ ಹೆಡೆಮುರಿ ಕಟ್ಟುವಲ್ಲಿ ಡೈನಾಮಿಕ್ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಮತ್ತು ತಂಡದವರು ಯಶಸ್ವಿಯಾಗಿದ್ದಾರೆ. ಈ ಕೊಲೆಯ ಹಿಂದಿನ ಸಂಪೂರ್ಣ ಸ್ಟೋರಿಯನ್ನು 'ಪೊಲೀಸ್ ನ್ಯೂಸ್' ಓದುಗರಿಗೆ ನೀಡಿದೆ.**

## ಘಟಪ್ರಭಾ ಸಿಪಿಐ ಹೆಚ್.ಡಿ. ಮುಲ್ಲಾ ಮತ್ತು ಸಿಬ್ಬಂದಿಗಳ ಯಶಸ್ವಿ ಕಾರ್ಯಾಚರಣೆ

# ತನ್ನ ಪ್ರೇಯಸಿ ಜತೆಗೆ ಅನೈತಿಕ ಸಂಬಂಧ ಹೊಂದಿದ್ದ ಸ್ನೇಹಿತನನ್ನು ಪ್ರೇಯಸಿ ಎದುರಿಗೆ ಬೆತ್ತಲೆ ಮಾಡಿ ಕೊಂದು ಹಾಕಿದ!


ಬೆಳಗಾವಿ
✍ ಮನ್ನಾಪೂರ

ಅನೈತಿಕ ಸಂಬಂಧ ಎನ್ನುವುದು ಅಂತ್ಯವಾಗುವುದು ಅತ್ಯಂತ ಕ್ರೂರ ದುರಂತದಿಂದ. ಕೆಟ್ಟ ಕಾಮದ ಪ್ರತಿ ರೂಪವೇ ಅನೈತಿಕ ಸಂಬಂಧ, ಇದರ ಬೆನ್ನುಬಿದ್ದವರು ಅದ್ಯಾರು ಉದ್ಧಾರವಾದ ಉದಾಹರಣೆಗಳಿಲ್ಲ. ಅನೈತಿಕ ಸಂಬಂಧದ ಅಡ್ಡದಾರಿ ಹಿಡಿದು ಹೇಳದೆ ಬೀದಿ ಹೆಣವಾದವರು ಬಹಳಷ್ಟು ಜನರಿಂದು ತಮ್ಮನ್ನೇ ನಂಬಿದ ಕುಟುಂಬವನ್ನೇ ನಡು ಬೀದಿಗೆ ತಂದು ನಿಲ್ಲಿಸಿದ ಉದಾಹರಣೆ ಸಾಕಷ್ಟು ನಮ್ಮ ನಡುವೆ ನಡೆದು ಹೋಗಿವೆ. ಇಲ್ಲೂ ಕೂಡಾ ಅನೈತಿಕ ಸಂಬಂಧದ ನಡುವೆ ಸ್ನೇಹಿತನನ್ನು ಬರ್ಬರವಾಗಿ ಕೊಲೆಗೈದು ಮಾಡಿದ ತಪ್ಪಿಗೆ ಜೈಲು ಸೇರಿ ತಂಗಳು ತಿನ್ನುತ್ತಿರುವ ಹುಟ್ಟಾ ಕ್ರಿಮಿನಲ್ ವ್ಯಕ್ತಿಯ ವಿಕ್ಷಿಪ್ತ ಕಥೆ ಇದಾಗಿದೆ.

### ಅನಾಮಧೇಯರ ಬರ್ಬರ ಕೊಲೆ...

ಅಂದು ದಿನಾಂಕ 21-10-2025ರಂದು ಘಟಪ್ರಭಾದ ಡೈನಾಮಿಕ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಅವರಿಗೆ ಆಘಾತಕಾರಿ ಸುದ್ದಿಯೊಂದು ಬಂದಿತ್ತು. ಘಟಪ್ರಭಾ ಸಮೀಪದ ಧೂಪಧಾಳ ಹತ್ತಿರ ರೇಲ್ವೆ ಹಳಿ ದಾಟಿ ಜಿಎಲ್‌ಬಿಸಿಯ ನಿರ್ಜನ ಪರಿಸರದಲ್ಲಿ ಯಾರೋ ಅನಾಮಧೇಯ ತರುಣನ ಬರ್ಬರ ಕೊಲೆ ಮಾಡಿರುವ ಬೆತ್ತಲೆ ಶವ ಬಿದ್ದಿದೆ ಎಂದು. ತಕ್ಷಣ ಅಲರ್ಟ್ ಆದ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ, ಪಿಎಸ್‌ಐ ಎಸ್.ಆರ್. ಕಣವಿ ಮತ್ತು ಸಿಬ್ಬಂದಿಗಳು ಘಟನಾ ಸ್ಥಳಕ್ಕೆ ಧಾವಿಸಿದ್ದರು.


ಜಿಎಲ್‌ಬಿಸಿ ಕೆನಾಲ್ ಪರಿಸರದಲ್ಲಿನ ನಿರ್ಜನ ಪರಿಸರದಲ್ಲಿ ಸುಮಾರು 25 ವರ್ಷದ ತರುಣನನ್ನು ಸಂಪೂರ್ಣ ಬೆತ್ತಲೆ ಮಾಡಿ ಅತ್ಯಂತ ಕ್ರೂರವಾಗಿ ತಲೆಯ ಮೇಲೆ ಕಲ್ಲು ಚಪ್ಪಡಿ ಎತ್ತಿ ಹಾಕಿ ಕೊಲೆ ಮಾಡಿದ್ದರು. ಘಟನಾ ಸ್ಥಳದಲ್ಲಿ ರಕ್ತಸ್ರಾವ ವಿಪರೀತವಾಗಿ ಹೆಪ್ಪುಗಟ್ಟಿತ್ತು. ಶವದ ಗುರುತು ಸಿಗದಂತೆ ಮಾಡಿದ್ದರು. ಕೊಲೆಯಾದ ತರುಣ ಯಾರು? ಕೊಲೆ ಮಾಡಿದ ಉದ್ದೇಶವೇನು? ಕೊಲೆಗಾರರು ಯಾರು? ಎಂಬ ಪ್ರಶ್ನೆಗಳು ಉತ್ತರ ಸಿಗದೇ ನಿರುತ್ತರವಾಗಿದ್ದವು. ಸದರಿ ಬರ್ಬರ ಕೊಲೆ ಕಂಡು, ಕೇಳಿದ ಜನ ಭಯ ಭೀತರಾಗಿ ತಮ್ಮಲ್ಲಿ ಅಂತೆ-ಕಂತೆಗಳ ಸುದ್ದಿ ಹರಡತೊಡಗಿದರು. ಶವದ ಬಲಗೈ ಮುಂಗೈ ಮೇಲೆ ಆಂಜನೇಯ ಚಿತ್ರ, ತ್ರಿಶೂಲ ಚಿತ್ರದಂತಹ ಟ್ಯಾಟುಗಳಿದ್ದವು. ಕೊಲೆ ನಡೆದಿದ್ದ ಸುತ್ತಲಿನ ಸ್ಥಳವನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಅವರು ಪ್ರಕರಣದ ಕುರಿತು ಗೋಕಾಕದ ಡಿವೈಎಸ್ಪಿ ರವಿ ನಾಯುಕ್, ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರೊಂದಿಗೆ ಸಮಾಲೋಚಿಸಿ ಅವರಿಂದ ಸೂಕ್ತ ನಿರ್ದೇಶನಗಳನ್ನು ಪಡೆದುಕೊಂಡರು. ಈ ನಡುವೆ ಘಟನಾ ಸ್ಥಳಕ್ಕೆ ಡಿವೈಎಸ್ಪಿ ರವಿ ನಾಯಕ್ ಮತ್ತು ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ ಭೇಟಿ ನೀಡಿ ಸೂಕ್ಷ್ಮವಾಗಿ ಪರಿಶೀಲನೆ ನಡೆಸಿ ತನಿಖಾಧಿಕಾರಿಗಳಿಗೆ ಅಗತ್ಯ ನಿರ್ದೇಶನ ನೀಡಿದರು.



ಎಸ್ಪಿ ಡಾ. ಭೀಮಾಶಂಕರ ಗುಳೇದ



ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ



ಅನೈತಿಕ ಸಂಬಂಧ ಹೊಂದಿದ್ದ ತುಕಾರಾಮನನ್ನು ಬೆತ್ತಲೆಗೊಳಿಸಿ ಬರ್ಬರವಾಗಿ ಕೊಲೆಗೈದಿರುವುದು

### ಬೆರಳಚ್ಚು ಪಡೆದುಕೊಂಡು ಅಂತ್ಯಕ್ರಿಯೆ...

ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಅವರು ಪಿಎಸ್‌ಐ ಎಸ್.ಆರ್. ಕಣವಿ ಮತ್ತು ಸಿಬ್ಬಂದಿಗಳ ಜತೆ ಸೇರಿ ಶವದ ಪಂಚನಾಮೆ ಮತ್ತು ಸ್ಥಳದಲ್ಲಿದ್ದವರ ಹೇಳಿಕೆಗಳನ್ನು ಪಡೆದುಕೊಂಡರು. ಅನಾಮಧೇಯ ಶವದ ಬೆರಳಚ್ಚು ಮುದ್ರೆ ಪಡೆದುಕೊಂಡು, ಶವದ ವೈದ್ಯಕೀಯ ಪರೀಕ್ಷೆ ಮಾಡಿಸಿ ಪಂಚಾಯತಿಯವರ ಸಹಕಾರದಿಂದ ಅನಾಮಧೇಯ ಶವದ ಅಂತ್ಯಕ್ರಿಯೆ ಮಾಡಿ ಮುಗಿಸಲಾಯಿತು. ಅಲ್ಲದೇ ಅನಾಮಧೇಯ ಶವದ ಫೋಟೋಗಳೊಂದಿಗೆ ಆತನ ಚಹರೆಪಟ್ಟಿ ವಿವರಿಸಿ ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಿಗೂ ಕಳಿಸಲಾಯಿತು.

### ಕಲೆಯಾದವನು ತುಕಾರಾಮ ಶಿಂಗೆ...

ತನಿಖಾ ವಿಧಾನದಲ್ಲಿ ತುಂಬಾ ಚತುರರಾದ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಅವರ ತಂತ್ರ ಮೊದಲ ಹಂತದಲ್ಲಿ ಫಲಿಸಿತ್ತು. ಬೆರಳಚ್ಚು ಮುದ್ರೆಯ ಆಧಾರದ ಮೇಲಿಂದ ಹುಬ್ಬಳ್ಳಿ ರೇಲ್ವೆ ಪೊಲೀಸ್ ಠಾಣೆಯಲ್ಲಿ ಕಳ್ಳತನಕ್ಕೆ ಸಂಬಂಧಿಸಿದಂತೆ ಅನಾಮಧೇಯವಾಗಿ ಘಟಪ್ರಭಾದಲ್ಲಿ ಕೊಲೆಯಾದವನು ಆರೋಪಿಯಾಗಿದ್ದನೆಂದು ಪಕ್ಕಾ ಕನ್‌ಫರ್ಮ್ ಆಯಿತು. ಕೊಲೆಯಾದ ತರುಣನ ಹೆಸರು ತುಕಾರಾಮ ಬಸಪ್ಪ ಶಿಂಗೆ (25 ವ) ಮಹಿಷವಾಡಗಿ ತಾ|| ಅಥಣಿ ಎಂದು ತಿಳಿದು ಬಂದಿತು. ಹೇಗೋ ಕೊಲೆಯಾದವನು ಯಾರೆಂದು ತಿಳಿದು ಬಂದಿತು. ಇನ್ನು ಕೊಲೆಗಾರರು ಯಾರಿರಬಹುದು? ಉದ್ದೇಶ ಏನಿರಬಹುದು? ಎಂಬುದನ್ನು ಪತ್ತೆಹಚ್ಚಲೇಬೇಕು ಎಂದು ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಮತ್ತು ಅವರ ತಂಡ ಅಖಾಡಕ್ಕೆ ಇಳಿದು ಬಿಟ್ಟಿತು.



ನಿಪ್ಪಾಣಿ ಶಹರ ಠಾಣೆಯ ಎಂಓಬಿ ಸಂತೋಷ ನಾಯಿಕ

### ಕ್ರಿಮಿನಲ್ ಹಿನ್ನೆಲೆಯ ತುಕಾರಾಮ...

ತುಕಾರಾಮ ಬಸಪ್ಪ ಶಿಂಗೆ 25 ವರ್ಷದ ಮಹಾ ಐನಾತಿಯಾಗಿದ್ದನು. ತಂದೆ ಬಸಪ್ಪ, ತಾಯಿ ಶಾಣವ್ವ ಈತನನ್ನು ಚಿಕ್ಕಂದಿನಿಂದಲೂ ಅಜ್ಜಿಯ ಊರಾದ ರಾಯಭಾಗ ತಾಲ್ಲೂಕಿನ ಬೊಮ್ಮನಾಳದಲ್ಲಿ ಬಿಟ್ಟರು. ಅಜ್ಜ, ಅಜ್ಜಿಯರ ಅತೀ ಮುದ್ದು ಐನಾತಿ ತುಕಾರಾಮನನ್ನು ಹಾಳು ಮಾಡಿತು. ಈತ 9ನೇ ತರಗತಿವರೆಗೆ ಓದಿದ್ದಾನೆ.



ಪ್ರೇಯಸಿ ಜತೆಗೆ ಸಂಬಂಧ ಸ್ನೇಹಿತನ ಕೊಲೆಗೈದ ಆರೋಪಿ ಸಂತೋಷ ನಾಯಿಕ

ಭೈರಪ್ಪ ಎಂಬ ಒಬ್ಬ ತಮ್ಮನಿದ್ದಾನೆ. ಅಣ್ಣ-ತಮ್ಮ ಇಬ್ಬರು ಅವಿವಾಹಿತರು. ಈತನಿಗೆ ರೈಲಿನಲ್ಲಿ ಪುಕ್ಕಟ್ಟೆ ಓಡಾಡುವುದೆಂದರೆ ಎಲ್ಲಿಲ್ಲದ ಖುಷಿ ಇತ್ತು ಎಂದು ತಂದೆ, ತಾಯಿ ತಿಳಿಸುತ್ತಾರೆ. ಘಟಪ್ರಭಾ ಪೊಲೀಸರು ಕೊಲೆಯಾದ ತುಕಾರಾಮನ ಊರಾದ ಮಹಿಷವಾಡಗಿಗೆ ಹೋಗಿ ಬಂದರೂ ಹೇಳಿಕೊಳ್ಳುವಂತಹ ಸುಳಿವು ಏನೂ ದೊರೆಯಲಿಲ್ಲ.

### ವಿಶೇಷ ತನಿಖಾ ತಂಡ ರಚನೆ...

ದಿನ ಕಳೆದಂತೆ ಘಟಪ್ರಭಾದಲ್ಲಿ ಕೊಲೆಯಾಗಿದ್ದ ತುಕಾರಾಮ ಶಿಂಗೆಯ ಪ್ರಕರಣ ಜಟಿಲವಾಗತೊಡಗಿತ್ತು. ಇದಕ್ಕಾಗಿ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಅವರು ಡಿವೈಎಸ್ಪಿ ರವಿ ನಾಯುಕ್, ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರೊಂದಿಗೆ ಸಮಾಲೋಚಿಸಿದರು. ಖುದ್ದು ಎಸ್ಪಿ ಡಾ. ಭೀಮಾಶಂಕರ ಅವರ ನಿರ್ದೇಶನದಂತೆ ಒಂದು ವಿಶೇಷ ತನಿಖಾ ತಂಡ ರಚಿಸಿ ಅದಕ್ಕೆ ಡಿವೈಎಸ್ಪಿ ರವಿ ನಾಯಕ್ ನೇತೃತ್ವ ವಹಿಸಬೇಕೆಂದು ತಿಳಿಸಿದರು.





ಡಿವೈಎಸ್ಪಿ ರವಿ ನಾಯಕ್

ವಿಶೇಷ ತನಿಖಾ ತಂಡವನ್ನು ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ವಹಿಸಿಕೊಂಡರೆ, ಪಿಎಸ್‌ಐ ಎಸ್.ಆರ್. ಕಣವಿ, ಎಎಸ್‌ಐ ಪಿ.ಎಂ. ಪಾಟೀಲ, ಸಿಬ್ಬಂದಿಗಳಾದ ಬಿ.ಎಸ್. ನಾಯಿಕ, ರಾಜು ಹೊಳ್ಕರ, ಎಸ್.ಎಸ್. ಮಠಪತಿ, ರಾಜು ಧುಮಾಳೆ, ರಾಜು ಪಡತಾರೆ ಸೇರಿದ್ದರು. ತಂಡದ ಸಂಪೂರ್ಣ ನಾಯಕತ್ವವನ್ನು ಹೆಚ್.ಡಿ. ಮುಲ್ಲಾ ವಹಿಸಿಕೊಂಡರು. ವಿಶೇಷ ತನಿಖಾ ತಂಡಕ್ಕೆ ಅಗತ್ಯ ನಿರ್ದೇಶನಗಳನ್ನು ಸ್ವತಃ ಡಿವೈಎಸ್ಪಿ ರವಿ ನಾಯಕ್ ನೀಡತೊಡಗಿದ್ದರು. ಹೇಗಾದರೂ ಮಾಡಿ ಶತಾಯ-ಗತಾಯ ತುಕಾರಾಮನ ಕೊಲೆಯ ರಹಸ್ಯ ಭೇದಿಸಲೇಬೇಕೆಂದು ಪ್ರಕರಣವನ್ನು ಸವಾಲಾಗಿ ಸ್ವೀಕರಿಸಿ ಕಾರ್ಯಾಚರಣೆಗೆ ಇಳಿದರು.

### ಸಿಸಿಟಿವಿ ನೀಡಿದ ಸುಳಿವು...

ಅಂದುಕೊಂಡಂತೆ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ತಂತ್ರವೊಂದನ್ನು ರೂಪಿಸಿದರು. ತುಕಾರಾಮ ಬರ್ಬರವಾಗಿ ಕೊಲೆಯಾದ ದಿನ ಮತ್ತು ಅದರ ಹಿಂದಿನ ದಿನ ಹೋಟೆಲ್‌ಗಳು, ಬಾರ್‌ಗಳು ಮತ್ತು ವೈನ್‌ಶಾಪಿನಲ್ಲಿ ಇರುವ ಸಿಸಿಟಿ ಫುಟೇಜ್ ಪರಿಶೀಲಿಸಲು ತಮ್ಮ ತನಿಖಾ ತಂಡಕ್ಕೆ ತಿಳಿಸಿದರು. ಅದರಂತೆ ವಿಶೇಷ ತನಿಖಾ ತಂಡದ ಸದಸ್ಯರು ಇಡೀ ಘಟಪ್ರಭಾ ಎಲ್ಲ ಜಾಲಾಡಿದರು. ಕೊನೆಗೆ ಸರ್ಕಲ್‌ನಲ್ಲಿರುವ 'ಕೃಷ್ಣಾ ವೈನ್‌ಶಾಪ್'ನಲ್ಲಿ ಕೊಲೆಯಾದ ತುಕಾರಾಮ ಶಿಂಗೆಯೊಂದಿಗೆ ಸುಮಾರು 35 ವರ್ಷದ ವ್ಯಕ್ತಿಯೊಬ್ಬ ಕಾಣಿಸುತ್ತಿದ್ದನು. ತಕ್ಷಣವೇ ಸಿಸಿಟಿವಿ ಫುಟೇಜ್‌ನಿಂದ ಅನಾಮಧೇಯ ವ್ಯಕ್ತಿಯ ಫೋಟೋ ತೆಗೆದುಕೊಂಡು ಇನ್ಸ್‌ಪೆಕ್ಟರ್ ಮುಲ್ಲಾ ಅವರಿಗೆ ತೋರಿಸಿದಾಗ ಫೋಟೋ ನೋಡಿ ನಸುನಕ್ಕು 'ಈ ವ್ಯಕ್ತಿಯನ್ನು ಪತ್ತೆಹಚ್ಚಿದರೆ ನಮ್ಮ ಕೆಲಸ ಸಕ್ಸಸ್' ಎಂದರು. ಆದಷ್ಟು ಬಸ್ ನಿಲ್ದಾಣ ಮತ್ತು ರೇಲ್ವೆ ನಿಲ್ದಾಣಗಳಲ್ಲಿ ನಾವು ಸರ್ಚ್ ಮಾಡಿದರೆ ಏನಾದರೂ ಸುಳಿವು ದೊರೆಯಬಹುದು ಎಂಬ ಸಂದೇಹ ತನಿಖಾಧಿಕಾರಿ ಮುಲ್ಲಾ ಅವರದಾಗಿತ್ತು. ಇದಕ್ಕಾಗಿ ವಿಶೇಷ ತನಿಖಾ ತಂಡ ಮೈ ಕೊರೆಯುವ ಚಳಿಯಲ್ಲೂ ಕೂಡಾ ತಿಂಗಳಾನುಗಟ್ಟಲೇ ಅಂಡಲೆಯಿತು.




ತುಕಾರಾಮನ ತಾಯಿ ಶಾಣವ್ವ ಮತ್ತು ಅಜ್ಜಿ

### ರೇಲ್ವೆ ನಿಲ್ದಾಣಗಳಲ್ಲಿ ಹುಡುಕಾಟ...


ಅನಾಮಧೇಯ ಸಂಶಯಿತ ಹಂತಕನ ಪತ್ತೆ ಹಿಂದೆ ಬಿದ್ದ ವಿಶೇಷ ತನಿಖಾ ತಂಡದ ಹತ್ತಿರ ವೈನ್‌ಶಾಪ್‌ನ ಸಿಸಿಟಿವಿ ಫುಟೇಜ್‌ನಲ್ಲಿರುವ ಫೋಟೋ ಮಾತ್ರ. ಇದೇ ಫೋಟೋ ಹಿಡಿದುಕೊಂಡು ವಿಶೇಷ ತನಿಖಾ ತಂಡ ರಾಯಭಾಗ, ಸಾಂಗಲಿ, ಮಿರಜ್, ಕುಡಚಿ, ಕರಾಡ, ಸಾತಾರಾ, ಪುಣೆ, ಬೆಳಗಾವಿ, ಹುಬ್ಬಳ್ಳಿ, ಲೊಂಡಾ, ಗೋವಾದ ರೇಲ್ವೆ ನಿಲ್ದಾಣಗಳಲ್ಲಿ ನಿದ್ರೆಯಿಲ್ಲದೆ ರಾತ್ರಿಗಳನ್ನು ಕಳೆದರು. ಹೂ... ಹೂಂ... ಫೋಟೋ ಯಾರು ಗುರುತಿಸಲು ಸಿದ್ಧರಿಲ್ಲ. ಏನು ಮಾಡಬೇಕು... ಹೇಗೆ ಹುಡುಕಬೇಕು... ದಿನಗಳು ಉರುಳತೊಡಗಿವೆ ಎಂದು ಚಿಂತಿಸಿದ ವಿಶೇಷ ತನಿಖಾ ತಂಡ ಕೊನೆಯ ಬಾರಿ ಎಂಬಂತೆ ಮಿರಜ್ ರೇಲ್ವೆ ಸ್ಟೇಷನ್‌ಗೆ ಎಂಟ್ರಿ ಕೊಟ್ಟರು.

### ಆರೀಫ್ ನೀಡಿದ ಹಂತಕನ ಸುಳಿವು...

ರೇಲ್ವೆ ನಿಲ್ದಾಣದ ಮೂಲೆಯೊಂದರಲ್ಲಿ ಸಾಯಂಕಾಲ ಸಮಯದಲ್ಲಿ ಸುಮಾರು 30ರ ಆಸು ಪಾಸಿನ ತರುಣನೊಬ್ಬ ಪ್ಲಾಸ್ಟಿಕ್ ಬಾಟಲಿ ತುಂಬಿದ ಚೀಲ ಹಿಡಿದು ನಿಂತಿದ್ದನು. ವಿಶೇಷ ತನಿಖಾ ತಂಡದ ಸಿಬ್ಬಂದಿಗಳು ಆತನ ಸಮೀಪಕ್ಕೆ ಹೋಗಿ ಆತನನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾತನಾಡುತ್ತ, ತಮ್ಮ ಹತ್ತಿರ ಇದ್ದ ಕೃಷ್ಣಾ ವೈನ್ ಶಾಪ್ ಸಿಸಿಟಿವಿಯಲ್ಲಿ ಸೆರೆ ಸಿಕ್ಕಿದ್ದ ವ್ಯಕ್ತಿಯ ಫೋಟೋ ತೋರಿಸಿ 'ಇವನನ್ನು ಎಲ್ಲಿಯಾದರೂ ನೋಡಿದ್ದಿಯಾ...?' ಎಂದು ಕೇಳಿದಾಗ ಆತ ಗಸಕ್ಕನೇ ಫೋಟೋ ತೆಗೆದುಕೊಂಡು ಇಂವಾ 'ಪ್ರದೀಪ ಅಲಿಯಾಸ್ ಸಂತೋಷ' ಎಂದು ಬಡಬಡನೇ ಆತನ ಬಗ್ಗೆ ಹೇಳಿಬಿಟ್ಟನು. ನಿಜವಾಗಿ ವಿಶೇಷ ತನಿಖಾ ತಂಡಕ್ಕೆ 'ಹುಡುವ ಬಳ್ಳಿ ಕಾಲಿಗೆ ತೊಡಕಿದಂತೆ' ಆಗಿತ್ತು. ಇಷ್ಟು ದಿವಸ ಯಾರಿಗಾಗಿ ಹುಡುಕಾಟ ನಡೆಸಿದ್ದಾರೋ ಅವನ ಸಂಪೂರ್ಣ ಸುಳಿವು ದೊರಕಿತ್ತು. ಆರೀಫ್‌ನು ಕೂಡಾ ಕ್ರಿಮಿನಲ್. ಈತ ಫೋಟೋದಲ್ಲಿರುವ ಪ್ರದೀಪ ಅಲಿಯಾಸ್ ಸಂತೋಷ ಬಾಬು ನಾಯಕನ ಪರಮ ಸ್ನೇಹಿತನು ಕೂಡಾ ಹೌದು. ಆರೀಫ್‌ನ ಖರ್ಚಿಗೆ ಹಣ ನೀಡಿದ ವಿಶೇಷ ತನಿಖಾ ತಂಡದ ಪೊಲೀಸರು ಆತ ಸಿಕ್ಕರೆ ತಕ್ಷಣ ನಮಗೆ ಕರೆ ಮಾಡಬೇಕು ಎಂದು ಹೇಳಿ ತಿರುಗಿ ಘಟಪ್ರಭಾಕ್ಕೆ ಬಂದಿದ್ದರು. ಆರೀಫ್ ತಿಳಿಸಿದ ಮಾಹಿತಿಯಂತೆ ಸಂತೋಷನ ಹಿನ್ನೆಲೆ.



ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ



ಪಿಎಸ್‌ಐ ಎಸ್.ಆರ್. ಕಣವಿ

### ಹುಟ್ಟಾ ಕ್ರಿಮಿನಲ್ ಪ್ರದೀಪ...

ಮೂಲತಃ ಚಿಕ್ಕೋಡಿ ತಾಲ್ಲೂಕಿನ ಶಮನೇವಾಡಿ ಗ್ರಾಮದ ರಹವಾಸಿ ಆಗಿದ್ದ ಪ್ರದೀಪ ಅಲಿಯಾಸ್ ಸಂತೋಷ ಬಾಬು ನಾಯಿಕ ಆಗಲೇ ಮೋಟಾರ್ ಸೈಕಲ್ ಕಳ್ಳತನ, ಇನ್ನಿತರ ಸಣ್ಣ-ಪುಟ್ಟ ಕಳ್ಳತನ ಮಾಡಿ ಊರಲ್ಲಿ ಛೀ... ಥೂ ಎನಿಸಿಕೊಂಡು ಬಿಟ್ಟಿದ್ದನು. ಬಳಕೆಗಾಗುವಷ್ಟು ಶಿಕ್ಷಣ ಕಲಿತಿದ್ದ ಈತನ ತಂದೆ-ತಾಯಿ ಈತನ ಕ್ರಿಮಿನಲ್ ಚಟುವಟಿಕೆ ಕಂಡು ಮನೆಗೆ ಸೇರಿಸಿಕೊಳ್ಳಲಿಲ್ಲ. ಹೀಗಾಗಿ ಈತ ಘಟಪ್ರಭಾ, ಮಿರಜ್, ಸಾತಾರ, ಪುಣೆ ತನಕ ರೇಲ್ವೆಯಲ್ಲಿ ಪ್ರಯಾಣಿಸಿ ಖಾಲಿ ಪ್ಲಾಸ್ಟಿಕ್ ಬಾಟಲಿಗಳನ್ನು ಆರಿಸಿ ಅವುಗಳನ್ನು ಮಾರಿ ಬಂದ ದುಡ್ಡಿನಲ್ಲಿ ಕುಡಿದು ತಿಂದು ಮಜಾ ಮಾಡಿ ರೇಲ್ವೆ ನಿಲ್ದಾಣದ ಪರಿಸರದಲ್ಲಿ ಮಲಗುತ್ತಿದ್ದನು.





ಸ್ನೇಹಿತ ತುಕಾರಾಮನನ್ನು ಕೊಲೆ ಮಾಡಲು ರೇಲ್ವೆ ಹಳಿ ಗುಂಟ ಕರೆತಂದದ್ದನ್ನು ತನಿಖಾಧಿಕಾರಿ ಮತ್ತು ಸಿಬ್ಬಂದಿಗಳಿಗೆ ತೋರಿಸುತ್ತಿರುವ ಹಂತಕ ಸಂತೋಷ

### ಸಂತೋಷನಿಗೆ ಪ್ರೇಯಸಿಯಿದ್ದಳು...

ಅವಗುಣ ಪರಿಪೂರ್ಣದ ಅಪರಾವತಾರದಂತಿದ್ದ ಪ್ರದೀಪ ಅಲಿಯಾಸ್ ಸಂತೋಷನಿಗೆ ಸಾತಾರಾ ಮೂಲದ ಅಶ್ವಿನಿ ವಾಘಮೋಡೆ ಎಂಬ ಹೆಂಗಸೊಬ್ಬಳು ಪ್ರೇಯಸಿ ಆಗಿದ್ದಳು. ಈಕೆ ಮೊದಲು ಮದುವೆಯಾಗಿ ಎರಡು ಮಕ್ಕಳಿದ್ದವು. ರೇಲ್ವೆ ನಿಲ್ದಾಣದಲ್ಲಿ ಅಬ್ಬೇಪಾರಿಯಂತಿದ್ದ ಸಂತೋಷನಿಗೆ ಆಕರ್ಷಿತಳಾದ ಈಕೆ ತನ್ನ 10 ವರ್ಷದ ಗಂಡು ಮಗ, 2 ವರ್ಷದ ಹೆಣ್ಣು ಮಗುವಿನೊಡನೆ ಬೆನ್ನತ್ತಿ ಬಂದು ಬಿಟ್ಟಳು. ಮಕ್ಕಳನ್ನು ಒಂದೆಡೆ ಬಿಟ್ಟು ಪ್ರೇಯಸಿಯೊಡನೆ ಪ್ಲಾಸ್ಟಿಕ್ ಬಾಟಲ್ ಆರಿಸಿ ತಮ್ಮ ತುತ್ತಿನ ಚೀಲ ತುಂಬಿಸಿಕೊಳ್ಳುತ್ತ ಚೈನಿ ಮಾಡುತ್ತಿದ್ದರು. ಇತ್ತ ಸಾತಾರ ಪುಣೆ ಕಡೆಗೆ ಹೋದಾಗ ಇದೀಗ ಪೊಲೀಸರ ಇನ್‌ಫಾರ್ಮರ್ ಆಗಿರುವ ಆರೀಫ್ ಜತೆಯಾಗಿದ್ದನು. ಸಂತೋಷನ ಗೈರು-ಹಾಜರಿಯಲ್ಲಿ ಆತನೂ ಅಶ್ವಿನಿ ಜತೆಗೆ ಒಮ್ಮೊಮ್ಮೆ ಬೆತ್ತಲಾಗುತ್ತಿದ್ದನು. ಒಂದರ್ಥದಲ್ಲಿ ಅಶ್ವಿನಿ ಪಬ್ಲಿಕ್ ಕ್ಯಾರಿಯರ್ ಆಗಿದ್ದಳು. ಆದರೂ ಸಂತೋಷ ನಾಯಿಕ ಅಶ್ವಿನಿಯನ್ನು ಬಹಳಷ್ಟು ಪ್ರೀತಿಸುತ್ತಿದ್ದನು.

### ಪೊಲೀಸರಿಗೆ ಸೆರೆ ಸಿಕ್ಕ ಸಂತೋಷ...


ಡಿಸೆಂಬರ್ ಆರಂಭಗೊಂಡು 2-3 ದಿನಗಳು ಕಳೆದವು. ಏನು ಮಾಡಿದರೂ ಸಂಶಯಿತ ಹಂತಕ ಸಂತೋಷನ ಸುಳಿವು ದೊರೆಯಲಿಲ್ಲ. ಘಟಪ್ರಭಾ ಪೊಲೀಸರು ಅವನ ಊರಾದ ಶಮನೇವಾಡಿ, ನಿಪ್ಪಾಣಿ, ಚಿಕ್ಕೋಡಿ ತಿರುಗಿದರೂ ಪತ್ತೆ ಆಗಲಿಲ್ಲ. ಇತ್ತ ಇನ್‌ಫಾರ್ಮರ್ ಆರೀಫ್‌ನು ಕೂಡಾ ಸಂತೋಷನನ್ನು ಹುಡುಕಲು ಪ್ರಯತ್ನ ನಡೆಸಿದ್ದನು. ಅಂದು ಡಿಸೆಂಬರ್ 4ನೇ ತಾರೀಖಿನ ದಿನ ಪ್ರದೀಪ ಅಲಿಯಾಸ್ ಸಂತೋಷ ಪ್ಲಾಸ್ಟಿಕ್ ಬಾಟಲ್ ಆರಿಸುತ್ತ ಸಾತಾರದ ರೈಲು ಏರಿದ್ದನ್ನು ಆರೀಫ್ ಪಕ್ಕಾ ಗಮನಿಸಿದ್ದನು. ತಕ್ಷಣ ಘಟಪ್ರಭಾ ಪೊಲೀಸರಿಗೆ ಇನ್‌ಫಾರ್ಮ್ ನೀಡಿ ತಕ್ಷಣ ಹೊರಟು ಬರಲು ತಿಳಿಸಿದನು. ಅದರಂತೆ ಶರವೇಗದಲ್ಲಿ ತಂಡ ಹೊರಟು ನಿಂತಿತು. ಪುಣೆಗೆ ಸಮೀಪವಿರುವ ನೀರಾ ರೇಲ್ವೆ ಸ್ಟೇಷನ್‌ಗೆ ಬರಬೇಕೆಂದು ಆರೀಫ್ ತಿಳಿಸುತ್ತಾನೆ. ಅದರಂತೆ ವಿಶೇಷ ತನಿಖಾ ತಂಡ ಸನ್ನದ್ಧವಾಗಿ ನೀರಾ ಸ್ಟೇಷನ್‌ನಲ್ಲಿ ನಿಂತಾಗ ಪೊಲೀಸರನ್ನು ನೋಡಿ ಸ್ಟೇಷನ್‌ನಿಂದ ಓಡಿ ಹೋಗುವಾಗ ಅಲ್ಲಿದ್ದ ಔಟ್‌ಪೋಸ್ಟ್ ಪೊಲೀಸರ ಕೈಗೆ ತಗುಲಿ ಹಾಕಿಕೊಂಡನು. ನಂತರ ವಿಶೇಷ ತನಿಖಾ ತಂಡದ ಸಿಬ್ಬಂದಿ ಅವರಿಗೆ ವಿನಂತಿಸಿ 'ಕೊಲೆ ಪ್ರಕರಣದಲ್ಲಿ ಬೇಕಾಗಿದ್ದಾನೆ' ಎಂದು ಘಟಪ್ರಭಾದತ್ತ ಕರೆ ತಂದರು.



ಕೊಲೆಯಾದ ತುಕಾರಾಮನ ಕೈ ಮೇಲಿರುವ ಟ್ಯಾಟು ಗುರುತುಗಳು

### ಸತ್ಯವನ್ನು ಬಾಯಿ ಬಿಟ್ಟ ಸಂತೋಷ...

ಚತುರ ಮತ್ತು ಧಾಡಸಿ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಪ್ರದೀಪ ಅಲಿಯಾಸ್ ಸಂತೋಷ ನಾಯಿಕನಿಗೆ 'ನೀನು ಯಾಕೆ ತುಕಾರಾಮನನ್ನು ಕೊಲೆ ಮಾಡಿದೆ...?' ಎಂದಾಗ ಮೊದ-ಮೊದಲು ಕಾಗಕ್ಕ-ಗುಬ್ಬಕ್ಕನ ಕಥೆ ಹೇಳಲು ಹೊರಟಿದ್ದ ಕ್ರಿಮಿನಲ್ ಸಂತೋಷನಿಗೆ ಯಾವಾಗ ಪೊಲೀಸ್ ಭಾಷೆ ಪ್ರಯೋಗಿಸಲಾಯಿತೋ... 'ಬ್ಯಾಡ್ರಿ ಸಾಹೇಬ್ರ, ನಾನು ಖರೇ ಹೇಳ್ತೀನಿ' ಎಂದು ತುಕಾರಾಮನ ಕೊಲೆ ಮಾಡಿದ್ದನ್ನು ಪಿನ್ ಟು ಪಿನ್ ಹೇಳಿದನು.



ಕೊಲೆಯಾದ ತುಕಾರಾಮನ ಶವ ವೀಕ್ಷಣೆ ಮಾಡುತ್ತಿರುವ ಸಿಪಿಐ ಹೆಚ್.ಡಿ. ಮುಲ್ಲಾ ಮತ್ತು ಸಿಬ್ಬಂದಿಗಳು

### ನನ್ನ ಪ್ರೇಯಸಿಯ ಜತೆಗೆ ಸಂಬಂಧ

ಪ್ರದೀಪ ಅಲಿಯಾಸ್ ಸಂತೋಷ ಹೇಳಿದಂತೆ ಇಲ್ಲಿ ವರದಿ ಮಾಡಲಾಗಿದೆ. ಸಂತೋಷನ ಪ್ರೇಯಸಿ ಅಶ್ವಿನಿ ವಾಘಮೋಡೆ ಕಂಡವರೊಡನೆ ಬೆತ್ತಲಾಗುವ ಚಟದವಳು. ಹೀಗಾಗಿ ಸಂತೋಷ ಆಕೆಯನ್ನು ಎಲ್ಲೂ ಬಿಡದೇ ಕರೆದುಕೊಂಡು ಹೋಗುತ್ತಿದ್ದನು. ಕಳೆದ ಸುಮಾರು ದಿನಗಳಿಂದಲೂ ಕೊಲೆಯಾದ ತುಕಾರಾಮ ಶಿಂಗೆ ಸಂತೋಷನ ದೋಸ್ತನಾಗಿದ್ದನು. ಆತನು ಕೂಡಾ ರೇಲ್ವೆ ನಿಲ್ದಾಣದಲ್ಲಿ ಖಾಲಿ ಪ್ಲಾಸ್ಟಿಕ್ ಬಾಟಲ್ ಆರಿಸುವ ಕೆಲಸ ಮಾಡುತ್ತ ಕೆಲವು ಕೆಟ್ಟ ಚಟ ಬೆಳೆಸಿಕೊಂಡಿದ್ದನು.



ಹಂತಕ ಸಂತೋಷನನ್ನು ಬಂಧಿಸಿ ಕರೆತರುತ್ತಿರುವ ವಿಶೇಷ ತನಿಖಾ ತಂಡದ ಸಿಬ್ಬಂದಿಗಳು

ಇತ್ತೀಚಿಗೆ ಸಂತೋಷನು ನಪುಂಸಕನಂತಾಗಿದ್ದನು. ಹೀಗಾಗಿ ಆತ ಅಶ್ವಿನಿ ದೇಹದ ಮೇಲೆ ಕೈ ಆಡಿಸುತ್ತ ಮಲಗುವುದೇ ಚಟ. ಆದರೆ ಅಶ್ವಿನಿ ಮಾತ್ರ ತೀರದ ದಾಹ ಹೊಂದಿದ್ದಳು. ಇನ್ನು 25ರ ಹರೆಯದ ತುಕಾರಾಮನಿಗೂ ಅಶ್ವಿನಿ ಆಕರ್ಷಿತಳಾಗಿ ಕಂಡಳು. ಅದೊಂದು ದಿನ ಸಂತೋಷನ ಗೈರು-ಹಾಜರಿಯಲ್ಲಿ ಅಶ್ವಿನಿಯ ದೇಹದ ಮೇಲೆ ವಿಜೃಂಭಿಸಿ ಬೆವರಿಳಿಸಿದ್ದನು. ಇದೇ ರೀತಿ ಅಶ್ವಿನಿ ಮತ್ತು ತುಕಾರಾಮ ತಮ್ಮ ಕಳ್ಳ ಕಾಮವನ್ನು ಮುಂದುವರೆಸಿದಾಗ ಇಬ್ಬರೂ ಸಂತೋಷನ ಕೈಯಲ್ಲಿ ಬೆತ್ತಲಾಗಿ ಸಿಕ್ಕರು. ಅಂದೇ ಸಂತೋಷ ತನ್ನ ಪ್ರೇಯಸಿ ಜತೆಗೆ ಅನೈತಿಕ ಸಂಬಂಧ ಹೊಂದಿರುವ ಈತ ಬದುಕಿರಬಾರದು ಎಂಬ ನಿರ್ಧಾರಕ್ಕೆ ಬಂದನು.

### ಪ್ರೇಯಸಿಯ ಎದುರಿಗೆ ಬೆತ್ತಲಾಗಿರಿಸಿ ಕೊಲೆ...

ಅಂದು ದಿನಾಂಕ 21-10-2025ರ ದಿನವಾಗಿತ್ತು. ಪ್ರೇಯಸಿ ಅಶ್ವಿನಿ ಮತ್ತು ಸ್ನೇಹಿತ ತುಕಾರಾಮನ ಜತೆಗೆ ಸಂತೋಷ ರಾತ್ರಿ 8 ಗಂಟೆಯ ಸುಮಾರಿಗೆ ಧೂಪದಾಳದತ್ತ ಹೊರಟನು. ಹೋಗುವಾಗ ಸರ್ಕಲ್‌ನಲ್ಲಿ ಕಂಠ ಪೂರ್ತಿ ಸಾರಾಯಿ ಕುಡಿದು ಸ್ವಲ್ಪ ಪಾರ್ಸಲ್ ಕೂಡಾ

☞ 14

## ವಾರದ ಉತ್ತಮ ವಿಚಾರ

# ದೇವಕನ್ಯೆಯರಾದ ದೇವದಾಸಿಯರು...

**ವೃತ್ತಿಯ ಬದುಕಿಗಾಗಿ ಇಬ್ಬರೂ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡು, ಅಲಹಾಬಾದ್ ನಗರದಲ್ಲಿ ಕೋಠಾ ಸ್ಥಾಪಿಸಿಕೊಂಡು ಗಾಯನದ ಮೂಲಕ ಜೀವನ ಸಾಗಿಸುತ್ತಿದ್ದರು. ಜಾನಕಿಯ ರೂಪಕ್ಕೆ ಮರುಳಾಗಿದ್ದ ಯುವಕನೊಬ್ಬ ಆಕೆ ಪ್ರೀತಿ ನಿರಾಕರಿಸಿದಳು ಎಂಬ ಏಕೈಕ ಕಾರಣಕ್ಕಾಗಿ ಜಾನಕಿಬಾಯಿಗೆ 56 ಬಾರಿ ಚೂರಿಯಿಂದ ಇರಿದಿದ್ದ. ಈ ದುರಂತದ ಘಟನೆಯ ನಡುವೆ ಬದುಕುಳಿದ ಆಕೆಗೆ ಅಲ್ಲಿನ ಜನತೆ ಚಪ್ಪನ್ ಚೂರಿ ಎಂದು ಹೆಸರಿಟ್ಟಿದ್ದರು. ಚಪ್ಪನ್ ಎಂದರೆ 56 ಎಂದರ್ಥ.**

ದಕ್ಷಿಣ ಭಾರತದಲ್ಲಿ ದೇಗುಲಗಳಲ್ಲಿ ನೃತ್ಯ ಮತ್ತು ಸಂಗೀತವನ್ನು ವೃತ್ತಿಯಾಗಿಸಿಕೊಂಡಿದ್ದ ಹೆಣ್ಣು ಮಕ್ಕಳು ದೇವದಾಸಿಯರು ಎಂದು ಕರೆಸಿಕೊಂಡರು. ಆದರೆ, ಉತ್ತರ ಭಾರತದಲ್ಲಿ ಇದೇ ವೃತ್ತಿಯಲ್ಲಿದ್ದ ಹೆಣ್ಣು ಮಕ್ಕಳನ್ನು ತವೈಫ್ ಅಥವಾ ತವಾಯಫ್ ಎಂದು ಕರೆಯಲಾಯಿತು. ಸಾಮಾಜಿಕ ದೃಷ್ಟಿಕೋನದಲ್ಲಿ ಇವರನ್ನು ವೇಶ್ಯೆಯರು ಎಂದೂ ಸಹ ಪರಿಗಣಿಸಲಾಗಿತ್ತು. ಆದರೆ, ನನಗೆ ಇವರ ಕುರಿತು ಮಾತನಾಡುವಾಗ ಅಥವಾ ಬರೆಯುವಾಗ ವೇಶ್ಯೆಯರು ಎಂಬ ಶಬ್ದವನ್ನು ಬಳಸಲು ಮನಸ್ಸು ಒಪ್ಪುವುದಿಲ್ಲ.

ಒಬ್ಬ ಬರಹಗಾರನಿಗೆ ಅಥವಾ ಸಂಶೋಧಕನಿಗೆ ವರ್ತಮಾನವನ್ನು ಅಥವಾ ಇತಿಹಾಸವನ್ನು ನೋಡುವ ಕಣ್ಣುಗಳಿದ್ದರೆ ಸಾಲದು, ಅವುಗಳನ್ನು ಸಮಗ್ರವಾಗಿ ವಿವಿಧ ಆಯಾಮಗಳಿಂದ ಗ್ರಹಿಸುವ ವಿಶಾಲವಾದ ಹೃದಯವೂ ಇರಬೇಕು ಎಂದು ನಂಬಿದವನು ನಾನು.

ಐದು ವರ್ಷಗಳ ಹಿಂದೆ, ಪದಗಳಿವೆ ಎದೆಯೊಳಗೆ, ಎಂಬ ಭಾರತದ ದೇವದಾಸಿಯರ ಸಾಂಸ್ಕೃತಿಕ ಪಲ್ಲಟಗಳ ಇತಿಹಾಸ ಕುರಿತು ಬರೆಯುವಾಗ, ಈ ಕೃತಿಯಲ್ಲಿ ಉತ್ತರ ಭಾರತದ ತವೈಫ್ ಎಂದು ಕರೆಸಿಕೊಳ್ಳುವ ದೇವದಾಸಿಯರ ಒಂದು ಅಧ್ಯಾಯ ಇರಲಿ ಎಂದು ನಿರ್ಧರಿಸಿದೆ. ಈ ಕಾರಣದಿಂದ ದೆಹಲಿ, ಲಕ್ನೋ, ವಾರಣಾಸಿ ಮತ್ತು ಅಲಹಾಬಾದ್ ನಗರಗಳಿಗೆ ಭೇಟಿನೀಡಿದೆ.

ಹದಿನಾಲ್ಕು ದಿನಗಳ ಪ್ರವಾಸ ಮತ್ತು ಅಧ್ಯಯನದ ಅವಧಿಯಲ್ಲಿ ನನ್ನೆದುರು ತವೈಫ್ ಗಳ ವಿಶಾಲವಾದ ಲೋಕ ಮತ್ತು ಸಮಗ್ರ ಇತಿಹಾಸವೊಂದು ತೆರೆದುಕೊಂಡಿತು. ಭಾರತಕ್ಕೆ ಪರ್ಷಿಯನ್ ದೊರೆಗಳು ದಂಡೆತ್ತಿ ಬರುವಾಗ, ಕೇವಲ ಕತ್ತಿ, ಗುರಾಣಿ ಮತ್ತು ಸೈನಿಕರೊಂದಿಗೆ ಮಾತ್ರ ಬರಲಿಲ್ಲ. ಅವರ ಜೊತೆ ಹಕೀಮರು ಬಂದರು, ಸೂಫಿ ಸಂತರು ಬಂದರು. ಜೊತೆಗೆ ನವಾಬರಿಗೆ ಅಥವಾ ದೊರೆಗಳಿಗೆ ಮನರಂಜನೆ ನೀಡಲು ಹಾಡುಗಾರ್ತಿಯರು ಮತ್ತು ನೃತ್ಯಗಾರ್ತಿಯರು ಬಂದರು.

ತವೈಫ್ ಹೆಸರಿನ ಈ ಕಲಾವಿದೆಯರಿಂದ ಉತ್ತರ ಭಾರತದ ಬಡ ಮುಸ್ಲಿಂ ಕುಟುಂಬದ ಹೆಣ್ಣು ಮಕ್ಕಳು ನೃತ್ಯ ಮತ್ತು ಹಾಡುಗಳನ್ನು ಕಲಿತು ನವಾಬರು ಮತ್ತು ಶ್ರೀಮಂತರ ಮನೆಗಳ ಮೆಹಫಿಲ್ ಎಂದು ಕರೆಸಿಕೊಳ್ಳುವ ಸಂತೋಷಕೂಟಗಳಲ್ಲಿ ಮನರಂಜನೆ ನೀಡಲು ಆರಂಭಿಸಿದರು. ಜೊತೆಗೆ ಕೋಠಾ ಎಂಬ ಹೆಸರಿನಲ್ಲಿ ನಮ್ಮಲ್ಲಿ ಜಮೀನ್ದಾರ್ ಎಂದು ಕರೆಸಿಕೊಳ್ಳುವ ಜನರನ್ನು ಅಲ್ಲಿ ಭೂಮಿಹಾರ್ ಎಂದು ಕರೆಯಲಾಗುತ್ತದೆ. ಅವರಿಗೆ ಉಪಪತ್ನಿಯರಂತೆ ಬದುಕಿದರು. ಹಾಗಾಗಿ ತವೈಫ್ ಎಂದರೆ, ವೇಶ್ಯೆಯರು ಎಂಬ ಪಟ್ಟವೂ ಅವರಿಗೆ ಲಭಿಸಿತು.

ಇವರಲ್ಲಿ ಇಪ್ಪತ್ತಕ್ಕೂ ಹೆಚ್ಚು ಕಲಾವಿದೆಯರು 1857ರ ಸಿಪಾಯಿ ದಂಗೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿ, ಕಾನ್ಪುರ ಮತ್ತು ಅಲಹಾಬಾದ್ ನಗರಗಳಲ್ಲಿ ಬ್ರಿಟಿಷರಿಂದ ಸಾರ್ವಜನಿಕವಾಗಿ ಗಲ್ಲಿಗೇರಿದ್ದಾರೆ. ಅವರೆಲ್ಲರ ಕುರಿತು ನನ್ನ ಕೃತಿಯಲ್ಲಿ ವಿವರವಾಗಿ ದಾಖಲಿಸಿದ್ದೀನಿ. ನನಗೆ ಲಕ್ನೋ ಎಂದರೆ, ಠುಮ್ರಿ ಗಾಯನ ಮತ್ತು ಕಥಕ್ ನೃತ್ಯವನ್ನು ಆರಾಧಿಸಿದ ಅವಧ್ ಸಂಸ್ಥಾನ ಎಂದು ಕರೆಸಿಕೊಳ್ಳುತ್ತಿದ್ದ ಲಕ್ನೋ ದೊರೆ ವಾಜಿದ್ ಆಲಿ ಷಾ ನೆನಪಾಗುತ್ತಾನೆ. ಆತ ಒಳ್ಳೆಯ ನೃತ್ಯಪಟುವಾಗಿದ್ದ ಜೊತೆಗೆ 53 ಮಂದಿ ತವೈಫ್ ಗಳನ್ನು ಉಪಪತ್ನಿಯರಾಗಿ ಇಟ್ಟುಕೊಂಡಿದ್ದನು.

ಲಕ್ನೋ ನಗರದ ಉಮ್ರಾವೋ ಜಾನ್, ಬೇಗಂ ಅಖ್ತರ್, ವಾರಣಾಸಿಯಲ್ಲಿ ಬಡಿ ಮೋತಿಬಾಯಿ, ಸಿದ್ದೇಶ್ವರಿ ದೇವಿ, ಮತ್ತು ಗೋಹರ್ ಜಾನ್ ಹಾಗೂ ಅಲಹಾಬಾದಿನಲ್ಲಿ ರಸೂಲನ್ ಬಾಯಿ ಮತ್ತು ಜಾನಕಿ ಬಾಯಿ ಎಂಬ ಕಲಾವಿದೆಯರ ಇತಿಹಾಸ ಕಲೆಹಾಕಿಕೊಂಡು ಬಂದಿದ್ದೆ. ನೃತ್ಯಗಾತಿ ಉಮ್ರಾವೋ ಜಾನ್ ಹೊರತುಪಡಿಸಿ, ಮಹಾನ್ ಗಾಯಕಿಯರಾಗಿದ್ದ ಉಳಿದ ಕಲಾವಿದೆಯರ ಕುರಿತಾಗಿ ಈಗ ಬರೆಯುತ್ತಿರುವ ಗಾನಗಂಧರ್ವರು ಎಂಬ ಕೃತಿಯಲ್ಲಿ ಸಮಗ್ರವಾಗಿ ದಾಖಲಿಸುತ್ತಿದ್ದೀನಿ.

ನೀವು ವಾರಣಾಸಿಯಲ್ಲಿ ಕಾಶಿ ವಿಶ್ವನಾಥನ ದೇಗುಲದಿಂದ ಹೊರಬಂದು ಬಲಬಾಗದ ರಸ್ತೆಯುದ್ದಕ್ಕೂ ದಿಬ್ಬದಂತೆ ಇರುವ ಪ್ರದೇಶವನ್ನು ದಾಟಿದರೆ ನಿಮಗೆ ಅಲ್ಲಿನ ದಾಲ್ ಮಂಡಿ ಪ್ರದೇಶ ಸಿಗುತ್ತದೆ. ದಾಲ್ ಮಂಡಿ ಹತ್ತಿರ ಬನಿಯಾ ಬಾಗ್ ಎಂಬಲ್ಲಿ ಬಿಸ್ಮಿಲ್ಲಾಖಾನರ ಮನೆಯಿದೆ. ಈ ಪ್ರದೇಶದ ಕಿರಿದಾದ ಗಲ್ಲಿಗಳಲ್ಲಿ ತವೈಫ್ ಗಳು ಕೋಠಾ ಹೆಸರಿನ ತಮ್ಮ ಮನೆಗಳಲ್ಲಿ ನೃತ್ಯ ಸಂಗೀತದ ಪ್ರದರ್ಶನ ನೀಡುತ್ತಿದ್ದರು. ಬಿಸ್ಮಿಲ್ಲಾ ಖಾನ್ ರಸ್ತೆಯ ಬದಿ ನಿಂತು ಕಿಟಕಿಯಿಂದ ಕೇಳಿ ಬರುತ್ತಿದ್ದ ಗಾಯನವನ್ನು ಕಂಠಪಾಠ ಮಾಡಿಕೊಂಡು ಬಂದು ಶಹನಾಯ್ ವಾದ್ಯದಲ್ಲಿ ನುಡಿಸುತ್ತಿದ್ದರು. ಈ ಕುರಿತು ನನ್ನ ಕೃತಿ ಸಂಗೀತ ಲೋಕದ ಸಂತ ಬಿಸ್ಮಿಲ್ಲಾ ಖಾನ್ ಕೃತಿಯನ್ನು ಆಸಕ್ತರು ಗಮನಿಸಬಹುದು.

ಬನಾರಸ್ ಮತ್ತು ವಾರಣಾಸಿ ಎಂದು ಕರೆಸಿಕೊಳ್ಳುವ ಈ ಐತಿಹಾಸಿಕ ನಗರಕ್ಕೆ ಹಲವು ಮಹತ್ವದ ಸಾಂಸ್ಕೃತಿಕ ಆಯಾಮಗಳಿವೆ. ಚಿತ್ರದಲ್ಲಿ ಇರುವ ಈ ರಸ್ತೆಯ ಕೋಠಾಗಳಲ್ಲಿ ಅಂದಿನ ದಿನಗಳಲ್ಲಿ ಭಾಂಗ್ ಅಂದರೆ, ಗಾಂಜ ಮಿಶ್ರಿತವಾದ ಬಾದಾಮಿ ಹಾಲು, ಬನಾರಸ್ ಪಾನ್ ಮತ್ತು ಮೋಜು, ಮಸ್ತಿ ಸಾಮಾನ್ಯವಾಗಿತ್ತು. ಶ್ರೀಮಂತ ವರ್ತಕರು, ಜಮೀನ್ದಾರರ ಪಾಲಿಗೆ ಕೋಠಾಗಳು ಸಂಜೆಯ ಹೊತ್ತಿನಲ್ಲಿ ಮನರಂಜನೆಯ ತಾಣಗಳಾಗಿದ್ದವು.



ಇಲ್ಲಿನ ಚಿತ್ರದಲ್ಲಿರುವ ಕಲಾವಿದೆಯ ಹೆಸರು ಜಾನಕಿಬಾಯಿ ಅಲಹಬಾದಿ ಎಂದು. ಈಕೆಯನ್ನು ಚಪ್ಪನ್ ಚೂರಿ ಎಂಬ ಅಡ್ಡ ಹೆಸರಿನಿಂದ ಕರೆಯಲಾಗುತ್ತಿತ್ತು. ಈಕೆ ಹಿಂದೂ ಮಗಳಾಗಿ ವಾರಣಾಸಿಯಲ್ಲಿ ಜನಿಸಿದಳು. ಈಕೆಯ ತಂದೆ ಓರ್ವ ಫೈಲ್ವಾನ್ ಆಗಿದ್ದ. ತನ್ನ ಇನ್ನೋರ್ವ ಪ್ರೇಯಿಸಿಗಾಗಿ, ಆ ಅಯೋಗ್ಯ ತಾಯಿ ಮತ್ತು ಮಗಳನ್ನು ಇನ್ನೊಬ್ಬರಿಗೆ ಮಾರಾಟ ಮಾಡಿದ್ದ. ತಾಯಿ ಮಗಳಿಬ್ಬರೂ ವಾರಣಾಸಿಯಿಂದ ತಪ್ಪಿಸಿಕೊಂಡು ಬಂದು ಅಲಹಾಬಾದ್ ನಲ್ಲಿ ನೆಲೆ ನಿಂತರು. ಮಗಳಿಗೆ ಒಳ್ಳೆಉ ಕಂಠವಿದ್ದ ಕಾರಣ, ಜಾನಕಿಯ ತಾಯಿ ಹಸ್ಸುಖಾನ್ ಎಂಬ ಗುರುವಿನಿಂದ ಸಂಗೀತ ಶಿಕ್ಷಣ ಕೊಡಿಸಿದಳು.

ವೃತ್ತಿಯ ಬದುಕಿಗಾಗಿ ಇಬ್ಬರೂ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡು, ಅಲಹಾಬಾದ್ ನಗರದಲ್ಲಿ ಕೋಠಾ ಸ್ಥಾಪಿಸಿಕೊಂಡು ಗಾಯನದ ಮೂಲಕ ಜೀವನ ಸಾಗಿಸುತ್ತಿದ್ದರು. ಜಾನಕಿಯ ರೂಪಕ್ಕೆ ಮರುಳಾಗಿದ್ದ ಯುವಕನೊಬ್ಬ ಆಕೆ ಪ್ರೀತಿ ನಿರಾಕರಿಸಿದಳು ಎಂಬ ಏಕೈಕ ಕಾರಣಕ್ಕಾಗಿ ಜಾನಕಿಬಾಯಿಗೆ 56 ಬಾರಿ ಚೂರಿಯಿಂದ ಇರಿದಿದ್ದ. ಈ ದುರಂತದ ಘಟನೆಯ ನಡುವೆ ಬದುಕುಳಿದ ಆಕೆಗೆ ಅಲ್ಲಿನ ಜನತೆ ಚಪ್ಪನ್ ಚೂರಿ ಎಂದು ಹೆಸರಿಟ್ಟಿದ್ದರು. ಚಪ್ಪನ್ ಎಂದರೆ 56 ಎಂದರ್ಥ.

ಇಡೀ ಉತ್ತರಭಾರತ ಮತ್ತು ಪೂರ್ವಭಾರತದಲ್ಲಿ ಅತ್ಯುತ್ತಮ ಗಾಯಕಿಯರಾಗಿದ್ದ ಗೋಹರ್ ಜಾನ್, ಮತ್ತು ಜಾನಕಿ ಬಾಯಿ ಗಾಯನ ಕ್ಷೇತ್ರದ ತಾರೆಯರಾಗಿದ್ದರು. 1900ರ ದಶಕದಲ್ಲಿ ಗ್ರಾಮಾಫೋನ್ ಧ್ವನಿಮುದ್ರಿಕೆಗೆ ಏಳು ನಿಮಿಷದ ಹಾಡುಗಾರಿಕೆಗೆ ಒಂಬೈನೂರು ಸಂಭಾವನೆ ಪಡೆಯುತ್ತಿದ್ದರು. ಜಾನಕಿಬಾಯಿ ನವಾಬರ ಆಸ್ಥಾನದ ಸಂಗೀತ ಕಾರ್ಯಕ್ರಮಕ್ಕೆ ಎರಡು ಸಾವಿರ ಸಂಭಾವನೆ ಪಡೆಯುತ್ತಿದ್ದಳು.

1880ರಲ್ಲಿ ಜನಿಸಿ, 1934 ರಲ್ಲಿ ಅವಿವಾಹಿತಳಾಗಿ 54 ನೇ ವಯಸ್ಸಿಗೆ ನಿಧನಳಾದ ಜಾನಕಿಬಾಯಿ, ಅಲಹಬಾದಿನ ರಾಮ್ ಬಾಗ್ ಬಡಾವಣೆಯ ತನ್ನ ಮನೆಯನ್ನು ಚಾರಿಟಬಲ್ ಟ್ರಸ್ಟ್ ಆಗಿ ಪರಿವರ್ತಿಸಿ ತನ್ನ ಸಮಗ್ರ ಹಣ, ಆಭರಣ ಮತ್ತು ಸಂಪತ್ತನ್ನು ಟ್ರಸ್ಟ್ ಗೆ ದಾನ ಮಾಡಿದಳು. ಬಡ ಹಿಂದೂ ಮತ್ತು ಮುಸ್ಲಿಂ ಹೆಣ್ಣುಮಕ್ಕಳ ಶಿಕ್ಷಣ ಹಾಗೂ ಚಳಿಗಾಲದಲ್ಲಿ ಬಡವರಿಗೆ ಉಚಿತವಾಗಿ ಕಂಬಳಿ ಒದಗಿಸಬೇಕು ಎಂದು ಉಯಿಲು ಬರೆದ ಈ ಮಹಾ ಹೆಣ್ಣುಮಗಳನ್ನು ನಾವು ವೇಶ್ಯೆ ಎಂದು ಕರೆಯಲು ಸಾಧ್ಯವೆ?

ಒಳ್ಳೆಯ ಉರ್ದು ಕವಿಯಿತ್ರಿ ಆಗಿದ್ದ ಜಾನಕಿ ಬಾಯಿ ದಿವಾನ್ ಇ ಜಾನಕಿ ಎಂಬ ಕವಿತಾ ಸಂಕಲನ ಹೊರತಂದಿದ್ದಾಳೆ. ಒಂದು ಕವಿತೆಯಲ್ಲಿ


ನನ್ನ ಪ್ರಿಯ ಪಾತ್ರರೆಲ್ಲಾ  
ಮನೆ ಬಿಟ್ಟು ಹೋದರು  
ನಾನು ಜಗಳವಾಡಿರಲಿಲ್ಲ  
ಆದರೆ ಮನೆಯ ಕಿಟಿಕಿ ಬಾಗಿಲು  
ತೆರೆದಿರುವುದು ನನಗೆ ಗೊತ್ತಿರಲಿಲ್ಲ.

ಈ ಕವಿತೆಯನ್ನು ಜಾನಕಿ ಸಂಗೀತ ಕಾರ್ಯಕ್ರಮದಲ್ಲಿ ಎದೆ ತುಂಬಿ ಹಾಡುತ್ತಿದ್ದಳಂತೆ.

1911ರ ಬ್ರಿಟಿಷ್ ದೊರೆ ಐದನೆ ಜಾರ್ಜ್ ಭಾರತಕ್ಕೆ ಬಂದಿದ್ದಾಗ, ದೆಹಲಿಯ ಇಂದಿನ ರಾಷ್ಟ್ರಪತಿ ಭವನದಲ್ಲಿ ಜಾನಕಿಬಾಯಿ ಮತ್ತು ಗೋಹರ್ ಜಾನ್ ಇಬ್ಬರನ್ನೂ ಬ್ರಿಟೀಷ್ ಅಧಿ ಕಾರಿಗಳು ಆಹ್ವಾನಿಸಿ ದೊರೆಯ ಎದುರು ಹಾಡಿಸಿದ್ದರು. ಜಾನಕಿಬಾಯಿ ಕಂಠವನ್ನು ಜಾರ್ಜ್ ದೊರೆ ಶ್ಲಾಘಿಸಿ ಉಡುಗೊರೆ ನೀಡಿದ ಸಂಗತಿ ದಾಖಲಾಗಿದೆ.

ಇತ್ತ ದಕ್ಷಿಣ ಭಾರತದಲ್ಲಿ 1905 ರಲ್ಲಿ ಪ್ರಥಮವಾಗಿ ಧ್ವನಿಮುದ್ರಿಕೆಗೆ ಹಾಡುವುದರ ಮೂಲಕ ಮದ್ರಾಸ್ ನಗರದ ತಂಬು ಚೆಟ್ಟಿ ರಸ್ತೆಯಲ್ಲಿ ರಾಣಿಯಂತೆ ಬದುಕಿದ್ದ ಸೇಲಂ ಗೋದಾವರಿ ಎಂಬಾಕೆ ಇಡೀ ತನ್ನ ಸಮಗ್ರ ಆಸ್ತಿ ಮತ್ತು ಸಂಪತ್ತನ್ನು ಸೇಲಂ ಹಾಗೂ ಮದ್ರಾಸ್ನಗರದ ವಿದ್ಯಾಸಂಸ್ಥೆ ಮತ್ತು ಅನ್ನ ಛತ್ರಗಳಿಗೆ ದಾನ ಮಾಡಿದಳು.

ಈಗ ಹೇಳಿ, ಈ ಮಹಾನ್ ತಾಯಿಯರನ್ನು ದೇವಕನ್ಯೆಯರು ಎಂದು ಕರೆಯಬೇಕೋ? ಅಥವಾ ದೇವದಾಸಿಯರು ಎನ್ನಬೇಕೋ?



# 3 ಕೋಟಿ ರೂ. ವಿಮೆಯ ಹಣಕ್ಕಾಗಿ ಹೆತ್ತ ತಂದೆಗೆ ವಿಷಪೂರಿತ ಸರ್ಪ ಕಚ್ಚಿಸಿ ಕೊಲೆಗೈದ ಇಬ್ಬರು ಮಕ್ಕಳು ಹಾಗೂ ನಾಲ್ಕು ಜನ ಸ್ನೇಹಿತರು ಸೇರಿ ಆರು ಜನ ಅರೆಸ್ಟ್!

**ಆತ 56 ವರ್ಷದ ಸದೃಢ ಶರೀರದ ವ್ಯಕ್ತಿ. ಸರಕಾರಿ ಶಾಲೆಯೊಂದರಲ್ಲಿ ಪ್ರಯೋಗಾಲಯದ ಸಹಾಯಕರಾಗಿದ್ದರು. ಬಂದ ಸಂಬಳದಲ್ಲಿ ಹೆಂಡತಿ-ಮಕ್ಕಳನ್ನು ಚೆನ್ನಾಗಿ ನೋಡಿಕೊಂಡಿದ್ದನು. ಆದರೆ ಕಳೆದ ವರ್ಷ ಅಕ್ಟೋಬರ್ 22ರಂದು ವಿಷಪೂರಿತ ಸರ್ಪ ಕಚ್ಚಿ ಮನೆಯಲ್ಲಿ ಸತ್ತು ಬಿದ್ದಿದ್ದನು. ಮೃತ ವ್ಯಕ್ತಿಯ ಹಿರಿಯ ಮಗ ತಮ್ಮ ತಂದೆ ಹಾವು ಕಚ್ಚಿ ಮೃತಪಟ್ಟಿದ್ದಾರೆಂದು ದೂರು ನೀಡಿದ್ದನು. ಹಾಗಾಗಿ ತಮಿಳುನಾಡು ರಾಜ್ಯದ ತಿರವಲ್ಲೂರು ಜಿಲ್ಲೆಯ ಗುಮ್ಮಿಡಿಪೂಂಡಿ ಉಪವಿಭಾಗದ ಪೊಥಟ್ಟೂರಪೆಟ್ಟೈ ಪೊಲೀಸರು ಇದೊಂದು ಆಕಸ್ಮಿಕ ಸಾವು ಎಂದು ಪ್ರಕರಣ ದಾಖಲಿಸಿಕೊಂಡಿದ್ದರು. ಆದರೆ ಹಾವು ಕಡಿತ ಪ್ರಕರಣಕ್ಕೆ ಹೊಸ ಟ್ವಿಸ್ಟ್ ಸಿಕ್ಕಿದೆ. ಜನ್ಮ ಕೊಟ್ಟ ಇಬ್ಬರು ಮಕ್ಕಳೇ 3 ಕೋಟಿ ರೂ.ಗಳ ವಿಮೆಯ ಹಣಕ್ಕಾಗಿ ವಿಷಪೂರಿತ ಸರ್ಪದಿಂದ ಕಚ್ಚಿಸಿ ಕೊಲೆ ಮಾಡಿಸಿರುವುದು ಎಸ್ಐಟಿ ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಹಂತಕ ಪುತ್ರರಿಗೆ ನಾಲ್ಕು ಜನ ಸ್ನೇಹಿತರು ನೆರವಾಗಿದ್ದರು. ಹೀಗಾಗಿ ಆರು ಜನ ಅರೆಸ್ಟ್ ಆಗಿ ಜೈಲು ಸೇರಿ ಮುದ್ದೆ ಮುರಿಯುತ್ತಿರುವ ರೋಚಕ ಸ್ಟೋರಿ ಇದಾಗಿದೆ.**





ತಂದೆಯನ್ನೇ ಕೊಂದ ಮಕ್ಕಳಾದ ಹರಿಹರನ್ ಹಾಗೂ ಸಿ.ಜಿ. ಮೋಹನ್‌ರಾಜ್

ಪ್ರಪಂಚದಲ್ಲಿ ಹಣ ಏನು ಬೇಕಾದರೂ ಮಾಡುತ್ತದೆ. ಕುರುಡು ಕಾಂಚಾಣದ ಝಣ...ಝಣ ಸದ್ದಿಗೆ ಪ್ರಪಂಚವೇ ತಾಳ ಹಾಕುತ್ತದೆ. ಸಲೀಸಾಗಿ ಹಣ ಸಿಗುತ್ತದೆ ಎಂದರೆ ಜನ್ಮ ನೀಡಿದ ತಂದೆ-ತಾಯಿ, ಬೆನ್ನಿಗೆ ಬಿದ್ದ ಸಹೋದರರು, ಕಟ್ಟಿಕೊಂಡ ಹೆಂಡತಿ, ಹೊಟ್ಟೆಯಿಂದ ಹುಟ್ಟಿದ ಮಕ್ಕಳು ಅಂತಾನು ನೋಡದೇ ಯಾರು ಊಹಿಸಲಾರದಂತಹ ಅಮಾನವೀಯ ಕೃತ್ಯಕ್ಕೆ ಇಳಿದು ಬಿಡುತ್ತಾರೆ. ಇದಕ್ಕೆ ಜೀವಂತ ನಿದರ್ಶನ ಎಂಬಂತೆ ತಮಿಳುನಾಡಿನ ತಿರವತ್ತೂರು ಜಿಲ್ಲೆಯಲ್ಲಿ ನಡೆದು ಹೋಗಿದೆ. ಮೂರು ಕೋಟಿ ರೂ.ಗಳ ವಿಮೆ ಹಣ ಪಡೆದುಕೊಳ್ಳಲು ಜನ್ಮ ಕೊಟ್ಟ ತಂದೆಗೆ ವಿಷ ಸರ್ಪದಿಂದ ಕಚ್ಚಿಸಿ ಕೊಲೆಗೈದು ಬಿಟ್ಟಿದ್ದಾರೆ. ಮಾಡಿದ ತಪ್ಪಿಗೆ ತಂದೆಯ ಹಂತಕರು ಎಂಬ ಪಟ್ಟ ಕಟ್ಟಿಕೊಂಡು ತಮ್ಮ ನಾಲ್ವರು ಸ್ನೇಹಿತರೊಂದಿಗೆ ಜೈಲಿನ ಕಂಬಿ ಎಣಿಸುತ್ತಲಿದ್ದಾರೆ.



ಜೀವ ವಿಮೆಗಾಗಿ ಮಕ್ಕಳಿಂದಲೇ ಕೊಲೆಯಾದ ಇ.ಪಿ. ಗಣೇಶನ್

**ಅದೊಂದು ಆಕಸ್ಮಿಕ ಸಾವಿನ ಕಥೆ...**

ಅಂದು ಅಕ್ಟೋಬರ್ 22ನೇ ತಾರೀಖು 2025 ಇಸ್ವಿ ಆಗಿತ್ತು. ಪೊಥಟ್ಟೂರಪೆಟ್ಟೈ ಪೊಲೀಸ್ ಠಾಣೆಗೆ ಅದೇ ಗ್ರಾಮದ ಜಿ. ಮೋಹನರಾಜ್ (29 ವ) ಎಂಬ ತರುಣನು ಧಾವಿಸಿ ಬಂದು ಅಂದು ಕರ್ತವ್ಯದ ಮೇಲಿದ್ದ ಪೊಲೀಸ್ ಅಧಿಕಾರಿಯನ್ನು ಭೇಟಿಯಾದನು. ತನ್ನ ತಂದೆ ಇ.ಪಿ. ಗಣೇಶನ್ (56 ವ) ಎಂಬುವವರು ತಿರುತ್ತಣಿ ಸರ್ಕಾರಿ ಶಾಲೆಯ ಪ್ರಯೋಗಾಲಯದಲ್ಲಿ ಸಹಾಯಕರಾಗಿ ಸೇವೆಯಲ್ಲಿದ್ದರು. ಅಕ್ಟೋಬರ್ 21 ರಾತ್ರಿ ಮಲಗಿದ್ದಾಗ ವಿಷಪೂರಿತ ಸರ್ಪವೊಂದು ಕಚ್ಚಿದ ಪರಿಣಾಮ ಅವರು ಸತ್ತು ಹೋಗಿದ್ದಾರೆ. ಅವರ ಸಾವಿಗೆ ಕಾರಣವಾದ ಹಾವನ್ನು ಹೊಡೆದು ಸಾಯಿಸಲಾಗಿದೆ ಎಂಬ ವಿಷಯವನ್ನು ತಿಳಿಸಿದರು. ಅದರಂತೆ ಹಿರಿಯ ಅಧಿಕಾರಿಗಳ ನಿರ್ದೇಶನದಂತೆ ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದರು. ತನಿಖೆಯ ಆರಂಭಿಕ ಹಂತದಲ್ಲಿ ಆಕಸ್ಮಿಕ ಹಾವು ಕಡಿತದಿಂದಲೇ ಮೃತಪಟ್ಟಿದ್ದಾರೆ ಎಂದು ಬಿಂಬಿಸಲಾಗಿತ್ತು. ವೈದ್ಯಕೀಯ ವರದಿಯಲ್ಲಿ ಕೂಡಾ ಹಾವು ಕಡಿತ ಎಂದು ದಾಖಲಾಗಿತ್ತು.



ಸಾಂದರ್ಭಿಕ ಚಿತ್ರ

ಮನ್ನಾಪೂರ

**3 ಕೋಟಿ ವಿಮೆ ಹಣಕ್ಕೆ ಮನವಿ...**

ಸರಕಾರಿ ಶಾಲೆಯ ಪ್ರಯೋಗಾಲಯದ ಸಹಾಯಕರಾಗಿದ್ದ ಇ.ಪಿ. ಗಣೇಶನ್ ಅವರ ಹೆಸರಿನಲ್ಲಿ ಸುಮಾರು 3 ಕೋಟಿ ರೂ.ಗಳ ಜೀವವಿಮೆಯಿತ್ತು. ಅಕ್ಟೋಬರ್ 21ರಂದು ಹಾವು ಕಚ್ಚಿ ಮೃತಪಟ್ಟ ಇವರ ಮಕ್ಕಳಾದ ಜಿ. ಮೋಹನ್ ರಾಜ್ (29 ವ) ಮತ್ತು ಹರಿಹರನ್ (26 ವ) ಅವರುಗಳು ತಂದೆ ಇ.ಪಿ. ಗಣೇಶನ್ ಹೆಸರಿನಲ್ಲಿದ್ದ 11 ಪಾಲಸಿಗಳ ಒಟ್ಟು 3 ಕೋಟಿ ವಿಮೆ ಹಣಕ್ಕಾಗಿ ಕ್ಲೇಮು ಸಲ್ಲಿಸಿದ್ದರು. ಈ ಸಂದರ್ಭದಲ್ಲಿ ವಿಮೆ ಅಧಿಕಾರಿಗಳಿಗೆ ಸಣ್ಣದೊಂದು ಅನುಮಾನ ಕಾಡತೊಡಗಿತು. ಕ್ಲೇಮುದಾರರ ನಡವಳಿಕೆಗಳು, ಹೇಳಿಕೆಗಳು ಮತ್ತು ಅವರು ಹಣಕ್ಕಾಗಿ ಮಾಡುತ್ತಿರುವ ಅವಸರವನ್ನು ಕಂಡು ಇ.ಪಿ. ಗಣೇಶನ್ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿ ಉತ್ತರವಲಯದ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಆಸ್ರಾ ಗಾರ್ಗ್ ಅವರಿಗೆ ಮಾಹಿತಿ ನೀಡಿ ತನಿಖೆಗೆ ಮನವಿ ಮಾಡಲಾಯಿತು.



ಐಜಿಪಿ ಆಸ್ರಾ ಗರ್ಗ್



ಎಸ್ಪಿ ವಿವೇಕಾನಂದ ಶುಕ್ಲಾ

**ವಿಶೇಷ ತನಿಖಾ ತಂಡ ಕಾರ್ಯಾಚರಣೆ...**

ಜೀವ ವಿಮೆ ಕಂಪನಿಯ ಹಿರಿಯ ಅಧಿಕಾರಿಗಳ ಮನವಿಯಂತೆ ತಮಿಳುನಾಡು ಉತ್ತರ ವಲಯದ ಐಜಿಪಿ ಆಸ್ರಾ ಗರ್ಗ್ ತುಂಬಾ ಖಡಕ್ ಅಧಿಕಾರಿ. ಇ.ಪಿ. ಗಣೇಶನ್ ಅಸಹಜ ಸಾವಿನ ಪ್ರಕರಣವನ್ನು ತನಿಖೆಗೆ ಒಳಪಡಿಸಲು ಚತುರ ಮತ್ತು ಧಾಡಸಿ ಅಧಿಕಾರಿ ಎಂದು ಹೆಸರಾದ ತಿರುವಲ್ಲೂರಿನ ಎಸ್ಪಿ ವಿವೇಕಾನಂದ ಶುಕ್ಲಾ ಅವರಿಗೆ ನಿರ್ದೇಶನಗಳನ್ನು ನೀಡಿ ಇದಕ್ಕಾಗಿ ವಿಶೇಷ ತನಿಖಾ ತಂಡ ರಚಿಸಲು ತಿಳಿಸಿದರು. ಅದರಂತೆ ಎಸ್ಪಿ ವಿವೇಕಾನಂದ ಶುಕ್ಲಾ ಅವರು ಗುಮ್ಮಿಡಿಪೂಂಡಿ ಉಪ ವಿಭಾಗದ ಡಿವೈಎಸ್ಪಿ ಜಯಶ್ರೀ ನೇತೃತ್ವದಲ್ಲಿ ಇಬ್ಬರು ಸಿಪಿಐಗಳು ಮತ್ತು ಇಬ್ಬರು ಪಿಎಸ್‌ಐಗಳು ಮತ್ತು ಅಗತ್ಯ ಸಿಬ್ಬಂದಿಗಳನ್ನು ಒಳಗೊಂಡಂತೆ ಒಂದು ವಿಶೇಷ ತಂಡವನ್ನು ರಚಿಸಿ ಅಗತ್ಯ ನಿರ್ದೇಶನಗಳನ್ನು ನೀಡಿದರು.

ಅಂದುಕೊಂಡ ಹಾಗೇ ಡಿವೈಎಸ್ಪಿ ಜಯಶ್ರೀ ನೇತೃತ್ವದ ವಿಶೇಷ ತನಿಖಾ ತಂಡವು ಅಸಹಜ ರೀತಿಯಲ್ಲಿ ಮೃತಪಟ್ಟ ಇ.ಪಿ. ಗಣೇಶನ್ ಮನೆಗೆ ಭೇಟಿ ನೀಡಿ ವಿವರವಾದ ಮಾಹಿತಿ ಕಲೆ ಹಾಕುತ್ತದೆ. ಅದಲ್ಲದೇ ಮೃತ ಇ.ಪಿ. ಗಣೇಶನ್ ಕುಟುಂಬವು ಅಗತ್ಯಕ್ಕಿಂತ ವಿವಿಧ ಮೂಲಗಳಿಂದ ಹೆಚ್ಚಿನ ಸಾಲ ಮಾಡಿರುವ ಸುಳಿವು ಕೂಡಾ ದೊರೆಯುತ್ತದೆ. ಇದರ ಜತೆಗೆ ಇ.ಪಿ. ಗಣೇಶನ್ ಹೆಸರಿಗೆ 3 ಕೋಟಿ ರೂ.ಗಳ 11 ಜೀವ ವಿಮೆ ಪಾಲಸಿ ಮಾಹಿತಿ, ಕುಟುಂಬದ ಆದಾಯದ ಮೂಲಗಳನ್ನು ಗಮನಿಸಿದಾಗ ತನಿಖಾಧಿಕಾರಿಗಳಿಗೆ ಅನುಮಾನ ಕಾಡುತ್ತದೆ.

**ದೊರೆತ ತಾಂತ್ರಿಕ ಸಾಕ್ಷಿ-ಪುರಾವೆ...**

ಹಾವು ಕಚ್ಚಿ ಮೃತಪಟ್ಟಿದ್ದಾನೆಂದು ಹೇಳಲಾದ ಇ.ಪಿ. ಗಣೇಶನ್ ಸಾವು ಅಸಹಜವಲ್ಲ. ಈತನ ಹೆಸರಿನಲ್ಲಿರುವ 3 ಕೋಟಿ ರೂ.ಗಳ ಜೀವ ವಿಮೆ ಹಣಕ್ಕಾಗಿ ಅತ್ಯಂತ ಚಾಣಾಕ್ಷತನದಿಂದ ಮಾಡಲಾದ ಕೊಲೆ ಎಂದು ವಿಶೇಷ ತನಿಖಾ ತಂಡದ ಡಿವೈಎಸ್ಪಿ ಜಯಶ್ರೀ ಅಭಿಪ್ರಾಯ ಪಟ್ಟರು. ಮೊದಲಿಗೆ ಇ.ಪಿ. ಗಣೇಶನ್, ಮಕ್ಕಳಾದ ಜಿ. ಮೋಹನ್‌ರಾಜ್ ಮತ್ತು ಹರಿಹರನ್ ಅವರ ಮೊಬೈಲ್ ಕಾಲ್ ಹಿಸ್ಟರಿ ತೆಗೆದು ಪರಿಶೀಲಿಸಿದಾಗ ಮೇಲಿಂದ ಮೇಲೆ ನಾಲ್ಕು ಜನರೊಂದಿಗೆ ಮಾತನಾಡಿದ ಬಗ್ಗೆ ಗೊತ್ತಾಯಿತು. ನಂತರ ಇವರ ಹಣಕಾಸಿನ ವಹಿವಾಟಿನಲ್ಲಿ ಕೂಡಾ ಮಹತ್ವದ ಸುಳಿವು ಲಭ್ಯವಾಯಿತು. ಇದಲ್ಲದೇ ಇ.ಪಿ. ಗಣೇಶನ್‌ಗೆ ಸುಮಾರು ದಿನಗಳ ಹಿಂದೆ ಹಾವು ಕಚ್ಚಿತ್ತು. ಆತ ಅದರಲ್ಲಿ ಬದುಕುಳಿದಿದ್ದನು. ಅಪಘಾತದಂತಹ ಪ್ರಕರಣದಲ್ಲೂ ಬಚಾವ್ ಆಗಿದ್ದನು ಎಂಬ ಮಾಹಿತಿ ಅಂಗೈಯಲ್ಲಿರಿಸಿಕೊಂಡರು.

**3 ಕೋಟಿ ರೂ. ಜೀವ ವಿಮೆಗಾಗಿ...**

ಎಸ್ಐಟಿ ಮುಖ್ಯಸ್ಥ, ಡಿವೈಎಸ್ಪಿ ಜಯಶ್ರೀ ಮತ್ತು ಅಧಿಕಾರಿಗಳು ಹಂತಕರ ಕುಡಲಿಯನ್ನು ಸಿದ್ಧಪಡಿಸಿ ಅಂಗೈಯಲ್ಲಿರಿಸಿಕೊಂಡು ಅದೊಂದು ದಿನ ಇ.ಪಿ. ಗಣೇಶನ್ ಮಕ್ಕಳಾದ ಜಿ. ಮೋಹನ್‌ರಾಜ್ ಮತ್ತು ಹರಿಹರನ್ ಅವರನ್ನು ತೀವ್ರ ವಿಚಾರಣೆಗೆ ಒಳಪಡಿಸಿದಾಗ ಅವರು ಕಾಗಕ್ಕ-ಗುಬ್ಬಕ್ಕನ ಕಥೆ ಕಟ್ಟತೊಡಗಿದರು. ತಮಗೆ ದೊರೆತ ತಾಂತ್ರಿಕ ಎವಿಡೆನ್ಸ್ ಮೂಲಕ ಸಹೋದರರಿಬ್ಬರು ತಪ್ಪಿಸಿಕೊಳ್ಳಲು ಆಗದೇ 'ನಾವೇ ತಂದೆಯ ಹೆಸರಲ್ಲಿದ್ದ 3 ಕೋಟಿ ಜೀವ ವಿಮೆ ಮೊತ್ತ ಪಡೆಯಲು ಕೊಲೆ ಮಾಡಿದ್ದೇವೆ' ಎಂದು ಎಲ್ಲಾ ಸ್ಕೆಚ್ ವಿವರಿಸಿದರು. ಅದನ್ನೇ ಇಲ್ಲಿ ಓದುಗರಿಗಾಗಿ ನೀಡಲಾಗಿದೆ.

**ವಿಷ ಸರ್ಪದಿಂದ ಕಚ್ಚಿಸಿ ಕೊಲೆ...**

ಐನಾತಿ ಸಹೋದರರಾದ ಜಿ. ಮೋಹನ್‌ರಾಜ್ ಮತ್ತು ಹರಿಹರನ್ ಅವರು ಸಿನಿಮೀಯ ತರಹ ಕೊಲೆಯನ್ನು ನಡೆಸಲು ಯೋಜನೆ ರೂಪಿಸಿದರು. ಅದಕ್ಕಾಗಿ ತಮಗೆ ಪರಿಚಯವಿದ್ದ ಮನವೂರಿನ ಬಿ. ಬಾಲಾಜಿ (28 ವ), ಬಿ. ಪ್ರಶಾಂತ್ (35), ಮೋಸರು ಗ್ರಾಮದ ಎಸ್. ದಿನಕರ್ (45), ಮನವೂರಿನ ಜಿ. ನವೀನ್‌ಕುಮಾರ್ (28 ವ) ಎನ್ನುವ ನಾಲ್ಕು ಜನರಿಗೆ ಹಣದಾಸೆ ತೋರಿಸಿ ಅವರನ್ನು ತಮ್ಮೊಂದಿಗೆ ಸೇರಿಸಿಕೊಂಡಿದ್ದಾರೆ. ತಮ್ಮ ತಂದೆಗೆ ಹಾವು ಕಚ್ಚುವಂತೆ ಸೀನ್ ಕ್ರಿಯೇಟ್ ಮಾಡಿದ್ದಾರೆ.

ಅಕ್ಟೋಬರ್ 22ರ ಬೆಳಗಿನ ಜಾವ ಮನೆಯಲ್ಲಿ ಗಾಢನಿದ್ರೆಯಲ್ಲಿದ್ದ ಇ.ಪಿ. ಗಣೇಶನ್ ಕುತ್ತಿಗೆಯ ಮೇಲೆ ವಿಷ ಸರ್ಪ ಬಿಟ್ಟು ಅದು ಕಚ್ಚುವಂತೆ ಮಾಡಿ

☞ 13

# ಸೌಜನ್ಯ ಫೈಲ್ಸ್



13

ನಿರೂಪಣೆ :

ಮೋಹನ್ ಬೋಳಂಗಡಿ

# ಮರುವಿಚಾರಣೆಯಲ್ಲಿ ಉಲ್ಟಾ ಹೊಡೆದ ಚಂದಪ್ಪ ಗೌಡ!

ಸೌಜನ್ಯ ಪ್ರಕರಣದ ಮೊದಲ ಸಾಕ್ಷಿ ಆಕೆಯ ತಂದೆ ಚಂದಪ್ಪಗೌಡ. ಆಕೆ ಕಾಣೆಯಾದ ದಿನದಂದು ಬೆಳ್ತಂಗಡಿ ಠಾಣೆಗೆ ಹೋಗಿ ದೂರು ನೀಡಿದವರು. ದೂರು ನೀಡುವ ಮೊದಲು ಅವರು ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಹೋಗಿ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರ ಬಳಿ ಕಾಲೇಜಿಗೆ ಹೋಗಿದ್ದ ಮಗಳು ಸೌಜನ್ಯ ಸಂಜೆಯಾದರೂ ಮನೆಗೆ ಬಂದಿಲ್ಲ ಎಂದು ಮಾಹಿತಿ ನೀಡಿದ್ದರು. ಅವರು ನೀಡಿದ ಸಲಹೆಯಂತೆ ಬೆಳ್ತಂಗಡಿ ಠಾಣೆಗೆ ಹೋಗಿ ದೂರು ನೀಡಿದ್ದರು. ಆದ್ದರಿಂದ ಈ ಪ್ರಕರಣದ ವಿಚಾರಣೆಯಲ್ಲಿ ಚಂದಪ್ಪ ಗೌಡರೇ ಪ್ರಮುಖ ಸಾಕ್ಷಿಯಾಗಿದ್ದರು. ಸಾಕ್ಷಿ ವಿಚಾರಣೆಯ ಸಂದರ್ಭದಲ್ಲಿ ಚಂದಪ್ಪ ಗೌಡರು ತನ್ನ ಮೂಲ ಹೇಳಿಕೆಯಲ್ಲಿ ನಮೂದು ಆಗದ ಅಂಶಗಳನ್ನು ನ್ಯಾಯಾಲಯದ ಮುಂದೆ ವಿವರಿಸಿದ್ದರು.

ನ್ಯಾಯಾಧೀಶರು ಆ ಅಂಶಗಳನ್ನು ಗಣನೆಗೆ ತೆಗೆದುಕೊಂಡಿದ್ದರು. ಆರೋಪಿ ಪರ ವಕೀಲ ಮೋಹಿತ್ ಕುಮಾರ್ ಅವರು ಚಂದಪ್ಪ ಗೌಡರನ್ನು ಪಾಟೀ ಸವಾಲಿಗೆ ಒಳಪಡಿಸಿದ್ದರು. ಚಂದಪ್ಪ ಗೌಡರು ಪಾಟೀ ಸವಾಲಿಗೆ ಉತ್ತರಿಸುತ್ತಾ ಅಕ್ಟೋಬರ್ 11, 2012ರಂದು ಪೊಲೀಸರು ನಮ್ಮ ಮನೆಗೆ ಬಂದು ಮಗಳು ಸೌಜನ್ಯಳ ಒಳ ಉಡುಪುಗಳನ್ನು ತೆಗೆದುಕೊಂಡು ಹೋದರು ಮತ್ತು ಅದನ್ನು ವಾಪಾಸು ಕೊಟ್ಟಿಲ್ಲ ಎಂದು ಹೇಳಿದ್ದರು. 9ನೇ ತಾರೀಕಿನಿಂದ 11ನೇ ತಾರೀಕಿನವರೆಗೆ ಮಳೆ ಜೋರು ಇತ್ತು. ಮಣ್ಣ ಸಂಕ ಬಸ್ ಸ್ಟಾಪ್‌ನಿಂದ ನಮ್ಮ ಮನೆ 2 ಕಿ.ಮೀ. ದೂರದಲ್ಲಿ ಇದೆ ಎಂದು ಹೇಳಿದ್ದರು. ಬೆಂಗಳೂರಿನ 50ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶ ರೇಖಾ ಬಿ.ಎಸ್. ರವರ ಮುಂದೆ ಈ ಹೇಳಿಕೆ ದಾಖಲಿಸಲಾಗಿತ್ತು ಮತ್ತು ಆ ಸಂದರ್ಭದಲ್ಲಿ ಮರು ವಿಚಾರಣೆ ಇಲ್ಲ ಎಂದು ನ್ಯಾಯಾಧೀಶೆ ಷರಾ ಬರೆದಿದ್ದರು.



ವಿಠಲಗೌಡ

ತದನಂತರದ ಬೆಳವಣಿಗೆಯಲ್ಲಿ ಚಂದಪ್ಪ ಗೌಡ ಅವರನ್ನು 6 ವರ್ಷಗಳ ನಂತರ ಅಂದರೆ 2022 ಎಪ್ರಿಲ್ 4 ರಂದು ನ್ಯಾಯಾಲಯಕ್ಕೆ ಹಾಜರಾಗುವಂತೆ ಸಮನ್ಸ್ ನೀಡಲಾಗಿತ್ತು. ಆ ಸಂದರ್ಭದಲ್ಲಿ ಆ ನ್ಯಾಯಾಲಯದ ನ್ಯಾಯಾಧೀಶೆ ಬದಲಾಗಿದ್ದರು. ಬಿ.ಎಸ್. ರೇಖಾ ಅವರ ಬದಲಿಗೆ ಬಿ.ಕೆ. ಕೋಮಲ ಅವರು ನ್ಯಾಯಪೀಠವನ್ನು ಅಲಂಕರಿಸಿದ್ದರು. ಈ ಪೀಠದ ಎದುರು ಆರೋಪಿ ಪರ ವಕೀಲ ಮೋಹಿತ್ ಕುಮಾರ್ ಅವರು 2ನೇ ಬಾರಿಗೆ ಪ್ರಕರಣದ ಮೊದಲ ದೂರುದಾರ ಚಂದಪ್ಪ ಗೌಡ ಅವರನ್ನು ಪಾಟೀ ಸವಾಲಿಗೆ ಗುರಿಪಡಿಸಿದರು. ಈ ಸಂದರ್ಭದಲ್ಲಿ ನ್ಯಾಯಾಲಯದಲ್ಲಿ ಹೇಳಿಕೆ ನೀಡಿದ ಚಂದಪ್ಪ ಗೌಡ ಅವರು 9-10-2012 ರಂದು ರಾತ್ರಿ 8ರಿಂದ 9.00 ಗಂಟೆಯ ಅವಧಿಯಲ್ಲಿ ನನ್ನ ಮಗಳು ಸೌಜನ್ಯ ಕಾಣೆಯಾದ ಬಗ್ಗೆ ಬೆಳ್ತಂಗಡಿ ಠಾಣೆಗೆ ದೂರು ನೀಡಿದ್ದೆ. ನನ್ನೊಂದಿಗೆ 2ನೇ ಸಾಕ್ಷಿ ವಿಠಲಗೌಡ ಅವರು ಬಂದಿದ್ದರು. ಅಲ್ಲಿಂದ ನಾನು ನನ್ನ ಮಗಳನ್ನು ಹುಡುಕಲು ಹೋದೆ. ಮಣ್ಣಸಂಕದ ಹತ್ತಿರ ಗುಡ್ಡಯಲ್ಲೆಲ್ಲ ಹುಡುಕಿದೆವು. ಸುಮಾರು 200ರಿಂದ 300 ಜನ ಸೇರಿ ಹುಡುಕಾಡಿದೆವು. ಅಲ್ಲಿ ಒಂದು ತೋಡು ಇದೆ. ಅದು ಸುಮಾರು 15 ಮೀಟರ್ ಅಗಲ ಮತ್ತು 10 ಅಡಿ ಆಳ ಇತ್ತು. 5-6 ಅಡಿಯಷ್ಟು ನೀರು ಹರಿಯುತ್ತಿತ್ತು. ನಾವು ಬೇರೆ ದಾರಿಯಿಂದ ಹುಡುಕಾಡಿದೆವು. ಮಾರನೇ ದಿನ ಶವ ದೊರೆತ ಸ್ಥಳದಲ್ಲಿಯೂ ಸಹ ನಾವು ಹುಡುಕಾಡಿದ್ದೆವು. ಮೃತದೇಹವು ಮುಖ್ಯ ರಸ್ತೆಗೆ ಕಾಣುವಷ್ಟು ದೂರದಲ್ಲಿತ್ತು.

9ನೇ ತಾರೀಕಿನಂದು ಹುಡುಕಾಡುವ ಸಂದರ್ಭದಲ್ಲಿ ಸುಮಾರು 200ರಿಂದ 300 ಮೀಟರ್ ದೂರದಲ್ಲಿ ಯಾರಾದರೂ ಟೆಂಟ್ ಹಾಕಿಕೊಂಡು ವಾಸ ಮಾಡುತ್ತಿರುವುದು ಕಂಡು ಬರಲಿಲ್ಲ. 10ನೇ ತಾರೀಕಿನಂದು ಬೆಳಿಗ್ಗೆ 9 ಗಂಟೆಗೆ ಹುಡುಕಲು ಪ್ರಾರಂಭಿಸಿದೆವು. ಶವ ಇರುವ ಬಗ್ಗೆ ಬೆಳಿಗ್ಗೆ 10 ಗಂಟೆಗೆ ಮಾಹಿತಿ ಬಂತು. ಮಾಹಿತಿ ಬಂದ ತಕ್ಷಣ ನಾನು ಸ್ಥಳಕ್ಕೆ ಹೋದೆ. ಶವದ ಮೈಮೇಲೆ ಒಳ ಉಡುಪುಗಳು ಇರಲಿಲ್ಲ. ಶವದ ಅಕ್ಕಪಕ್ಕದಲ್ಲಿಯೂ ಅವಳ ಒಳ ಉಡುಪುಗಳು ಇರಲಿಲ್ಲ. ಶಾಲೆಗೆ ಹೋಗುವಾಗ ಸೌಜನ್ಯ ತೆಗೆದುಕೊಂಡು ಹೋಗಿದ್ದ ಬ್ಯಾಗ್ ಶವದ ಪಕ್ಕದಲ್ಲೇ ಇತ್ತು. ಬ್ಯಾಗ್‌ನಲ್ಲಿ ಪುಸ್ತಕ ಇತ್ತು. ಆದರೆ ಅದು ಒದ್ದೆಯಾಗಿರಲಿಲ್ಲ. ಅಲ್ಲಿ ಅನುಮಾನಾಸ್ಪದವಾಗಿ ಟೆಂಟ್ ಹಾಕಿ ಕುಳಿತಿದ್ದರು ಎಂದು ಯಾರೂ ನನಗೆ 10ನೇ ತಾರೀಕಿನಂದು ತಿಳಿಸಲಿಲ್ಲ. ನೊಂದ ಬಾಲಕಿಯ ಕೊಡೆ ಸಿಗಲಿಲ್ಲ. ಮಹಜರು ಮುಕ್ತಾಯವಾದಾಗ ಸಂಜೆ 7 ಗಂಟೆ ಆಗಿತ್ತು. ನಾನು ಆಸ್ಪತ್ರೆಯ ಹತ್ತಿರ ಹೋಗಿದ್ದೆ. ಸುಮಾರು 8ರಿಂದ 9 ಗಂಟೆಯ ಮಧ್ಯೆ ನನಗೆ ಶವವನ್ನು ಹಸ್ತಾಂತರಿಸಿದರು. ಅದೇ ದಿನ ಅಂತ್ಯ ಸಂಸ್ಕಾರ ಮಾಡಿದೆವು. ಸಾಕ್ಷಿ 14ನೇಯವರು ನೊಂದ ಬಾಲಕಿಯ ಒಳ ಉಡುಪನ್ನು ಮಾರನೇ ದಿನ ಅಂದರೆ ತಾರೀಕು ಅಕ್ಟೋಬರ್ 11ರಂದು ನಮ್ಮ ಮನೆಗೆ ಬಂದು ತೆಗೆದುಕೊಂಡು ಹೋದರು. ಮೃತದೇಹ ಸಿಕ್ಕಿದ ಸಂದರ್ಭದಲ್ಲಿ ಒಳ ಉಡುಪು ದೊರಕದ ಕಾರಣಕ್ಕಾಗಿ ನಮ್ಮ ಮನೆಯಿಂದ ಒಳ ಉಡುಪು ತೆಗೆದುಕೊಂಡು ಹೋಗಿದ್ದಾರೆ. ನನ್ನ ನಾದಿನಿ ಯಶೋಧಳನ್ನು ನಾನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿಲ್ಲ. ಆರೋಪಿಯನ್ನು ಹಿಡಿದುಕೊಂಡಾಗ ಪೊಲೀಸರು ನನ್ನನ್ನು ಠಾಣೆಗೆ ಕರೆಸಿಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದು ಪ್ರಕರಣದ ಪ್ರಮುಖ ಸಾಕ್ಷಿ ಚಂದಪ್ಪ ಗೌಡರು ಪಾಟೀಸವಾಲಿಗೆ ಉತ್ತರಿಸುತ್ತಾ ಸ್ಪಷ್ಟಪಡಿಸಿದ್ದರು. ತದನಂತರದ ಬೆಳವಣಿಗೆಗಳಲ್ಲಿ ಆರೋಪಿ ಸಂತೋಷ್‌ರಾವ್‌ನನ್ನು ಈ ಪ್ರಕರಣದಲ್ಲಿ ಬಚಾವ್ ಮಾಡಲು ಯತ್ನಿಸಿದ್ದ ಪ್ರಮುಖ ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದ ಚಂದಪ್ಪಗೌಡರು ತನ್ನ ಮಗಳ ಸಾವಾಗಿದೆ ಎಂಬ ಕನಿಷ್ಟ ಜ್ಞಾನವೂ ಆತನಿಗೆ ಇರಲಿಲ್ಲ ಎಂಬುವುದನ್ನು ಒಪ್ಪಿಕೊಂಡಿದ್ದರು. ತನ್ನ ಮಗಳನ್ನು ಬೇರೆಲ್ಲೋ ಅತ್ಯಾಚಾರ ಮಾಡಿ ಕೊಲೆಗೈದು ರಾತ್ರೋರಾತ್ರಿ ಶವವನ್ನು ಕಾಡಿಗೆ ತಂದು ಹಾಕಿದ್ದಾರೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು.



ಸಂತೋಷ್ ರಾವ್



ಚಂದಪ್ಪ ಗೌಡ

ಸೌಜನ್ಯ ಪ್ರಕರಣದ ಆರೋಪಿ ಸಂತೋಷ್‌ರಾವ್ ನ್ಯಾಯಾಲಯದಲ್ಲಿ ಖುಲಾಸೆಗೊಳ್ಳಲು ಪ್ರಮುಖ ಕಾರಣವಾದದ್ದೇ ಸೌಜನ್ಯ ತಂದೆ ಚಂದಪ್ಪ ಗೌಡರ ಹೇಳಿಕೆ. ಎರಡು ಬಾರಿ ಚಂದಪ್ಪ ಗೌಡರು ನ್ಯಾಯಾಲಯಕ್ಕೆ ಹಾಜರಾಗಿದ್ದರು. ಮೊದಲ ಬಾರಿ ಅವರನ್ನು ಆರೋಪಿ ಪರ ವಕೀಲ ಹೆಚ್ಚು ಪಾಟೀ ಸವಾಲಿಗೆ ಗುರಿಪಡಿಸಿರಲಿಲ್ಲ. ಎರಡನೇ ಬಾರಿ ಸುಧೀರ್ಘವಾಗಿ ಪಾಟೀ ಸವಾಲಿಗೆ ಗುರಿಪಡಿಸಿ ತನಗೆ ಬೇಕಾದಂತಹ ಹೇಳಿಕೆಯನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಚಂದಪ್ಪ ಗೌಡರು ಪಾಟೀ ಸವಾಲಿಗೆ ಉತ್ತರಿಸುವ ವೇಳೆಗೆ ಶವ ಸಿಕ್ಕಿದ ಸಂದರ್ಭದಲ್ಲಿ ಸ್ಥಳಕ್ಕೆ ಹೋಗಿದ್ದೆ ಎಂದು ಹೇಳಿದ್ದರು. ಆದರೆ ಚಂದಪ್ಪ ಗೌಡರು ಆರೋಗ್ಯ ಸಮಸ್ಯೆಗೆ ಒಳಗಾಗಿ ಮನೆಯಲ್ಲಿಯೇ ಇದ್ದರು. ಆಕೆಯ ಒಳಉಡುಪನ್ನು ಪೊಲೀಸರು ಮನೆಯಿಂದ ತೆಗೆದುಕೊಂಡು ಹೋಗಿರುವುದು ಸತ್ಯವಾಗಿದ್ದರೂ ಸಹ ಕೃತ್ಯ ನಡೆಯುವ ವೇಳೆ ಆಕೆ ಧರಿಸಿದ್ದ ಒಳ ಉಡುಪು ತದನಂತರ ಪತ್ತೆಯಾಗಿದ್ದು, ಪೊಲೀಸರು ಅದನ್ನು ಮಹಜರು ಮೂಲಕ ಸ್ವಾಧೀನ ಪಡಿಸಿಕೊಂಡಿದ್ದರು ಮತ್ತು ಮುದ್ದೆ ಮಾಲು ಎಂದು ಗುರುತಿಸಿ ನ್ಯಾಯಾಲಯಕ್ಕೆ ಒಪ್ಪಿಸಿದ್ದರು. ಚಂದಪ್ಪ ಗೌಡರು ಪಾಟೀ ಸವಾಲಿಗೆ ಉತ್ತರಿಸುವ ವೇಳೆ ಸೌಜನ್ಯ ಕಾಣೆಯಾದ ಸಂದರ್ಭದಲ್ಲಿ ಆಕೆಯ ಮೃತದೇಹ ಸಿಕ್ಕಿದ ಸ್ಥಳದಲ್ಲಿ ಹುಡುಕಾಡಿದ್ದೇವೆ ಎಂದು ಹೇಳಿದ್ದರು. ಆದರೆ ಸೌಜನ್ಯ ಕಾಣೆಯಾದ ಸಂದರ್ಭದಲ್ಲಿ ಆಕೆಯನ್ನು ಹುಡುಕುವ ಪ್ರಯತ್ನವನ್ನು ಆಕೆಯ ಮನೆಯವರು ಮಾಡಿರಲೇ ಇಲ್ಲ. ಬದಲಾಗಿ ಊರಿನ ಕೆಲವು ಯುವಕರು ಆ ಕೆಲಸವನ್ನು ಮಾಡಿದ್ದರು ಅಲ್ಲದೇ ಶವ ಸಿಕ್ಕ ಸ್ಥಳದ ಬಳಿಗೆ ಯಾರೂ ಹೋಗಿರಲೇ ಇಲ್ಲ. ಅದಕ್ಕೂ ಕಾರಣ ಇತ್ತು. ಆ ಸಂದರ್ಭದಲ್ಲಿ ಆ ಪ್ರದೇಶ ಕುರುಚಲು ಗಿಡಗಳಿಂದ ತುಂಬಿತ್ತು. ರಸ್ತೆ ಬದಿಯಿಂದ ತೋಡಿನವರೆಗೂ ಆಳೆತ್ತರದ ಕುರುಚಲು ಕಾಡು ಬೆಳೆದಿತ್ತು. ಬೃಹತ್ ಗಾತ್ರದ ಮರ ಇತ್ತು. ಅದನ್ನು ಸೀಳಿಕೊಂಡು ಮೃತದೇಹ ಸಿಕ್ಕ ಸ್ಥಳಕ್ಕೆ ಹೋಗಲು ಸಾಧ್ಯ ಇರಲಿಲ್ಲ. ಅದಕ್ಕಾಗಿಯೇ ಚಂದಪ್ಪ ಗೌಡರು ಪಾಟೀ ಸವಾಲಿನ ಸಂದರ್ಭದಲ್ಲಿ ಬೇರೊಂದು ದಾರಿಯ ಮೂಲಕ ಆ ಸ್ಥಳಕ್ಕೆ ಹೋಗಿದ್ದೆವು ಎಂದು ಹೇಳಿಕೆ ನೀಡಿದ್ದರು.



ಮೋಹಿತ್ ಕುಮಾರ್

ಈ ಎಲ್ಲಾ ವಿರೋದಾಭಾಸದ ಹೇಳಿಕೆಗಳು ಚಂದಪ್ಪ ಗೌಡರಿಂದ ಬಂದಿತ್ತು. ಅವರನ್ನು ಇಬ್ಬರು ನ್ಯಾಯಾಧೀಶರ ಎದುರು ವಿಚಾರಣೆಗೆ ಗುರಿಪಡಿಸಲಾಗಿತ್ತು. ಮೊದಲ ನ್ಯಾಯಾಧೀಶರ ಎದುರು ಆರೋಪಿ ಪರ ವಕೀಲ ಮೋಹಿತ್ ಕುಮಾರ್ ಅವರು ಕೇವಲ ಮೂರು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದುಕೊಂಡಿದ್ದರು. ಆದರೆ ಆರು ವರ್ಷಗಳ ಬಳಿಕ, ನ್ಯಾಯಾಧೀಶೆ ಕೋಮಲ ಅವರ ಮುಂದೆ ಸುಧೀರ್ಘವಾಗಿ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದುಕೊಂಡಿದ್ದರು. ಪೊಲೀಸರು ಈ ಪ್ರಕರಣದಲ್ಲಿ ಬಂಧಿಸಿದ್ದಂತಹ ಸಂತೋಷ್‌ರಾವ್‌ನನ್ನು ಚಂದಪ್ಪ ಗೌಡರು ನೋಡಿದ್ದು, ನ್ಯಾಯಾಲಯದಲ್ಲಿನ ಆರೋಪಿ ಕಟಕಟೆಯಲ್ಲಿ. ಆದ್ದರಿಂದ ಆತನಿಂದಲೇ ತನ್ನ ಮಗಳ ಅತ್ಯಾಚಾರವಾಗಿದೆ ಮತ್ತು ಕೊಲೆಗೈಯ್ಯಲಾಗಿದೆ ಎಂಬ ಅಂಶ ಅವರಿಗೆ ಗೊತ್ತಿರಲು ಸಾಧ್ಯವೇ ಇಲ್ಲ. ಆದ್ದರಿಂದ ನ್ಯಾಯಾಲಯದಲ್ಲಿ ಚಂದಪ್ಪ ಗೌಡರು ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದು, ಆರೋಪಿಯನ್ನು ಈ ಪ್ರಕರಣದಿಂದ ಬಿಡುಗಡೆಗೊಳಿಸುವ ಪ್ರಯತ್ನದ ಭಾಗವಾಗಿತ್ತು ಎನ್ನುವುದಂತೂ ಸತ್ಯ. ಒಟ್ಟಾರೆಯಾಗಿ ಈ ಪ್ರಕರಣದ ವಿಚಾರಣೆಯು ಪ್ರಾಸಿಕ್ಯೂಷನ್ ಪರವಾಗಿ ನಡೆಯದೆ ಆರೋಪಿ ಪರವಾಗಿಯೇ ನಡೆದಿತ್ತು. ಇದರಿಂದಾಗಿಯೇ ಆರೋಪಿಯ ಮೇಲೆ ಹೊರಿಸಲಾದ ಆರೋಪಗಳು ನ್ಯಾಯಾಲಯದಲ್ಲಿ ಸಾಬೀತು ಆಗದೆ ಖುಲಾಸೆ ಆಗಿದ್ದಾನೆ ಎಂಬುದಂತೂ ಸ್ಪಷ್ಟವಾಗುತ್ತಿದೆ..



ಮುಂದುವರಿಯುವುದು.....

## ಬಾಗಲಕೋಟೆ ಕಳ್ಳತನ ಪ್ರಕರಣ!

# ಆರೋಪಿತರಿಂದ 26 ಲಕ್ಷ ಹಾಗೂ ಬಂಗಾರ ವಶ!!







ಇತ್ತೀಚಿನ ದಿನಗಳಲ್ಲಿ ಈ ಕಳ್ಳರಿಗೆ ಕಳ್ಳತನವೆಂಬುದು ಒಂದು ಹವ್ಯಾಸವಾಗಿಬಿಟ್ಟಿದೆ. ಹಾಡುಹಗಲೇ ಸಾರ್ವಜನಿಕ ಸ್ಥಳಗಳಲ್ಲಿ ಕ್ಷಣಾರ್ಧದಲ್ಲೇ ದೋಚುವುದು ಸರ್ವೇಸಾಮಾನ್ಯವಾಗಿದೆ. ಅದರಲ್ಲೂ ನಮ್ಮ ಕರ್ನಾಟಕ ರಾಜ್ಯದಲ್ಲಿ ತೀವ್ರವಾಗಿ ಕಳ್ಳರ ಹಾವಳಿ ಹೆಚ್ಚಾಗಿದೆ. ಇತ್ತೀಚಿಗೆ ನಡೆದ ನಡೆದ ಬ್ಯಾಂಕ್ ದರೋಡೆ ಮಾಡಿ ಪರಾರಿಯಾಗಿದ್ದ ಖದೀಮರು ನೆರೆರಾಜ್ಯದವರಾಗಿದ್ದು, ಈಗ ಆ ಹೊರ ರಾಜ್ಯದ ಕಳ್ಳರು ಬಾಗಲಕೋಟೆ ಎಸ್ಪಿ ಅವರ ಸತತ ಮಾರ್ಗದರ್ಶದನದಲ್ಲಿ ಕಾಕನೂರು ಎಸ್‌ಬಿಐ ಬ್ಯಾಂಕ್ ಕಳ್ಳತನ ಮಾಡಿದ ಖದೀಮರನ್ನು ಹೆಡೆಮುರಿ ಕಟ್ಟಿದ ಘಟನೆ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಕಾಕನೂರು ಗ್ರಾಮದಲ್ಲಿ ಜರುಗಿದರ ಬಗ್ಗೆ ಬಾದಾಮಿ ಪೊಲೀಸ್ ಠಾಣೆಯಿಂದ ವರದಿಯಾಗಿದೆ.

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಕಾಕನೂರು ಗ್ರಾಮದಲ್ಲಿ ದಿನಾಂಕ 2/9/2025ರಂದು ಎಸ್‌ಬಿಐ ಬ್ಯಾಂಕ್ ದರೋಡೆ ಪ್ರಕರಣದಲ್ಲಿ ಆರೋಪಿತರ ಬಗ್ಗೆ ಬಾದಾಮಿ ಸಿಪಿಐ ಕರಿಯಪ್ಪ ಬಿ. ಬನ್ನೇರವರು ಬಾಗಲಕೋಟೆ ಜಿಲ್ಲಾ ವರಿಷ್ಠಾಧಿ ಕಾರಿ ಸಿದ್ಧಾರ್ಥ ಗೊಯಲ್, ಜಿಲ್ಲಾ ಪೊಲೀಸ್ ಅಧೀಕ್ಷಕರು ಪ್ರಸನ್ನ ದೇಸಾಯಿ ಮಹಾಂತೇಶ ಜಿದ್ದಿ, ಡಿವೈಎಸ್ಪಿ ಹುನಗುಂದ ಸಂತೋಷ ಬನಹಟ್ಟಿರವರ ಮಾರ್ಗದರ್ಶನದಲ್ಲಿ ತನಿಖೆ ಚುರುಕುಗೊಳಿಸಿದ್ದಾಗ ಬಾದಾಮಿ ಸಿಪಿಐರವರು ಹಾಗೂ ಸಿಬ್ಬಂದಿ ವರ್ಗದವರು ಮಾಹಿತಿ ಸಂಗ್ರಹಿಸುತ್ತಿದ್ದಾಗ ಈ ಪ್ರಕರಣದಲ್ಲಿ ಹೊರರಾಜ್ಯದ ಉತ್ತರಭಾರತದಲ್ಲಿ ಆರೋಪಿತರು ಭಾಗಿಯಾಗಿರುವ ಬಗ್ಗೆ ಸಂಶಯ ಬಂದಿದ್ದರಿಂದ ಬಾದಾಮಿ ಠಾಣೆಯ ಅಪರಾಧ ವಿಭಾಗದ ಪಿಎಸ್‌ಐ ಮತ್ತು ಸಿಬ್ಬಂದಿವರ್ಗದವರು ಉತ್ತರ ಪ್ರದೇಶಕ್ಕೆ ಹೋಗಿ ಸುಮಾರು ಒಂದು ತಿಂಗಳವರೆಗೆ ಅಲ್ಲಿಯೇ ಇದ್ದು ಬ್ಯಾಂಕ್ ಕಳ್ಳತನ ಮಾಡುವ ಆರೋಪಿತರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿಕೊಂಡು ಬಂದಿದ್ದು ಉತ್ತರ ಪ್ರದೇಶದ ಆರೋಪಿತರು ಬ್ಯಾಂಕ್ ಕಳ್ಳತನ ಮಾಡಲು

**ಬಾಗಲಕೋಟೆ**
✍ ಮಂಜುನಾಥ ಕರೋಳಿ


ಎಸ್ಪಿ ಸಿದ್ಧಾರ್ಥ ಗೋಯಲ್


ಡಿವೈಎಸ್ಪಿ ಗಜಾನಂದ ಸುತಾರ


ಸಿಪಿಐ ಕರಿಯಪ್ಪ ಬನ್ನೆ

ಬ್ಯಾಂಕ್‌ಗಳನ್ನು ಹುಡುಕಾಡಲು ಬಂದಿರುತ್ತಾರೆ ಅಂತಾ ಮಾಹಿತಿ ಬಂದ ಮೇರೆಗೆ ದಿನಾಂಕ 13/11/2025 ರಂದು ಬಾದಾಮಿ ಠಾಣೆಯ ಅಪರಾಧ ವಿಭಾಗದ ಪಿಎಸ್‌ಐ ಹಾಗೂ ಸಿಬ್ಬಂದಿಯವರು ವಿಶೇಷ ಗಸ್ತು ಕರ್ತವ್ಯ ನಿರ್ವಹಿಸುತ್ತಿರುವಾಗ ಸಂಶಯಯುಕ್ತವಾಗಿ ತಿರುಗಾಡು ತ್ತಿರುವ ವ್ಯಕ್ತಿಯ ಮೇಲೆ ಸಂಶಯ ಬಂದು ಹೆಸರು ಮಹ್ಮದ್ ನವಾಬ್ ತಂದೆ ಜಾರೇರ ಅಲಿಖಾನ್ ಸಾ॥ ಕಕ್ರಾಳ ಬದಾಯು ಜಿಲ್ಲಾ, ರಾಜ್ಯ-ಉತ್ತರಪ್ರದೇಶ ಅಂತಾ ಹೇಳಿದ್ದು ಸಮರ್ಪಕ ಉತ್ತರ ಕೊಡದೇ ಇದ್ದುದರಿಂದ ಹೆಚ್ಚಿನ ವಿಚಾರಣೆಗೆ ಠಾಣೆಗೆ ತಂದು ಪೊಲೀಸ್ ಭಾಷೆಯಲ್ಲಿ ವಿಚಾರಿಸಿದಾಗ ಸತ್ಯ ಬಿಚ್ಚಿ ಬಿಚ್ಚಿಟ್ಟಿದ್ದಾನೆ.

ತಾನು ಹಾಗೂ ಐದು ಜನರ ತಂಡದೊಂದಿಗೆ ಬ್ಯಾಂಕ್ ಕಳ್ಳತನ ಮಾಡುವ ಉದ್ದೇಶದಿಂದ ದಿನಾಂಕ 2/9/2025ರಂದು ರಾತ್ರಿ 10 ಗಂಟೆಗೆ ರಾಮದುರ್ಗ ಕಡೆಗೆ ಹೋಗುವ ರಸ್ತೆ ಮುಖಾಂತರ ಗ್ಯಾಸ್ ಆಕ್ಸಿಜನ್ ಸಿಲಿಂಡರ್ ಗ್ಯಾಸ್ ಕಟರ್ ಇನ್ನಿತರ ವಸ್ತುಗಳನ್ನು ತೆಗೆದುಕೊಂಡು ಒಂದು ಚೀಲದಲ್ಲಿ ಹಾಕಿ ಒಂದು ಕಾರ್ ಮುಖಾಂತರ ಒಂದು ಹಳ್ಳಿಯ ಹೊರಗೆ ಹೊಲದಲ್ಲಿ ಇಳಿದುಕೊಂಡು ಚಾಲಕನಿಗೆ ವಾಹನವನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗಿ ಬೆಳಿಗ್ಗೆ ಸುಮಾರು 4 ಗಂಟೆಗೆ ಅದೇ ಸ್ಥಳಕ್ಕೆ ಬಂದು ತಾಸು ಅಡಗಿ ಕುಳಿತುಕೊಂಡು ಸುತ್ತಮುತ್ತ ಗಮನಿಸಿ ನಂತರ ಸುಮಾರು 11 ಗಂಟೆ ಸುಮಾರಿಗೆ ಜನರು ಯಾರೂ ಇಲ್ಲದನ್ನು ಗಮನಿಸಿ ನಾವು ತಂದಿರುವ ಕಪ್ಪು ಬಣ್ಣದ ಸ್ಪ್ರೇ ಮಾಡಿದ್ದು ನಂತರ ಎರಡು ಸಣ್ಣ ಹಾರಿಗರ ಸಹಾಯದಿಂದ ಶಟರ್‌ನ್ನು ಸ್ವಲ್ಪ ಮೇಲಕ್ಕೆತ್ತಿ ಬ್ಯಾಂಕಿನ ಹಿಂದಿನ ಕಬ್ಬಿಣದ ಗೇಟನ್ನು ತೆಗೆದು ಒಳಗೆ ಹೋಗಿ ಕ್ಯಾಮರಾಗಳಿಗೆ ಸ್ಪ್ರೇ ಮಾಡಿ ಬ್ಯಾಂಕ್‌ನಲ್ಲಿದ್ದ ಸೈರನ್ ವೈರ್‌ನಲ್ಲಿ ಕತ್ತರಿಸಿ ನಂತರ ಬ್ಯಾಂಕ್‌ನಲ್ಲಿದ್ದ ಲಾಕರ್‌ನ್ನು ಗ್ಯಾಸ್ ಕಟರ್ ಬಳಸಿ ಲಾಕರ್ ಕಟ್ ಮಾಡಿ ಅದರಲ್ಲಿದ್ದ ಬಂಗಾರ, ಹಣವನ್ನು ಕಳ್ಳತನ ಮಾಡಿಕೊಂಡು ಹೋಗಿರುವುದಾಗಿ ಒಪ್ಪಿಕೊಂಡಿದ್ದು, ಮತ್ತೆ ಬ್ಯಾಂಕ್‌ಗಳನ್ನು ಕಳ್ಳತನ ಮಾಡಲು ಹುಡುಕಾಡುತ್ತಿದ್ದರು. ನಂತರ ಬಾದಾಮಿ ಪೊಲೀಸರು ಆತನ ಹತ್ತಿರ ಇದ್ದ ಈ ಪ್ರಕರಣಕ್ಕೆ ಸಂಬಂಧಿಸಿದ ಲಕ್ಷ ಕಿಮ್ಮತ್ತಿನ 8 ಗ್ರಾಂ ಬಂಗಾರದ ಉಂಗುರ ಹಾಗು ಜೇಬಿನಲ್ಲಿರುವ 10 ಸಾವಿರ ರೂಪಾಯಿ ಜಪ್ತಿ ಮಾಡಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದರು.

ಈ ಪ್ರಕರಣಕ್ಕೆ ಸಂಬಂಧಿಸಿದ ಬಾದಾಮಿ ಠಾಣೆ ಅಪರಾಧ ಸಂಖ್ಯೆ 07/2019 ನೇದರಲ್ಲಿ ದಸ್ತಗೀರ ಆದ ಉತ್ತರಪ್ರದೇಶದ ರಾಜ್ಯದ ಕಮರುಲ್ ಖಾನ್ ಅಲಿಯಾಸ್ ಮಾಮು ಉತ್ತರ ಪ್ರದೇಶ ರಾಜ್ಯಕ್ಕೆ ಹೋಗಿ ಸದರಿ ಪ್ರಕರಣದಲ್ಲಿ ಮಾಡಿದ ಸುಮಾರು 20 ಲಕ್ಷ 62 ಸಾವಿರ ರೂಪಾಯಿ ಕಿಮ್ಮತ್ತಿನ 165 ಗ್ರಾಂ ಬಂಗಾರದ ಆಭರಣಗಳು ಹಾಗೂ ನಗದು ಹಣ ಒಂದು ಲಕ್ಷ 45 ಸಾವಿರ ರೂಪಾಯಿಗಳನ್ನು ಮತ್ತು ಬಾದಾಮಿ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ 07/2019 ಕುಳಗೇರಿ ವಿರಪುಕೇಶಿ ಬ್ಯಾಂಕ್ ಕಳ್ಳತನ ಪ್ರಕರಣದಲ್ಲಿ ಭಾಗಿಯಾದ ಕಮರುಲ್‌ಖಾನ್ ಈತನಿಂದ 3 ಲಕ್ಷ 12 ಸಾಮಿರ ಕಿಮ್ಮತ್ತಿನ 25ಗ್ರಾಂ ಬಂಗಾರದ ಆಭರಣಗಳನ್ನು ಹೀಗೆ ಇಬ್ಬರು ಆರೋಪಿತರಿಂದ ಒಟ್ಟು 24,75,000/- ಸಾವಿರ 198 ಗ್ರಾಂ ಬಾಂಗಾರದ ಆಭರಣಗಳನ್ನು ಮತ್ತು ನಗದು ಹಣ 1 ಲಕ್ಷ 55 ಸಾವಿರ ರೂಪಾಯಿ ಸೇರಿ ಒಟ್ಟು 26 ಲಕ್ಷ 30 ಸಾವಿರ ರೂಪಾಯಿಗಳು ಜಪ್ತಿಮಾಡಿ ಪ್ರಕರಣವನ್ನು ಭೇದಿಸಿದ್ದು ಇರುತ್ತದೆ

ಈ ಪ್ರಕರಣವನ್ನು ಭೇಧಿಸುವಲ್ಲಿ ಬಾದಾಮಿ ಸಿಪಿಐ ಕರೆಪ್ಪ ಬನ್ನೆ, ಕೆರೂರ ಠಾಣೆ ಪಿಎಸ್‌ಐ ಬಿ.ಎಮ್. ರಬಕವಿ, ಬಾದಾಮಿ ಠಾಣೆ ಪಿಎಸ್‌ಐ ವಿಜಯಕುಮಾರ ರಾಠೊಡ ಹೆಚ್.ಕೆ. ನೆರಳೆ. ಬಾದಾಮಿ ಠಾಣೆ ಸಿದ್ದಪ್ಪ ಯಡಹಳ್ಳಿ, ಪಿಎಸ್‌ಐ ಗುಳೆದಗುಡ್ಡ, ಇಳಕಲ್ಲ ಗ್ರಾಮೀಣ ಠಾಣೆ ಪಿಎಸ್‌ಐ ಎಂ.ಎ. ಸತ್ತಿಗೌಡರ ಹಾಗೂ ಸಿಬ್ಬಂದಿ ವರ್ಗದವರಿಗೆ ಸದರಿ ಕಾರ್ಯಾ ಚರಣೆಯಲ್ಲಿ ಮಾನ್ಯ ಎಸ್ಪಿ ಸಿದ್ಧಾರ್ಥ ಗೊಯಲ್‌ರವರು ಪ್ರಶಂಸೆ ವ್ಯಕ್ತಪಡಿಸಿ ಬಹುಮಾನ ಘೋಷಿಸಿದ್ದಾರೆ.



# 3 ಕೋಟಿ ರೂ. ವಿಮೆಯ ಹಣಕ್ಕಾಗಿ ಹೆತ್ತ ತಂದೆಗೆ ವಿಷಪೂರಿತ ಸರ್ಪ ಕಚ್ಚಿಸಿ ಕೊಲೆಗೈದ

11 ☜

ದ್ದಾರೆ. ಹಾವು ಕಚ್ಚಿ ಜೀವನ್ಮರಣದ ನಡುವೆ ಒದ್ದಾಡುತ್ತಿದ್ದ ಇ.ಪಿ. ಗಣೇಶನ್‌ನನ್ನು ಆಸ್ಪತ್ರೆಗೆ ಸೇರಿಸುವಲ್ಲಿ ಬೇಕಂತಲೇ ವಿಳಂಬ ಮಾಡಿ ಆತ ಮನೆಯಲ್ಲಿ ಸಾಯು ವಂತೆ ಮಾಡಿದ್ದಾರೆ. ಇದರಲ್ಲಿ ಬಾಲಾಜಿ ಮತ್ತು ಪ್ರಶಾಂತ್ ಎನ್ನುವರು ಮೊದಲೇ ರೂಪಿಸಿದ ಸಂಚಿನಂತೆ ಮನೆಯೊಳಗೆ ಹಾವನ್ನು ಬಿಡದಿ ಕೊಂದು ಹಾಕಿದ್ದಾರೆ. ಹಾವು ಕಚ್ಚಿದ ನಂತರ ಅದು ಆಕಸ್ಮಿಕ ಘಟನೆ ಎನ್ನುವಂತೆ ಬಿಂಬಿಸಲು ಹಾಗೂ ಸಾಕ್ಷಿ ನಾಶಪಡಿಸಲು ಪ್ರಯತ್ನಿಸಿ ದ್ದಾರೆ.

**ಹಂತಕ ಪುತ್ರರು-ದೋಸ್ತಿಗಳು ಅಂದರ್...**

ಏನೂ ಅರಿಯದೇ ಇ.ಪಿ. ಗಣೇಶನ್ ತನ್ನ ಮೇಲೆ ಮುಂದೆ ತಾನು ಸತ್ತ ನಂತರ ಕುಟುಂಬಕ್ಕೆ ಆಧಾರವಾಗ ಬಹುದೆಂದು ಕಷ್ಟಪಟ್ಟು 3 ಕೋಟಿ ರೂ.ಗಳ ವಿಮೆ ಮಾಡಿದ್ದನು. ಆದರೆ ಖಾಸಗಿ ಕಂಪನಿಯಲ್ಲಿ ಉದ್ಯೋಗಿ ಗಳಾಗಿದ್ದ ಮಕ್ಕಳು ಅಪ್ಪನೆಂಬ ಕರುಣೆಯಿಲ್ಲದೇ 3 ಕೋಟಿ ರೂ.ಗಳ ದುರಾಸೆಗೆ ಬಿದ್ದು ತಂದೆಯನ್ನೇ ಬಲಿ ಹಾಕಿ ಇದೀಗ ಪೊಲೀಸರ ಅತಿಥಿಗಳಾಗಿ ಜೈಲು ಸೇರಿದ್ದಾರೆ. ಇವರೊಂದಿಗೆ ಸೇರಿ ಕೃತ್ಯವೆಸಗಿದ್ದ ನಾಲ್ವರು ಸ್ನೇಹಿತರು ಜೈಲು ಸೇರಿ ಮುದ್ದೆ ಮುರಿಯುತ್ತಿದ್ದಾರೆ. ವಿಶೇಷ ತನಿಖಾ ತಂಡದ ಕಾರ್ಯಾಚರಣೆಗೆ ಐಜಿಪಿ ಅಸ್ರಾ ಗರ್ಗ್, ತಿರುವಲ್ಲೂರ ಎಸ್ಪಿ ವಿವೇಕಾನಂದ ಶುಕ್ಲಾ ಅಭಿನಂದಿಸಿದ್ದಾರೆ. ಡಿಸೆಂಬರ್ ಕೊನೆಯ ವಾರದಲ್ಲಿ ಈ ಹತ್ಯಾ ಪ್ರಕರಣ ಬೆಳಕಿಗೆ ಬಂದಿದೆ.

# ಅಮಲು ಪದಾರ್ಥ ಗಾಂಜಾ ಪ್ರಕರಣ... ಗದಗ ಜಿಲ್ಲೆಯಾದ್ಯಂತ ಪೊಲೀಸರ ಹದ್ದಿನ ಕಣ್ಣು

# ಗಾಂಜಾ ಮುಕ್ತ ಜಿಲ್ಲೆಗೆ ಸಂಕಲ್ಪ : ಎಸ್ಪಿ ರೋಹನ್ ಜಗದೀಶ್

ಗದಗ
✍ ಮನ್ನಾಪೂರ

ಮುದ್ರಣ ಕಾಶಿ ಎಂದು ಹೆಸರಾದ ಗದಗ ಜಿಲ್ಲೆಯಾದ್ಯಂತ ಅಮಲು ಪದಾರ್ಥ ಗಾಂಜಾದ ಘಾಟು ಎಲ್ಲೆಂದರಲ್ಲಿ ಪಸರಿಸಿತ್ತು. ಇದರಿಂದ ಯುವಜನಾಂಗ, ಕಾಲೇಜು ವಿದ್ಯಾರ್ಥಿಗಳು ಸಂಪೂರ್ಣ ಹಾದಿ ತಪ್ಪಿದ್ದರು. ಬೆಳಗಾವಿಯ ಮಹಾನಗರದಿಂದ ಗದಗ ಜಿಲ್ಲೆಯ ಎಸ್ಪಿ ಆಗಿ ಅಧಿಕಾರ ವಹಿಸಿಕೊಂಡ ಖಡಕ್ ಮತ್ತು ಇಂಟೆಲಿಜೆಂಟ್ ಆಫೀಸರ್ ರೋಹನ್ ಜಗದೀಶ್ ಜಿಲ್ಲೆಯ ಪೊಲೀಸ್ ಯಂತ್ರಣಕ್ಕೆ ಖಡಕ್ ಆದ ಟಾಸ್ಕ್ ನೀಡಿ ಗಾಂಜಾ ಘಾಟಿನ ಜಾಲವನ್ನು ಬೇರು ಸಮೇತ ಕಿತ್ತು ಹಾಕಲು ಕಠಿಣವಾದ ಕ್ರಮ ವಹಿಸಿದ್ದಾರೆ. ಈ ಹಿಂದೆ ಗದಗ ಜಿಲ್ಲೆಗೆ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಭೇಟಿ ನೀಡಿದ್ದ ಸಂದರ್ಭದಲ್ಲಿ ಗಾಂಜಾ ಹಾವಳಿ ಬಗ್ಗೆ ಪ್ರಸ್ತಾಪಿಸಿ ಕೇವಲ ಆರು ತಿಂಗಳಲ್ಲಿ ಗದಗ ಜಿಲ್ಲೆಯನ್ನು ಸಂಪೂರ್ಣ ವ್ಯಸನ ಮುಕ್ತ ಜಿಲ್ಲೆ ಮಾಡಲು ಪೊಲೀಸರಿಗೆ ಕರೆ ನೀಡಿದ್ದರು.


ಗದಗ ಎಸ್ಪಿ ರೋಹನ್ ಜಗದೀಶ್

**ಹೊರ ರಾಜ್ಯದಿಂದ ಗಾಂಜಾ ಪೂರೈಕೆ...**

ಗದಗ ಜಿಲ್ಲೆಯಲ್ಲಿ ಕಳೆದ 2023ರಲ್ಲಿ ಕೇವಲ ಒಂದು ಪ್ರಕರಣವನ್ನು ಹೊರತುಪಡಿಸಿದರೆ, ಗಾಂಜಾ ಬೆಳೆದು ಮಾರಾಟ ಮಾಡುವ ಪ್ರಕರಣಗಳು ಪತ್ತೆಯಾಗಿಲ್ಲ. ಗದಗ ಜಿಲ್ಲೆಯಾದ್ಯಂತ ಪೂರೈಕೆಯಾಗುವ ಗಾಂಜಾ ಅಕ್ರಮವಾಗಿ ಆಂಧ್ರಪ್ರದೇಶದ ಗೋದಾವರಿ, ಒರಿಸ್ಸಾ ಜಿಲ್ಲೆಗಳಿಂದ ವ್ಯವಸ್ಥಿತವಾಗಿ ರೇಲ್ವೆ ಮೂಲಕ ಅಕ್ರಮವಾಗಿ ಬರುತ್ತವೆ. ಇದಕ್ಕೆ ಸಂಬಂಧಿಸಿದಂತೆ 2025ರಲ್ಲಿ ರೇಲ್ವೆ ಪೊಲೀಸರು ಮೂರು ಗಾಂಜಾ ಪ್ರಕರಣಗಳನ್ನು ಪತ್ತೆ ಮಾಡಿದ್ದಾರೆ.

**ಸಿಂಥೆಟಿಕ್ ಡ್ರಗ್ ಪ್ರಕರಣಗಳಿಲ್ಲ...**

ಗದಗ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಕೇವಲ ಗಾಂಜಾ ಹಾವಳಿ ಹೊರತುಪಡಿಸಿದರೆ ಮತ್ತಿನ್ಯಾವುದೇ ಬೇರೆ ತರಹದ ಡ್ರಗ್ಸ್ ಪ್ರಕರಣಗಳು ದಾಖಲಾಗಿತ್ತು. ಇತ್ತೀಚಿಗೆ ರಾಜಧಾನಿ ಬೆಂಗಳೂರಿನಲ್ಲಿ ಪತ್ತೆಯಾದಂತಹ ಮಾದರಿಯ ಡ್ರಗ್ ಕಾರ್ಖಾನೆಗಳು ಜಿಲ್ಲೆಯಲ್ಲಿ ಇಲ್ಲ. ಕೊಕೇನ್, ಹೆರಾಯಿನ್, ಎಂಡಿಎಂ ಕ್ರಿಸ್ಟಲ್, ಇವೆಲ್ಲವೂ ಅಂತರ ರಾಷ್ಟ್ರೀಯ ಡ್ರಗ್‌ಗಳು. ನಿರ್ದಿಷ್ಟ ಪ್ರಮಾಣದ ಕೆಮಿಕಲ್ ಬಳಸಿ ತಯಾರಿ ಮಾಡುವ ಸಿಂಥೆಟಿಕ್ ಡ್ರಗ್ ಪ್ರಕರಣಗಳು ಜಿಲ್ಲೆಯಲ್ಲಿ ಈವರೆಗೂ ಪತ್ತೆಯಾಗಿಲ್ಲ. ವೈದ್ಯರು ಚೀಟಿಯಿಲ್ಲದೇ ಕೊಡುವ ಎಚ್ ಡ್ರಗ್ ಪ್ರಕರಣಗಳ ಮೇಲೂ ನಿಗಾವಹಿಸಲಾಗಿದೆ ಎಂದು ಸ್ವತಃ ಎಸ್ಪಿ ರೋಹನ್ ಜಗದೀಶ್ ತಿಳಿಸಿದ್ದಾರೆ.

**ಸಾರ್ವಜನಿಕರ ಸಹಕಾರ ಅಗತ್ಯ...**

ಗದಗ ಜಿಲ್ಲೆಯನ್ನು ಸಂಪೂರ್ಣ ವ್ಯಸನ ಮುಕ್ತಗೊಳಿಸಲು ಸಾರ್ವಜನಿಕರ ಸಹಕಾರವೂ ಅಗತ್ಯವಾಗಿ ಬೇಕು. ಜಿಲ್ಲೆಯಾದ್ಯಂತ ಎಲ್ಲೇ ಗಾಂಜಾ ಬೆಳೆಸಿ ಮಾರಾಟ ಮಾಡುವುದು, ಅಕ್ರಮವಾಗಿ ತಂದು ಮಾರಾಟ ಮಾಡುವುದು, ಗಾಂಜಾ ಸೇವನೆಯಂತಹ ಪ್ರಕರಣಗಳು ಕಂಡು ಬಂದರೆ ಆ್ಯಪ್ ಮೂಲಕ ಪೊಲೀಸರಿಗೆ ಮಾಹಿತಿ ಮುಟ್ಟಿಸಿದರೆ ತಕ್ಷಣ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಎಸ್ಪಿ ರೋಹನ್ ಜಗದೀಶ್ ತಿಳಿಸಿದ್ದಾರೆ.

ಗೂಗಲ್ ಪ್ಲೇಸ್ಟೋರ್‌ನಲ್ಲಿ 'ಕರ್ನಾಟಕ ಫ್ರೀ ಡ್ರಗ್ ಆ್ಯಪ್', 'ಡ್ರಗ್ ಮ್ಯಾಪ್' ಎಂಬ ಆ್ಯಪ್‌ಗಳು ಲಭ್ಯವಿದ್ದು, ಇವುಗಳನ್ನು ಸಾರ್ವಜನಿಕರು ಡೌನ್ ಲೋಡ್ ಮಾಡಿಕೊಂಡು ತಮಗೆ ದೊರೆತ ಮಾಹಿತಿಯನ್ನು ಪೊಲೀಸರಿಗೆ ತಿಳಿಸಬೇಕು. ಮಾಹಿತಿ ಪೂರೈಸುವವರ ಹೆಸರುಗಳನ್ನು ಗೌಪ್ಯವಾಗಿ ಇಡಲಾಗುವುದು. ಸಿಕ್ಕ ಮಾಹಿತಿ ಆಧಾರದ ಮೇಲೆ ಸುಮೋಟೊ ಪ್ರಕರಣ ದಾಖಲಿಸಿ, ಗಾಂಜಾ ಮಾರಾಟ ಪ್ರಕರಣಗಳ ತಡೆಗೆ ಕಟ್ಟುನಿಟ್ಟಿನ ಕ್ರಮ ವಹಿಸಲಾಗುವುದು. ಎನ್‌ಡಿಪಿಎಸ್‌ಗೆ ಸಂಬಂಧಿಸಿದಂತೆ 2024ಕ್ಕಿಂತ 2025ರಲ್ಲಿ ಹೆಚ್ಚು ಪ್ರಕರಣಗಳನ್ನು ಗದಗ ಜಿಲ್ಲೆಯಲ್ಲಿ ದಾಖಲಿಸಲಾಗಿದೆ. ಗಾಂಜಾ ಪ್ರಕರಣಗಳು ಕಂಡು ಬಂದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಎಸ್ಪಿ ರೋಹನ್ ಜಗದೀಶ್ ತಿಳಿಸಿದ್ದಾರೆ.

**ಜಾಗ್ರತಿ ಕಾರ್ಯಕ್ರಮ...**

ಗದಗ ಜಿಲ್ಲೆಯ ಪೊಲೀಸರು ವ್ಯಸನ ಮುಕ್ತ ಜಿಲ್ಲೆಯನ್ನಾಗಿಸುವ ನಿಟ್ಟಿನಲ್ಲಿ ಅಲ್ಲಲ್ಲಿ ಜಾಗ್ರತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತ ಬರುತ್ತಿದ್ದಾರೆ. 2024ನೇ ಸಾಲಿನಲ್ಲಿ 138 ಹಾಗೂ 2025ರಲ್ಲಿ 364 ಜಾಗ್ರತಿ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಶಾಲೆ, ಕಾಲೇಜು, ಆಸ್ಪತ್ರೆ, ಬಸ್ ನಿಲ್ದಾಣ, ಸಂತೆ ಸೇರಿದಂತೆ ಜನದಟ್ಟಣೆ ಇರುವ ಪ್ರದೇಶಗಳಲ್ಲೆಲ್ಲಾ ಡ್ರಗ್ಸ್‌ನಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗ್ರತಿ ಮೂಡಿಸುವ ಕೆಲಸ ಮಾಡುತ್ತಿದ್ದಾರೆ.


ಗಾಂಜಾ ಸಂಗ್ರಹ ಚಿತ್ರ

**ಗಾಂಜಾ ವ್ಯಸನಿಗಳು, ಮಾರಾಟಗಾರರ ಮೇಲೆ ನಿಗಾ...**

ಗದಗ ಜಿಲ್ಲೆಯಲ್ಲಿ ಗಾಂಜಾ ವ್ಯಸನಿಗಳು ಮತ್ತು ಮಾರಾಟಗಾರರು ಸೇರಿದಂತೆ ಒಟ್ಟು 114 ಎಂಓಬಿಗಳು ಇದ್ದಾರೆ. ಒಬ್ಬನಿಗೆ ಒಬ್ಬ ಪೊಲೀಸ್ ಸಿಬ್ಬಂದಿ ನೇಮಿಸಿ ಪ್ರತಿ ಗುರುವಾರ ಅವರನ್ನು ತಪಾಸಣೆ ಮಾಡಿಸಲಾಗುತ್ತಿದೆ. ಗಾಂಜಾ ಸೇವಿಸಿದವನ ಮೂತ್ರ ಪರೀಕ್ಷೆ ಮಾಡಿ, ವರದಿ ಪಾಸಿಟಿವ್ ಬಂದರೆ ಆತನ ಮೇಲೆ ಮತ್ತೊಂದು ಪ್ರಕರಣ ದಾಖಲಿಸುತ್ತಿದ್ದು, ಅದೇ ರೀತಿ ಗಾಂಜಾ ಸಾಗಣಿಕೆ ಪ್ರಕರಣದಲ್ಲಿ ಭಾಗಿಯಾದವರ ಮೇಲೂ ಪೊಲೀಸರು ಸೂಕ್ಷ್ಮ ಹದ್ದಿನ ಕಣ್ಣು ಇರಿಸಿದ್ದಾರೆ.

2025ನೇ ಸಾಲಿನಲ್ಲಿ ಗದಗ ಜಿಲ್ಲೆಯಲ್ಲಿ 32 ಎನ್‌ಡಿಪಿಎಸ್ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ 21 ಜನ ಆರೋಪಿಗಳನ್ನು ಬಂಧಿಸಲಾಗಿದೆ. 2025ರಲ್ಲಿ ದಾಖಲಾದ ಪ್ರಕರಣಗಳಲ್ಲಿ 19 ಗಾಂಜಾ ಸೇವನೆ ಪ್ರಕರಣಗಳಿವೆ. 12 ಪ್ರಕರಣಗಳು ಗಾಂಜಾ ಮಾರಾಟ, ಸಾಗಾಣಿಕೆಗೆ ಸಂಬಂಧಿಸಿದವು. 32 ಪ್ರಕರಣಗಳಲ್ಲಿ 8.86 ಲಕ್ಷ ರೂ. ಮೌಲ್ಯದ 6.50 ಕೆಜಿ ಗಾಂಜಾ ವಶಪಡಿಸಿಕೊಂಡು ನಾಶ ಪಡಿಸಲಾಗಿದೆ. 2024ರಲ್ಲಿ ಎನ್‌ಡಿಪಿಎಸ್ ಅಡಿಯಲ್ಲಿ 23 ಪ್ರಕರಣ ದಾಖಲಾಗಿದ್ದು, ಇದರಲ್ಲಿ 11 ಗಾಂಜಾ ಸೇವನೆ ಪ್ರಕರಣಗಳು ಹಾಗೂ 12 ಗಾಂಜಾ ಸಾಗಣೆ ಮತ್ತು ಮಾರಾಟಕ್ಕೆ ಸಂಬಂಧಿಸಿದ ಪ್ರಕರಣಗಳಿವೆ. 15 ಜನ ಆರೋಪಿತರನ್ನು ಬಂಧಿಸಲಾಗಿದೆ ಎಂದು ಎಸ್ಪಿ ರೋಹನ್ ಜಗದೀಶ್ ಮಾಹಿತಿ ನೀಡಿದ್ದಾರೆ. ☯

9 ☞

ತೆಗೆದುಕೊಂಡರು. ಮುಂದೆ ಪಕ್ಕದಲ್ಲಿದ್ದ ಹೋಟೆಲ್‌ನಲ್ಲಿ ಸ್ವಲ್ಪ ಸ್ನಾಕ್ಸ್ ಕಟ್ಟಿಸಿಕೊಂಡು ಧೂಪದಾಳದ ರೇಲ್ವೆ ಹಳಿ ದಾಟಿ ಪಕ್ಕದಲ್ಲಿದ್ದ ಜಿಎಲ್‌ಬಿಸಿ ಕೆನಾಲ್‌ನ ನಿರ್ಜನ ಪ್ರದೇಶದಲ್ಲಿ ಕುಳಿತುಕೊಂಡರು. ತಂದ ಸಾರಾಯಿ, ಸ್ನಾಕ್ಸ್ ತಿಂದರು. ತುಕಾರಾಮನಿಗೆ ಪೂರ್ತಿ ಅಮಲೇರಿತ್ತು. ಸಂತೋಷನು ಪ್ರೇಯಸಿ ಅಶ್ವಿನಿ ಮುಂದೆ ಒತ್ತಾಯಪೂರ್ವಕವಾಗಿ ಆತನ ಬಟ್ಟೆ ಬಿಚ್ಚಿಸಿದನು. ಬೆತ್ತಲಾಗಿದ್ದ ತುಕಾರಾಮನನ್ನು ಕೆಳಗೆ ಕೆಡವಿ ಥಳಿಸತೊಡಗಿದನು. ನಂತರ ಅಲ್ಲೇ ಬಿದ್ದಿದ್ದ ಗುಂಡು ಕಲ್ಲು ಚಪ್ಪಡಿಯೊಂದನ್ನು ಆತನ ತಲೆಯ ಮೇಲೆ ಎತ್ತಿ ಹಾಕಿ ಬರ್ಬರವಾಗಿ ಕೊಲೆ ಮಾಡಿಬಿಟ್ಟನು. ಸಂತೋಷನಿಗೆ ಅಶ್ವಿನಿ ಇದ್ದಾಕೆ 'ಇದೇನು ಮಾಡಿದಿ' ಎಂದಾಗ 'ಹೂಂ ನೀನು ಇಲ್ಲಿ ನಡೆದದ್ದನ್ನು ಯಾರ ಮುಂದಾದರೂ ಬಾಯಿ ಬಿಟ್ಟರೆ ನಿನಗೆ ಇದೇ ಗತಿ ನೋಡು' ಎಂದು ಆಕೆಯನ್ನು ಕರೆದುಕೊಂಡು ಕತ್ತಲಲ್ಲಿ ಪರಾರಿ ಆಗಿಬಿಟ್ಟನು. ಹೋಗುವಾಗ ತುಕಾರಾಮನ ಬಟ್ಟೆಯೆಲ್ಲವನ್ನು ತೆಗೆದುಕೊಂಡು ಒಂದೆಡೆ ಬೀಸಾಕಿ ಹೋದನು. ಇದಿಷ್ಟು ನಡೆದ ಕಥೆಯನ್ನು ಗಿಳಿಪಾಠದಂತೆ ಹಂತಕ ಸಂತೋಷ ಇನ್ಸ್‌ಪೆಕ್ಟರ್ ಮುಲ್ಲಾ ಅವರ ಮುಂದೆ ಹೇಳಿದನು.

**ಸಂತೋಷನ ಇನ್ನೊಂದು ಕೊಲೆ ಬಯಲಿಗೆ...**

ಇತ್ತ ಹಂತಕ ಪ್ರದೀಪ ಅಲಿಯಾಸ್ ಸಂತೋಷ ಬಾಬು ನಾಯಿಕ ಮಾಡಿದ ತುಕಾರಾಮ ಶಿಂಗೆಯ ಬರ್ಬರ ಕೊಲೆಯ ಕುರಿತು ಒಪ್ಪಿಗೆ ನೀಡಿದ ನಂತರ ಡಿವೈಎಸ್ಪಿ ರವಿ ನಾಯಕ್, ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರೊಂದಿಗೆ ಮತ್ತೊಮ್ಮೆ ಸಮಾಲೋಚಿಸಿದ ನಂತರ ಅವರಿಂದ ಸೂಕ್ತ ನಿರ್ದೇಶನಗಳನ್ನು ಪಡೆದುಕೊಂಡು ಹೆಚ್ಚಿನ ತನಿಖೆ ನಡೆಸಿದರು. ಈ ಸಂದರ್ಭದಲ್ಲಿ 2022ರಲ್ಲಿ ಹುಬ್ಬಳ್ಳಿಯ ರೇಲ್ವೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬುಲ್ಲಿ ಮಹಾದೇವ ಎಂಬ ಕ್ರಿಮಿನಲ್ ಚಟುವಟಿಕೆ ಮಾಡುತ್ತಿದ್ದವನನ್ನು ಕಲ್ಲಿನಿಂದ ಜಜ್ಜಿ ಕ್ರೂರವಾಗಿ ಕೊಲೆ ಮಾಡಿ ಚರಂಡಿಯಲ್ಲಿ ಎಸೆದದ್ದನ್ನು ಒಪ್ಪಿಕೊಂಡಿದ್ದಾನೆ. ಬುಲ್ಲಿ ಮಹಾದೇವನ ಕೊಲೆಯ ಸುಳಿವು ಸಿಗದೇ ಪ್ರಕರಣ ಕ್ಲೋಸ್ ಮಾಡಲಾಗಿತ್ತು. ತುಕಾರಾಮ ಶಿಂಗೆ ಕೊಲೆ ಪ್ರಕರಣದ ನಂತರ ಆರೋಪಿ ಪ್ರದೀಪ ಅಲಿಯಾಸ್ ಸಂತೋಷನನ್ನು ರೇಲ್ವೆ ಪೊಲೀಸರಿಗೆ ಒಪ್ಪಿಸಲಾಗಿದೆ.

ಬಹಳ ವರ್ಷಗಳ ಹಿಂದೆಯೇ ನಿಪ್ಪಾಣಿ ಶಹರ ಪೊಲೀಸ್ ಠಾಣೆಯ ಎಂಓಬಿಯಾಗಿ ಪ್ರದೀಪ ಅಲಿಯಾಸ್ ಸಂತೋಷ ನಾಯಿಕ ಎಂಟ್ರಿ ಕೊಟ್ಟಿದ್ದಾನೆ. ಈಗ ಅಶ್ವಿನಿ ತುಕಾರಾಮನ ಕೊಲೆಯ ಪ್ರತ್ಯಕ್ಷ ಸಾಕ್ಷಿಯಾಗಿದ್ದಾಳೆ. ಈಗಾಗಲೇ ನ್ಯಾಯಾಧೀಶರ ಮುಂದೆ 164 ಸ್ಟೇಟ್‌ಮೆಂಟ್ ಕೂಡಾ ನೀಡಿದ್ದಾಳೆ. ಒಟ್ಟಿನ ಮೇಲೆ ಒಂದು ಅನೈತಿಕ ಸಂಬಂಧದ ಆಕ್ರೋಶ ಎಂತಹ ಎಡವಟ್ಟು ಮಾಡಿತು ನೋಡಿ.

**ಹ್ಯಾಟ್ಸಫ್... ಘಟಪ್ರಭಾ ಪೊಲೀಸ್...**

ಅನಾಮಧೇಯ ತರುಣನ ನಿಗೂಢ ಕೊಲೆ ಪ್ರಕರಣವನ್ನು ಅತ್ಯಂತ ಯಶಸ್ವಿಯಾಗಿ ಭೇದಿಸಿ ಹಂತಕನಾದ ಪ್ರದೀಪ ಅಲಿಯಾಸ್ ಸಂತೋಷನನ್ನು ಬಂಧಿಸಿ ಆತನಿಂದ ಮತ್ತೊಂದು ಕೊಲೆ ಪ್ರಕರಣವನ್ನು ಭೇದಿಸಿದ ಚತುರ ಮತ್ತು ಧಾಡಸಿ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ, ಪಿಎಸ್‌ಐ ಕಣವಿ ಮತ್ತು ಸಿಬ್ಬಂದಿಗಳ ಕಾರ್ಯಾಚರಣೆಯನ್ನು ಎಸ್ಪಿ ಡಾ. ಭೀಮಾಶಂಕರ ಗುಳೇದ, ಎಎಸ್ಪಿ ರಾಮನಗೌಡ ಬಸರಗಿ, ಡಿವೈಎಸ್ಪಿ ರವಿ ನಾಯಕ ಅಭಿನಂದಿಸಿದ್ದಾರೆ. ವಿಶೇಷ ತನಿಖಾ ತಂಡದ ಕಾರ್ಯಾಚರಣೆಗೆ 'ಪೊಲೀಸ್ ನ್ಯೂಸ್' ಸ್ಪೆಷಲ್ ಹ್ಯಾಟ್ಸಫ್. ☯


ಎಎಸ್‌ಐ ಪಿ.ಎಂ. ಪಾಟೀಲ, ಮುಖ್ಯಪೇದೆಗಳಾದ ಬಿ.ಎಸ್. ನಾಯಿಕ, ರಾಜು ಹೊಳ್ಳರ, ಪೇದೆಗಳಾದ ಎಸ್.ಎಸ್. ಮಠಪತಿ, ರಾಜು ಧುಮಾಳೆ, ರಾಜು ಪಡತಾರೆ

# ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಗೆ ಸರ್ಕಾರ ಸಿದ್ಧತೆ...!

ಶಾಂತರಾಜು ಜಿ. ಕಲ್ಲಹಳ್ಳಿ

ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಯಿಲ್ಲದೆ ಆಡಳಿತ ಮಂಡಳಿಗಳು ರಚನೆಯಾಗದ ಕಾರಣ ಕೇಂದ್ರ ಸರ್ಕಾರದಿಂದ ಜಿ.ಪಂ. ವಾರು ರಾಜ್ಯಕ್ಕೆ ಬರಬೇಕಿದ್ದ ವಾರ್ಷಿಕ ಆದಾಯ 2500 ಕೋಟಿ ರೂ.ನಂತೆ 10 ಸಾವಿರ ಕೋಟಿ ರೂ. ಅನುದಾನ ಸಿಗದಂತಾಗಿದ್ದು ರಾಜ್ಯ ಅಭಿವೃದ್ಧಿಯಲ್ಲಿ ಕುಂಠಿತವಾಗಿದೆ ಎಂದು ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿದೆ. ಆದರೆ ಜಿ.ಪಂ., ತಾ.ಪಂ. ಚುನಾವಣೆಯು 2023ರ ವಿಧಾನಸಭಾ ಚುನಾವಣೆಯ ಮೇಲೆ ಪರಿಣಾಮ ಬೀರಲಿದೆ ಎಂಬ ಕಾರಣಕ್ಕೆ ಅಂದಿನ ಬಿಜೆಪಿ ಸರ್ಕಾರವು ಜಿ.ಪಂ., ತಾ.ಪಂ. ಕ್ಷೇತ್ರ ವಿಂಗಡಣೆ ಮತ್ತು ಪುನರ್ ರಚನೆಯನ್ನು ಮುಂದಿಟ್ಟು ಮೂರು ವರ್ಷಗಳಿಂದ ಚುನಾವಣೆಯನ್ನು ಮುಂದೂಡುತ್ತಾ ಬಂದಿತ್ತು. ಅಲ್ಲದೆ ಚುನಾವಣಾ ಆಯೋಗಕ್ಕೆ ನೀಡಿದ್ದ ಕ್ಷೇತ್ರ ವಿಂಗಡಣೆ ಅಧಿಕಾರವನ್ನು ವಾಪಸ್ ಪಡೆದು ಸೀಮಾ ಆಯೋಗವನ್ನು ರಚನೆ ಮಾಡಿ ಚುನಾವಣೆ ಮಾಡಲು ಆಯೋಗದ ವರದಿಗೆ ಕಾದು ಕೂತಿತ್ತು. ಅಲ್ಲದೆ ಚುನಾವಣಾ ಆಯೋಗವು ಈ ಬಗ್ಗೆ ಹೈಕೋರ್ಟ್ ಮೆಟ್ಟಿಲೇರಿ ಸರ್ಕಾರಕ್ಕೆ ಛೀಮಾರಿ ಹಾಕುವ ಜೊತೆಗೆ ಸರ್ಕಾರದಿಂದ ದಂಡವನ್ನು ಕಟ್ಟಿಸಿತ್ತು. ಇಷ್ಟೆಲ್ಲಾ ಆದರೂ ಜಿ.ಪಂ., ತಾ.ಪಂ. ಚುನಾವಣೆಗೆ ಮುಹೂರ್ತ ಸಿಗಲೇ ಇಲ್ಲ.



ಡಿಸಿಎಂ ಡಿ.ಕೆ. ಶಿವಕುಮಾರ್



ರಾಮನಗರ ಶಾಸಕ ಇಕ್ಬಾಲ್ ಹುಸೇನ್

ಈಗಾಗಲೇ ರಾಜ್ಯದಲ್ಲಿ ಜಿ.ಪಂ., ತಾ.ಪಂ. ಚುನಾವಣೆಗಳನ್ನು ನಡೆಸಲು ಚುನಾವಣಾ ಆಯೋಗವು ಸಿದ್ಧತೆ ಮಾಡಿದ್ದು, ಆಯಾ ಜಿಲ್ಲಾಧಿಕಾರಿಗಳಿಗೆ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳಲು ಮೌಖಿಕ ಆದೇಶ ನೀಡಿದೆ. ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಸಹ ಸಂಪುಟ ಸಭೆಯಲ್ಲಿ ಏಪ್ರಿಲ್‌ನಲ್ಲಿ ಚುನಾವಣೆ ನಡೆಸಲು ನಿರ್ಣಯ ಮಾಡಲಾಗಿದೆ. ಇದರ ಬೆನ್ನಲ್ಲೇ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರವರು ಜಿ.ಪಂ., ತಾ.ಪಂ. ಚುನಾವಣೆಯ ಮೀಸಲಾತಿ ಪ್ರಕಟಣೆಯಲ್ಲಿನ ಬಗ್ಗೆ ಕೋರ್ಟ್‌ನಲ್ಲಿನ ಸಮಸ್ಯೆಗಳನ್ನು ಶೀಘ್ರವೇ ಪರಿಹರಿಸುವಂತೆ ಪಂಚಾಯತ್‌ರಾಜ್ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರಾದ ಪ್ರಿಯಾಂಕ ಖರ್ಗೆರವರಿಗೆ ಸೂಚನೆ ನೀಡಿದ್ದು, ಈ ಮೂಲಕ ಜಿ.ಪಂ., ತಾ.ಪಂ. ಚುನಾವಣೆಗೆ ಕಾಂಗ್ರೆಸ್ ಪಕ್ಷ ಸದ್ದಿಲ್ಲದೆ ಸಿದ್ಧತೆ ಮಾಡಿಕೊಳ್ಳುತ್ತಿದೆ ಎಂಬ ಚರ್ಚೆಗಳು ರಾಜಕೀಯ ವಲಯದಲ್ಲಿ ನಡೆಯುತ್ತಿವೆ.




ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ

2021ರ ಮಾರ್ಚ್ 31ಕ್ಕೆ ರಾಜ್ಯದಲ್ಲಿನ ಜಿ.ಪಂ. ಮತ್ತು ತಾ.ಪಂ.ಗಳ ಸದಸ್ಯರ ಅಧಿಕಾರದ ಅವಧಿ ಮುಕ್ತಾಯ ಆಗಿದ್ದು, ಕ್ಷೇತ್ರ ವಿಂಗಡಣೆ ಮತ್ತು ಕ್ಷೇತ್ರ ವಿಭಜನೆ ಹಾಗೂ ಮೀಸಲಾತಿ ಘೋಷಣೆಯ ವಿಚಾರ ಮುಂದಿಟ್ಟು 2019-2023ರವರೆಗೆ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರವು ಜಿ.ಪಂ., ತಾ.ಪಂ. ಚುನಾವಣೆ ಮಾಡಲಿಲ್ಲ. ಇದರಿಂದ ಕಳೆದನ ನಾಲ್ಕುಮುಕ್ಕಾಲು ವರ್ಷಗಳಿಂದ ಜಿ.ಪಂ., ತಾ.ಪಂ. ಆಡಳಿತ ಮಂಡಳಿಯಿಲ್ಲದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುಧಾನವು ಸಮರ್ಪಕವಾಗಿ ಬಳಕೆ ಆಗಿದಂತಾಗಿದೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಹಲವು ಅಭಿವೃದ್ಧಿಗಳು ಕುಂಠಿತವಾಗಿದ್ದು ಈ ಎರಡು ಸರ್ಕಾರಗಳ ಯೋಜನೆಗಳು ಜನರಿಗೆ ತಲುಪಿದಂತಾಗಿದೆ ಎಂಬ ಆರೋಪಗಳು ಎದ್ದು ಕಾಣುತ್ತಿವೆ. ಆದರೆ ಇದೀಗ ಚುನಾವಣಾ ಆಯೋಗವು ಜಿ.ಪಂ., ತಾ.ಪಂ. ಚುನಾವಣೆ ಮಾಡಲು ದೃಢ ನಿರ್ಧಾರ ಮಾಡಿದೆ.



ಮಾಗಡಿ ಶಾಸಕ ಹೆಚ್.ಸಿ. ಬಾಲಕೃಷ್ಣ

2023ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಸೀಮಾ ಆಯೋಗದ ವರದಿಯನ್ನು ಮುಂದಿಟ್ಟು ಜಿ.ಪಂ., ತಾ.ಪಂ. ಚುನಾವಣೆ ಮಾಡಲು ಮುಂದಾದರೂ ಕೆಲವು ತಾಂತ್ರಿಕ ಸಮಸ್ಯೆಗಳಿಂದ ಉಚನಾವಣೆ ಮಾಡಲಿಲ್ಲ. ಜೊತೆಗೆ ಲೋಕಸಭಾ ಚುನಾವಣೆಯೂ ಬಂದ ಕಾರಣ ಜಿ.ಪಂ., ತಾ.ಪಂ. ಚುನಾವಣೆಗೆ ಆಯೋಗವು ಹೆಚ್ಚು ಗಮನ ನೀಡಲಿಲ್ಲ. ಆದರೆ ಇದೀಗ ಜಿ.ಪಂ., ತಾ.ಪಂ. ಚುನಾವಣೆಗೆ ಕಾಂಗ್ರೆಸ್ ಸರ್ಕಾರ ಮುಂದಾಗಿದೆ. ಏಕೆಂದರೆ ಲೋಕಸಭಾ ಚುನಾವಣೆಯ ಜೊತೆಗೆ ರಾಜ್ಯದ ಮೂರು ವಿಧಾನಸಭಾ ಚುನಾವಣೆಗಳು ಮುಗಿದಿರುವ ಕಾರಣ ಈ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷ ಜಿ.ಪಂ., ತಾ.ಪಂ. ನಲ್ಲಿಯೂ ಸಹ ಅಧಿಕಾರ ಹಿಡಿಯಲು ಸಂಘಟನೆಗೆ ಮುಂದಾಗಿದ್ದು, ಇದಕ್ಕೆ ಪ್ರತಿಯಾಗಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಪಕ್ಷಗಳು ಜಿ.ಪಂ., ತಾ.ಪಂ. ಚುನಾವಣೆಯಲ್ಲಿ ಮೈತ್ರಿಯಿಲ್ಲ ಎನ್ನುವ ಸಂದೇಶವನ್ನು ಜೆಡಿಎಸ್ ವರಿಷ್ಠರಾದ ಹೆಚ್.ಡಿ. ದೇವೇಗೌಡರವರು ಪ್ರಕಟಿಸಿರುವುದರಿಂದ ಜೆಡಿಎಸ್ ಮುಖಂಡರುಗಳು ಈಗಾಗಲೇ ಎಲ್ಲಾ ಕ್ಷೇತ್ರಗಳಲ್ಲಿ ಚುನಾವಣಾ ವೇದಿಕೆ ಸಿದ್ಧತೆ ಮಾಡಿಕೊಳ್ಳಲು ಮುಂದಾಗಿದ್ದು, ಅದರಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ, ಕನಕಪುರ, ಚನ್ನಪಟ್ಟಣ, ಮಾಗಡಿ ಕ್ಷೇತ್ರಗಳಲ್ಲಿ ಅತೀ ಹೆಚ್ಚು ಕಾರ್ಯಕರ್ತರು ಮುಂದಾಗಿದ್ದು, ಮೀಸಲಾತಿ ಸಮಸ್ಯೆಯ ಕೋರ್ಟ್ ವ್ಯಾಜ್ಯಗಳು ಸರಿಪಡಿಸುವಂತೆ ಡಿ.ಕೆ. ಶಿವಕುಮಾರ್‌ರವರು ನೀಡಿರುವ ಸಂದೇಶ ಜಿ.ಪಂ., ತಾ.ಪಂ. ಚುನಾವಣಾ ಕಣವನ್ನು ಜಿಲ್ಲೆಯಾದ್ಯಂತ ರಂಗೇರಿಸಿದೆ.



ಚನ್ನಪಟ್ಟಣ ಶಾಸಕ ಸಿ.ಪಿ.ಯೋಗೇಶ್ವರ್

ಜಿ.ಪಂ., ತಾ.ಪಂ. ಚುನಾವಣೆಗೆ ಮೀಸಲಾತಿಯನ್ನು ಈಗಾಗಲೇ ಪ್ರಕಟ ಮಾಡಲಾಗಿದೆ. ಆದರೆ ಕ್ಷೇತ್ರಗಳು ವಿಸ್ತರಣೆ ಮಾಡಿರುವ ನಿಟ್ಟಿನಲ್ಲಿ ಮೀಸಲಾತಿಯ ಬಗ್ಗೆ ಕೆಲವರು ಆಕ್ಷೇಪ ವ್ಯಕ್ತಪಡಿಸಿ ನ್ಯಾಯಾಲಯದಲ್ಲಿ ದಾವೆ ಹಾಕಿದ್ದಾರೆ. ಈ ಮೀಸಲಾತಿಯ ವಿಚಾರದಲ್ಲಿನ ನ್ಯಾಯಾಲಯದಲ್ಲಿ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಇಲಾಖೆಯಿಂದ ಕ್ರಮ ಕೈಗೊಳ್ಳುವಂತೆ ಪಂಚಾಯತ್‌ರಾಜ್ ಸಚಿವರಿಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರವರು ಸೂಚನೆ ನೀಡಿದ್ದು, ಇದೇ 2026ರ ಏಪ್ರಿಲ್‌ನಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಯುವುದು ಬಹುತೇಕ ಖಚಿತ ಎಂಬ ಸಂದೇಶವನ್ನು ಸರ್ಕಾರ ನೀಡಿದೆ ಎನ್ನಲಾಗಿದೆ. ಈ ನಿಟ್ಟಿನಲ್ಲಿ ಕ್ಷೇತ್ರವಾರು ಮೀಸಲಾತಿಯ ಆಕಾಂಕ್ಷಿಗಳು ಸಹ ಇದೀಗ ಭಾರಿ ಹೆಮ್ಮೆಯಿಂದ ಉತ್ಸುಕರಾಗಿದ್ದಾರೆ ಎನ್ನುವ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿಬಂದಿದ್ದು, ಏಕೆಂದರೆ ಜೆಡಿಎಸ್ ಮತ್ತು ಬಿಜೆಪಿಯಿಂದ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಸೇರಿದವರಿಗೆ ಮತ್ತು ಮೂಲ ಕಾಂಗ್ರೆಸ್‌ನಲ್ಲಿರುವ ಮುಖಂಡರುಗಳಿಗೆ ಜಿ.ಪಂ., ತಾ.ಪಂ. ಚುನಾವಣೆಯಲ್ಲಿ ಟಿಕೆಟ್ ಆಕಾಂಕ್ಷಿಗಳು ಜೋರಾಗಿದ್ದು, ಏನೇ ಆದರೂ ಟಿಕೆಟ್ ಹಂಚುವ ವಿಚಾರದಲ್ಲಿ ಕಾಂಗ್ರೆಸ್‌ನ ಹೈಕಮಾಂಡ್ ಜಿಲ್ಲೆಯಲ್ಲಿ ಅಂತಿಮವಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿದೆ. ಒಟ್ಟಾರೆ ಹೇಳುವುದಾದರೆ ಬೆಂಗಳೂರು ದಕ್ಷಿಣ ಜಿಲ್ಲೆಯ 4 ಕ್ಷೇತ್ರಗಳಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣಾ ಕಣಕ್ಕೆ ಶೀಘ್ರದಲ್ಲೇ ರಂಗು ಸಿಗಲಿದೆ ಎಂಬುದು ಖಚಿತವಾಗಿದೆ. ☯




ಜೆಡಿಎಸ್ ಜಿಲ್ಲಾಧ್ಯಕ್ಷ ಎ. ಮಂಜುನಾಥ್

# ಪರಸ್ತ್ರೀ ವ್ಯಾಮೋಹಕ್ಕೆ ಬಿದ್ದು ಹೆಣವಾದ ಲಾರಿ ಡ್ರೈವರ್!

4 ☞

ಇಲ್ಲಿಯೇ ಇದ್ದರೆ ಹೊಡೆದು ಸಾಯಿಸಿಬಿಡುತ್ತಾರೆ ಎಂದುಕೊಂಡು ಅಲ್ಲಿಂದ ಓಡಿ ತಪ್ಪಿಸಿಕೊಳ್ಳುವ ಪ್ರಯತ್ನವನ್ನು ನವಾಜ್ ಮಾಡಿದ್ದು ಒಂದಷ್ಟು ದೂರ ಓಡಿದ್ದಾನೆ. ಈ ವೇಳೆ ಅಟ್ಟಿಸಿಕೊಂಡು ಬಂದವರು ಮನಕ್ಕೆ ಬಂದಂತೆ ತದಕಿದ್ದಾರೆ. ಆದರೆ ಮಾರಣಾಂತಿಕ ಹಲ್ಲೆಯಿಂದ ತೀವ್ರಗಾಯಗೊಂಡಿದ್ದ ನವಾಜ್ ಸಂಪೂರ್ಣ ಅಸ್ವಸ್ಥಗೊಂಡಿದ್ದನು. ನವಾಜ್ ಬದುಕುವುದಿಲ್ಲ ಎಂಬುದು ಗೊತ್ತಾಯಿತೋ ಪೂರ್ಣಚಂದ್ರ ಅಂಡ್ ಗ್ಯಾಂಗ್ ಮುಂದೇನು ಮಾಡುವುದೇನು ಎಂದು ಯೋಚಿಸಿದ ಅವರು ಪ್ರಕರಣದ ದಿಕ್ಕು ತಪ್ಪಿಸುವ ಕೆಲಸ ಮಾಡಿದ್ದಾರೆ.




ಅದು ಏನೆಂದರೆ ನವಾಜ್ ತೆರಳಿದ್ದ ಕಾರನ್ನು ಸಮೀಪದ ಚರಂಡಿಗೆ ಮಗುಚಿ ಅಪಘಾತದಿಂದ ನವಾಜ್ ಮೃತಪಟ್ಟಿರುವ ಸನ್ನಿವೇಶವನ್ನು ಸೃಷ್ಟಿ ಮಾಡಿದ್ದಾರೆ. ಆದರೆ ತಡರಾತ್ರಿ ವಿಷಯ ತಿಳಿಯುತ್ತಿದ್ದಂತೆಯೇ, ಸ್ಥಳೀಯ ಕಾಫಿ ಕ್ಯೂರಿಂಗ್ ವರ್ಕ್ಸ್ ಮಾಲೀಕರು 112 ಪೊಲೀಸರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ಪೊಲೀಸರು ಆಗಮಿಸಿ ಅಂಗಾತ ಬಿದ್ದಿದ್ದ ನವಾಜ್‌ನನ್ನು ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಿದ್ದಾರೆ. ಮಾರಣಾಂತಿಕ ಹಲ್ಲೆಯಾದ ಹಿನ್ನಲೆಯಲ್ಲಿ ನವಾಜ್ ಅದಾಗಲೇ ಮೃತ ಪಟ್ಟಿದ್ದನು.

ಪ್ರಕರಣಕ್ಕೆ ಸಂಬಂಧಿಸಿದಂತೆ ವಿರಾಜಪೇಟೆ ಡಿವೈಎಸ್ಪಿ ಮಹೇಶ್‌ಕುಮಾರ್, ಗೋಣಿಕೊಪ್ಪ ವೃತ್ತ ನಿರೀಕ್ಷಕ ಶಿವರಾಜ್ ಮುಧೋಳ್, ಗೋಣಿಕೊಪ್ಪ ಠಾಣಾಧಿಕಾರಿ ಪ್ರದೀಪ್‌ಕುಮಾರ್, ಪೊನ್ನಂಪೇಟೆ ಠಾಣಾಧಿಕಾರಿ ನವೀನ್‌ಕುಮಾರ್ ಹಾಗೂ ಸಿಬ್ಬಂದಿ ಘಟನಾ ಸ್ಥಳಕ್ಕೆ ತೆರಳಿ ಸ್ಥಳೀಯವಾಗಿ ಲಭಿಸಿರುವ ಸಿಸಿ ಕ್ಯಾಮರ ಫೂಟೇಜ್‌ಗಳನ್ನು ಪರಿಶೀಲನೆ ನಡೆಸಿ, ಶ್ವಾನದಳ, ಬೆರಳಚ್ಚು ತಜ್ಞರನ್ನು ಬರ ಮಾಡಿಕೊಂಡು ಸೂಕ್ತ ಸಾಕ್ಷ್ಯದಾರಗಳನ್ನು ಸಂಗ್ರಹಿಸಿದ್ದಾರೆ.

ಈ ಸಂಬಂಧ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಯ ವೈದ್ಯರು ಮರಣೋತ್ತರ ಪರೀಕ್ಷೆ ನಡೆಸಿದ ತರುವಾಯ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಿದ್ದಾರೆ. ಪ್ರಕರಣಕ್ಕೆ ಸಂಬಂಧ ಪಟ್ಟಂತೆ ಇದೀಗ ಕಾವ್ಯ, ಪೂರ್ಣಚಂದ್ರ, ಅಶೋಕ, ಮಹೇಂದ್ರ, ಕುಮಾರನನ್ನು ಬಂಧಿಸಿ ಜೈಲಿಗೆ ಅಟ್ಟಿದ್ದಾರೆ. ಅಂತು ಪರಸ್ತ್ರೀ ವ್ಯಾಮೋಹಕ್ಕೆ ಬಿದ್ದ ನವಾಜ್ ತನ್ನ ಪ್ರಾಣವನ್ನು ಕಳೆದುಕೊಂಡ, ತನ್ನನ್ನು ನಂಬಿದ ಹೆಂಡತಿ ಮಗಳನ್ನು ಅನಾಥರನ್ನಾಗಿ ಮಾಡಿರುವುದು ದುರಂತ. ☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 4.1.2026

# ವೃಷಭ ಸಿನಿಮಾ ಬಜೆಟ್ ಎಪ್ಪತ್ತು ಕೋಟಿ ಟೋಟಲ್ ಕಲೆಕ್ಷನ್ ಒಂದೂವರೆ ಕೋಟಿ...

ಮೋಹನ್‌ಲಾಲ್ ಅಭಿನಯದ 'ವೃಷಭ' ಸಿನಿಮಾ 70 ಕೋಟಿ ಬಜೆಟ್ ಹೊಂದಿದ್ದು, ವಿಶ್ವದಾದ್ಯಂತ ಕೇವಲ 1.5 ಕೋಟಿ ರೂಪಾಯಿ ಗಳಿಸಿ ದೊಡ್ಡ ದುರಂತ ಕಂಡಿದೆ. ಸ್ಟಾರ್ ಹೀರೋ ಇದ್ದರೂ ಸಿನಿಮಾ ಹೀನಾಯವಾಗಿ ಸೋತಿದೆ. ಹಳೆಯ ಕಥೆ ಮತ್ತು ನಿರೂಪಣಾ ಶೈಲಿ ಜನರನ್ನು ಸೆಳೆಯುವಲ್ಲಿ ವಿಫಲವಾಗಿರುವುದು ಇದಕ್ಕೆ ಮುಖ್ಯ ಕಾರಣ. ನಿರ್ಮಾಪಕರಿಗೆ ಅಪಾರ ನಷ್ಟ ಉಂಟಾಗಿದೆ.




ಸ್ಟಾರ್ ಹೀರೋಗಳು ಸಿನಿಮಾದಲ್ಲಿ ನಟಿಸಿದ್ದಾರೆ ಎಂದರೆ ಬಹುತೇಕ ಸಂದರ್ಭಗಳಲ್ಲಿ ಹಾಕಿದ ಬಂಡವಾಳ ಮರಳಿ ಬರುತ್ತದೆ ಎಂಬ ನಂಬಿಕೆ ನಿರ್ಮಾಪಕರಿಗೆ ಇರುತ್ತದೆ. ನಿರ್ಮಾಪಕರು ಸೇಫ್ ಆಗುತ್ತಾರೆ. ಸಲ್ಮಾನ್ ಖಾನ್, ದಳಪತಿ ವಿಜಯ್, ರಜನಿಕಾಂತ್ ಸೇರಿದಂತೆ ಅನೇಕರ ಸಿನಿಮಾ ವಿಮರ್ಶೆಯಲ್ಲಿ ಸೋತರೂ ಒಳ್ಳೆಯ ಗಳಿಕೆ ಮಾಡಿದ ಉದಾಹರಣೆ ಇದೆ. ಈಗ 'ವೃಷಭ' ಸಿನಿಮಾದಲ್ಲಿ ಅದು ಸುಳ್ಳಾಗಿದೆ. ಡಿಸೆಂಬರ್ 25ರಂದು ರಿಲೀಸ್ ಆದ ಮೋಹನ್ ಲಾಲ್ ಅಭಿನಯದ ಈ ಚಿತ್ರದ ಬಜೆಟ್ 70 ಕೋಟಿ ರೂಪಾಯಿ. ಭಾರತದ ಒಟ್ಟಾರೆ ಗಳಿಕೆ ಒಂದೂವರೆ ಕೋಟಿ ರೂಪಾಯಿ.

ಕನ್ನಡದ ನಂದ ಕಿಶೋರ್ ಅವರು 'ವೃಷಭ' ಚಿತ್ರಕ್ಕೆ ನಿರ್ದೇಶನ ಮಾಡಿದ್ದಾರೆ. ಈ ಮೊದಲು ಅವರು ಕನ್ನಡದಲ್ಲಿ 'ಪೊಗರು' ರೀತಿಯ ಸಿನಿಮಾಗಳನ್ನು ನೀಡಿದ್ದಾರೆ. ಈಗ ಅವರು ಮಲಯಾಳಂಗೆ ತೆರಳಿದ್ದು ಅಲ್ಲಿ ನಿರೀಕ್ಷಿತ ಮಟ್ಟದ ಗೆಲುವು ಸಿಕ್ಕಿಲ್ಲ. ಸಿನಿಮಾದಲ್ಲಿ ಮೋಹನ್‌ಲಾಲ್ ಜೊತೆ ಕನ್ನಡದವರಾದ ಸಮರ್ಜಿತ್ ಲಂಕೇಶ್, ರಾಗಿಣಿ ದ್ವಿವೇದಿ, ಗರುಡ ರಾಮ್ ಮೊದಲಾದವರು ನಟಿಸಿದ್ದಾರೆ.

'ವೃಷಭ' ಸಿನಿಮಾ ಪುನರ್ಜನ್ಮದ ಕಥೆಯನ್ನು ಹೊಂದಿದೆ. ಈ ಸಿನಿಮಾದಲ್ಲಿ ರಾಜರ ಕಥೆ ಕೂಡ ಬರುತ್ತದೆ. ಹೀಗಾಗಿ, ಅದ್ದೂರಿ ಸೆಟ್‌ಗಳ ನಿರ್ಮಾಣ ಮಾಡಲಾಗಿತ್ತು. ಇದಕ್ಕೆ ಸಾಕಷ್ಟು ಹಣ ವ್ಯಯಿಸಲಾಗಿದೆ. ಒಂದು ಅಂದಾಜಿನ ಪ್ರಕಾರ ಸಿನಿಮಾದ ಬಜೆಟ್ 70 ಕೋಟಿ ರೂಪಾಯಿ. ಈ ಸಿನಿಮಾ ಭಾರತದ ಒಟ್ಟೂ ಕಲೆಕ್ಷನ್ 1.60 ಕೋಟಿ ರೂಪಾಯಿ ಆಸುಪಾಸಿನಲ್ಲಿದೆ. ವಿಶ್ವ ಮಟ್ಟದಲ್ಲಿ ಚಿತ್ರದ ಗಳಿಕೆ 2 ಕೋಟಿ ರೂಪಾಯಿ ಆಗಿದೆ ಎನ್ನಲಾಗಿದೆ. ಅಂದಹಾಗೆ ಈ ಸಿನಿಮಾಗೆ ಒಬ್ಬರಲ್ಲ, ಇಬ್ಬರಲ್ಲ ಬರೋಬ್ಬರಿ 9 ನಿರ್ಮಾಪಕರಿದ್ದಾರೆ. ಬಾಲಿವುಡ್‌ನ ಏಕ್ತಾ ಕಪೂರ್, ಶೋಭಾ ಕಪೂರ್ ಸೇರಿದಂತೆ ಅನೇಕರು ಹಣ ಹೂಡಿದ್ದಾರೆ. ಹಾಕಿದ ಹಣಕ್ಕೆ ಸಾಕಷ್ಟು ನಷ್ಟ ಉಂಟಾಗಿದೆ.



ಸಿನಿಮಾದ ಕಥೆ ಹಾಗೂ ಮೇಕಿಂಗ್ ವಿಷಯದಲ್ಲಿ ಹಳೆಯ ಟೆಕ್ನಿಕ್ ಬಳಸಲಾಗಿದೆ. ಈ ಕಾರಣಕ್ಕೆ ಜನರಿಗೆ ಸಿನಿಮಾ ಇಷ್ಟ ಆಗಿಲ್ಲ. ಸಿನಿಮಾದ ಕಥೆಯಲ್ಲಿ ಗಟ್ಟಿತನ ಇಲ್ಲ. ನಿರೂಪಣೆ ಕೂಡ ಅಷ್ಟು ಉತ್ತಮವಾಗಿಲ್ಲ. ಈ ಎಲ್ಲಾ ಕಾರಣದಿಂದ ಸಿನಿಮಾ ಇಷ್ಟು ಹೀನಾಯ ಕಲೆಕ್ಷನ್ ಕಂಡಿದೆ! ಅಂದಹಾಗೆ, ವೃಷಭ ನಿರ್ದೇಶಕ ನಂದಕಿಶೋರ್ ಇಲ್ಲಿ ಕೆಲವರಿಗೆ ದೋಖಾ ಮಾಡಿ 420 ಕೇಸ್ ಹೆಟ್ಟಿಸಿಕೊಂಡು ಕೋರ್ಟ್‌ಗೆ ಅಲೆಯುತ್ತಿದ್ದಾರೆ.ಇಲ್ಲಿ ಒಂದೇ ಒಂದು ಸಿನಿಮಾ ಸಿಗುತ್ತಿಲ್ಲ. ಸೋದರ ತರುಣ್ ಆಗಲಿ ಅಮ್ಮ ಮಾಲತಿ ಅವರಾಗಲಿ ಈತನನ್ನು ಹತ್ತಿರ ಬಿಟ್ಟುಕೊಳ್ಳುತ್ತಿಲ್ಲ.





ಸ್ವಂತ ಮನೆಯಲ್ಲೇ ಹೆಸರು ಕೆಡಿಸಿಕೊಂಡಿರೋ ನಂದನಿಗೆ ಯಾರೂ ಸಿನಿಮಾ ಕೊಡ್ತಿಲ್ಲ. ಹೀಗಿರುವಾಗ, ಈ ಕಿಲಾಡಿ ಅದೇಗೆ ತಾನೇ ಮೋಹನ್ ಲಾಲ್ ಅವರನ್ನು ಏಮಾರಿಸಿ ವೃಷಭ ಮಾಡಿದ ಅನ್ನೋದೇ ಯಕ್ಷ ಪ್ರಶ್ನೆ! ☯

# ಟ್ರೇಲರ್‌ನಲ್ಲೇ ಕುತೂಹಲ ಮೂಡಿಸಿದೆ 'ಮಾಜರ್'

ಸಂಗೀತ ಸಿನಿ ಹೌಸ್ ಲಾಂಛನದಲ್ಲಿ ಡಾ|| ಮುರುಗನಂದನ್ ಎಮ್(ಪುಲಿಮುರುಗನ್) ಅವರು ನಿರ್ಮಿಸಿರುವ, ಲೋಕಲ್ ಲೋಕಿ ನಿರ್ದೇಶನದೊಂದಿಗೆ ಪ್ರಮುಖಪಾತ್ರದಲ್ಲೂ ನಟಿಸಿರುವ 'ಮಾಜರ್'ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. ಅಲ್ಲದೆ ಟ್ರೇಲರ್ ಸಾಕಷ್ಟು ಕುತೂಹಲ ಮೂಡಿಸಿದೆ. ಟ್ರೇಲರ್ ಬಿಡುಗಡೆ ನಂತರ ನಿರ್ದೇಶಕ ಲೋಕಿ (ಲೋಕಲ್ ಲೋಕಿ) ಮಾತನಾಡಿದ್ದಾರೆ.

ದೇಶದಲ್ಲಿ ನಾನು ಕಂಡಿರುವ ನಿರ್ಭಯ ಹತ್ಯೆ ಮೊದಲಾದ ದುರಂತಗಳೆ ಈ ಕಥೆ ಬರೆಯಲು ಮುಖ್ಯ ಕಾರಣ. ಇಂತಹ ಕೃತ್ಯಗಳನ್ನು ಪ್ರತಿಯೊಬ್ಬರು ಖಂಡಿಸಬೇಕು. ಹೆಣ್ಣುಮಕ್ಕಳಿಗೆ ನ್ಯಾಯ ಸಿಗಬೇಕು ಎಂಬುದೆ 'ಮಾಜರ್' ಚಿತ್ರದ ಮುಖ್ಯ ಉದ್ದೇಶ. ನಾನು ಈ ಚಿತ್ರವನ್ನು ನಿರ್ದೇಶಿಸುವುದರ ಜೊತೆಗೆ ಮುಖ್ಯಪಾತ್ರದಲ್ಲಿ ಅಭಿನಯ ಕೂಡ ಮಾಡಿದ್ದೇನೆ. ಮುರುಗನಂದನ್ ಅವರು ನಿರ್ಮಾಣ ಮಾಡಿದ್ದಾರೆ. ಎ.ಟಿ. ರವೀಶ್ ಸಂಗೀತ ನಿರ್ದೇಶನ, ರಾಜೇಶ್ ರಾಮನಾಥ್ ಹಿನ್ನಲೆ ಸಂಗೀತ ಹಾಗೂ ಗಗನ್ ಗೌಡ, ವಿನಯ್ ಗೌಡ, ಜಗನ್ ಬಾಬು ಅವರ ಛಾಯಾಗ್ರಹಣ 'ಮಾಜರ್' ಚಿತ್ರಕ್ಕಿದೆ. ಶ್ರೀಹಾನ್, ದೀಪಕ್, ಉಗ್ರಂ ರವಿ, ಸಂಭ್ರಮಶ್ರೀ, ರಾಜು, ರಂಜನ್, ಅಜಯ್ ಶರ್ಮ ಮುಂತಾದವರು ಈ ಚಿತ್ರದಲ್ಲಿ ನಟಿಸಿದ್ದಾರೆ. ಜನವರಿ 15 ರ ಸಂಕ್ರಾಂತಿ ದಿನದಂದು ನಮ್ಮ ಚಿತ್ರ ಬಿಡುಗಡೆಯಾಗಲಿದೆ ಎಂದು ನಿರ್ದೇಶಕ ಲೋಕಲ್ ಲೋಕಿ ತಿಳಿಸಿದ್ದಾರೆ.




ಇನ್ನೂ ನಿರ್ಮಾಪಕ ಮುರುಗ ನಂದನ್ ಮಾತನಾಡಿ, ನಾನು ಉದ್ಯಮಿ ಹಾಗೂ ರಾಜಕಾರಣಿ. ಚಿತ್ರ ನಿರ್ಮಾಣ ಮಾಡಬೇಕೆಂಬುದು ನನಗೆ ಮೊದಲಿನಿಂದಲೂ ಆಸೆ. ಅದು ಈ ಚಿತ್ರದ ಮೂಲಕ ಈಡೇರಿದೆ. ನನ್ನ ನಿರ್ಮಾಣದ ಮೊದಲ ಚಿತ್ರಕ್ಕೆ ನಿಮ್ಮೆಲ್ಲರ ಪ್ರೋತ್ಸಾಹವಿರಲಿ... ಎಂದಿದ್ದಾರೆ. ನಟಿ ಸಂಭ್ರಮಶ್ರೀ ಮಾತನಾಡಿ, ಹೆಣ್ಣು ಮಕ್ಕಳ ಮೇಲೆ ನಡೆಯುವ ದೌರ್ಜನ್ಯವನ್ನು ತೆರೆಯ ಮೇಲೆ ನೋಡಿದಾಗಲೇ ಇಷ್ಟು ಭಯ ಆಗತ್ತೆ. ಇನ್ನೂ ಅನುಭವಿಸಿದವರ ಕಷ್ಟ ನೆನೆಸಿಕೊಳ್ಳಲು ಆಗುವುದಿಲ್ಲ. ಹೆಣ್ಣುಮಕ್ಕಳ ಮೇಲೆ ನಡೆಯುವ ದೌರ್ಜನ್ಯ ಕೊನೆಯಾಗಬೇಕು ಎಂದಿದ್ದಾರೆ.

ಇನ್ನೂ, ಈ ಚಿತ್ರದಲ್ಲಿ ನಟಿಸಿರುವ ಶ್ರೀಹಾನ್, ದೀಪಕ್, ಅಜಯ್ ಶರ್ಮ, ರಾಜು, ರಂಜನ್, ಉಗ್ರಂ ರವಿ ಹಾಗೂ ನೃತ್ಯ ನಿರ್ದೇಶಕಿ ಗೀತಾ ಮತ್ತು ನೃತ್ಯ ನಿರ್ದೇಶಕ ರಂಜನ್ 'ಮಾಜರ್' ಕುರಿತು ತಮ್ಮದೇ ಅನುಭವ ಹಂಚಿಕೊಂಡು ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. ಒಟ್ಟಾರೆ, ಮಾಜರ್ ಬಿಡುಗಡೆಗೂ ಮುನ್ನವೇ ಕೇವಲ ಟ್ರೇಲರ್‌ನಿಂದಲೇ ಕುತೂಹಲ ಕೆರಳಿಸಿದೆ!! ☯

# ದಿ ಟಾಸ್ಕ್ ಇನ್ ಟಾಲಿವುಡ್!

ರಾಘು ಶಿವಮೊಗ್ಗ ನಿರ್ದೇಶನದ ಕೋವಿಡ್ ಅಕ್ರಮದ ಮೆಡಿಸಿನ್ ಕ್ರೈಂ ಥ್ರಿಲ್ಲರ್ 'ದಿ ಟಾಸ್ಕ್' ಇಲ್ಲಿ 25 ದಿನ ಯಶಸ್ವಿ ಓಟವನ್ನು ಪೂರೈಸಿದ ಬೆನ್ನಲ್ಲೇ ಇದೀಗ ತೆಲುಗಿನಲ್ಲಿ ಬಿಡುಗಡೆ ಕಾಣುತ್ತಿದೆ. ಅಲ್ಲಿ ತೆಲುಗಿನಲ್ಲಿ ಪ್ರಖ್ಯಾತ ನಿರ್ದೇಶಕ ಮುತ್ಯಾಲ ಸುಬ್ಬಯ್ಯ ನವರ ಮಗ ಅನಂತ ಕಿಶೋರ್ ಈ ಚಿತ್ರವನ್ನ ಬಲು ಅದ್ದೂರಿಯಾಗಿ ಬಿಡುಗಡೆ ಮಾಡಲು ಮುಂದಾಗಿದ್ದಾರೆ.




ಜೈ ಸೂರ್ಯ ಆರ್ ಅಜಾದ್ ಮತ್ತು ಸಾಗರ್ ರಾವ್ ಅಭಿನಯದ 'ದಿ ಟಾಸ್ಕ್' ನಿಜಕ್ಕೂ ಸಮಾಜದ ಕಣ್ಣು ತೆರೆಸುವ ಚಿತ್ರವಾಗಿತ್ತು. ಒಳ್ಳೆಯ ಕತೆ, ಚಿತ್ರಕತೆ. ಆದರೆ, ಇಲ್ಲಿನ ಜನರಿಗೆ ತೊಡೆಸೊಂಟ ದ ಮೇಲಿರುವ ವ್ಯಾಮೋಹ ಸತ್ಯಕತೆಗಳ ಮೇಲಿರುವುದಿಲ್ಲ! ಹೀಗಾಗಿ, 25 ದಿನಕ್ಕೆ ಥಿಯೇಟರ್ ಬಿಟ್ಟುಕೊಡಬೇಕಾದ ಅನಿವಾರ್ಯ! ದಿ ಟಾಸ್ಕ್ ಅಲ್ಲಾದರೂ ಯಶಸ್ವಿಯಾಗಿ ಜನ ಮನ್ನಣೆಗಳಿಸಲಿ ಎಂಬುದು ನಮ್ಮ ಹಾರೈಕೆ. ☯

Vol. 41 No. 31 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 cenewsreporter@gmail.com
http//policenews.news https://www.facebook.com/profile.php?id=61579674874846 ttps://www.instagram.com/police_news?igsh=MWJ6bHJwZDRmZDc1aQ==